ಸಂಚಿಕೆ ೮೩

ಸಂಚಯ

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ




ಸಂಚಿಕೆಯ ಗ್ಯಾಲರಿ



ಅಪ್ರತಿಮ ಕಪ್ಪು-ಬಿಳುಪು ಛಾಯಾಚಿತ್ರಕಾರ ಟಿ.ಎಸ್. ಸತ್ಯನ್ ಅವರ ಕೆಲವು ಐತಿಹಾಸಿಕ ಛಾಯಾಚಿತ್ರಗಳು— ಅವರ ನೆನಪಿಗೊಂದು ಶ್ರದ್ಧಾಂಜಲಿಯಾಗಿ.

1928 - 2009



ಸಿ.ವಿ.ರಾಮನ್ ಅಧ್ಯಾಪನದಲ್ಲಿ...

ಸಂಚಯ

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ

ದ್ವೈಮಾಸಿಕ ■ ಸಂಪುಟ : ೧೮ ■ ಸಂಚಿಕೆ : ೬(೮೩)

ನವೆಂಬರ್-ಡಿಸೆಂಬರ್ ೨೦೦೯

ಸಂಪಾದಕ :

ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯರಸ್ತೆ
೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ
ಬೆಂಗಳೂರು - ೫೬೦ ೦೮೫
ಫೋನ್ ನಂ.:೦೮೦-೨೬೭೯೧೯೨೫
ಮೊಬೈಲ್: ೯೮೪೪೦೬೩೫೧೪

email:
prahlad118@yahoo.com

ಗೆದ್ದು ತರುವಂಥದ್ದು ಆಚೆ ನೆಗೆಯುವ ಬದುಕು;
ನಟನೆಗಿದ್ದದ್ದಷ್ಟೇ ಸಾಕು ಸಾಕು

– ಗೋಪಾಲಕೃಷ್ಣ ಅಡಿಗ

ಚಂದಾವಿವರ

ವಾರ್ಷಿಕ ಚಂದಾ :
ರೂ. ೨೫೦/-

ಎರಡು ವರ್ಷಕ್ಕೆ :
ರೂ. ೫೦೦/-



ರೇಖಾಚಿತ್ರಗಳು:
ಎಸ್.ಎಫ್.ಹುಸೇನಿ

ಮುಖಪುಟ: ಡಿ.ಕೆ.ರಮೇಶ್

ಮುಖಪುಟ ಮತ್ತು
ಪುಟ ವಿನ್ಯಾಸ:
ಎಂ.ಆರ್. ಗುರುಪ್ರಸಾದ್

ಈ ಸಂಚಿಕೆಯಲ್ಲಿ...

ಸಾಹಿತ್ಯಸ್ಪರ್ಧೆ - ೨೦೦೯ ಬಹುಮಾನಿತ ಲೇಖನಗಳು

ಲೇಖನಗಳು

ಹೊಳೆದದ್ದು ತಾರೆ ಉಳಿದದ್ದು ಆಕಾಶ !

ಪ್ರಿಯ ಓದುಗ

ನಮ್ಮ ನಾಡಿನ ಇತರ ಭಾಗಗಳಲ್ಲಿ ಮಾಗಿಯ ಛಳಿ ಅಷ್ಟೊಂದು ಕಾಡದಿದ್ದರೂ ಅಕಾಲದ ಮಳೆಯ ಕಾರಣಕ್ಕೋ ಏನೋ ಬೆಂಗಳೂರಿನ ಛಳಿ ತೀವ್ರವಾಗಿದೆ. ಹೊತ್ತಿಗೆ ಮೊದಲೇ ಕತ್ತಲು ದಟ್ಟೈಸುತ್ತದೆ. ನನ್ನ ಎದುರಿಗಿದ್ದಾಕೆ ಗುಜರಾತಿನ ಯುವ ಲೇಖಕಿ. ಸಾಹಿತ್ಯ ಅಕಾಡೆಮಿಯ ಯೋಜನೆಯೊಂದರ ಭಾಗವಾಗಿ ನಮ್ಮೂರಿಗೆ ಬಂದವಳು. ಇಲ್ಲಿನ ಹೊಸ ತಲೆಮಾರಿನ ಕವಿಗಳ ಬಗೆಗೆ ಸಾಹಿತ್ಯದ ಬಗೆಗೆ ತಿಳಿದುಕೊಳ್ಳುವ ಆಸಕ್ತಿ. ಕನ್ನಡಕ್ಕಿದ್ದ ಹಾಗೆ ಗುಜರಾತಿ ಸಾಹಿತ್ಯಕ್ಕೂ ವಿವಿಧ ಪಂಥಗಳು ಸಾಹಿತ್ಯದ ಚಳುವಳಿಗಳೂ ಇವೆ. ಸಾಕಷ್ಟು ದೊಡ್ಡ ಇತಿಹಾಸವೇ ಅದು. ಈಚೆಗೆ ಎಪ್ಪತ್ತರ ದಶಕದ ನಂತರ ದಲಿತ ಸಾಹಿತ್ಯ ಮತ್ತು ಮಹಿಳಾ ಸಾಹಿತ್ಯಗಳು ಇತರ ಭಾರತೀಯ ಭಾಷೆಗಳಲ್ಲಿ ಬಲಗೊಂಡ ಹಾಗೇ ಪ್ರಬಲವಾಗಿವೆ. ಗುಜರಾತಿ ಭಾಷೆಯ ಜನರ ನಗರ ಸಂವೇದನೆಯ ಕಾವ್ಯ ಕುರಿತು ಆಕೆ ವಿಶೇಷವಾಗಿ ಪ್ರಸ್ತಾಪಿಸಿದಳು. ಗುಜರಾತಿನ ನಗರಗಳ ಬದುಕಿನ ವಿವರಗಳು ಸಂದಿಗ್ಧಗಳು ಆ ಕಾವ್ಯದಲ್ಲಿ ಬಿಂಬಿತವಾಗಿದೆ. ಅದೇ ಒಂದು ಅಧ್ಯಯನಕ್ಕೆ ಸಾಮಗ್ರಿಯಾಗಬಲ್ಲಷ್ಟು ಪ್ರಬಲವಾಗಿದೆ. ನಾನು ನಮ್ಮ ಬೆಂಗಳೂರು ಬಿಟ್ಟರೆ ಇತರೆ ನಗರಗಳು ಕರ್ನಾಟಕದಲ್ಲಿ ಇನ್ನೂ ಪಟ್ಟಣಗಳು ಈಚೆಗಷ್ಟೇ ಅವುಗಳೂ ಬೆಳೆಯತೊಡಗಿವೆ, ಬೆಂಗಳೂರೇ ಕರ್ನಾಟಕವಾಗಿಬಿಟ್ಟು ಬೆಳೆದಿರುವ ಬಗ್ಗೆ ಸಂಕೋಚದಿಂದ ಹಂಚಿಕೊಂಡೆ. ನಮ್ಮ ಈಗಿನ ಅನೇಕ ಕವಿಗಳು ನಗರಗಳಲ್ಲೇ ಬದುಕಿದ್ದರೂ ಬರೆಯುವುದು ಮಾತ್ರ ತಂತಮ್ಮ ಪೂರ್ವಾಶ್ರಮದ ಹಳ್ಳಿಗಳ ಬಗ್ಗೆಯೇ ಅಂದೆ. ಹಿಂದ್ ಸ್ವರಾಜ್ ಸಂಚಿಕೆ ಕೊಟ್ಟು ಆ ಕುರಿತು ಹೇಳಿದೆ, ಆಕೆ ಅದರ ಚಿತ್ರಗಳನ್ನಷ್ಟೇ ಆಸ್ವಾದಿಸಲು ಸಾಧ್ಯವಿತ್ತು. ಗಾಂಧಿ ನಂತರದ ಗುಜರಾತಿ ಸಾಹಿತ್ಯಕ್ಕೆ ಅದರದ್ದೇ ಆದ ಒಂದು ವಿಶಿಷ್ಟ ಗುಣವಿದೆ ಅದರ ಪ್ರಭಾವಕ್ಕೆ ಒಳಗಾಗಿ ಅನೇಕ ಲೇಖಕರು ಬರೆದಿದ್ದಾರೆ. ಆದರೆ ಈಗಿನ ಸ್ಥಿತಿಯಲ್ಲಿ ಲೇಖಕರಿಗೂ ಪ್ರಭುತ್ವಕ್ಕೂ ಅಂತರ ಜಾಸ್ತಿ ಅಂದಳು. ಪರಸ್ಪರ ಸಮಾನಾಂತರ ರೇಖೆಗಳ ಹಾಗೆ ಸಂಬಂಧ ರಹಿತವಾಗಿದೆ ಅಂದಳು. ಮೋದಿ


ಸರ್ಕಾರದ ಬಗ್ಗೆ ಲೇಖಕರ ಪ್ರತಿಕ್ರಿಯೆ ಹೇಗೆ ಅಂದದ್ದಕ್ಕೆ ಪರ-ವಿರೋಧ ಎರಡೂ ಇದೆ. ಎಲ್ಲಾ ಲೇಖಕರೂ ತಂತಮ್ಮೊಳಗೇ ನಿಮಗ್ನರು. ನಿಮ್ಮ ಕನ್ನಡ ಕಾವ್ಯ ಸಾಹಿತ್ಯಕ್ಕಿರುವ ಪ್ರಖರ ರಾಜಕೀಯ ಪ್ರಜ್ಞೆ ನಮ್ಮಲ್ಲಿಲ್ಲ. ಪಾರ್ಟಿಶನ್ ಬಗ್ಗೆ ಕೂಡ ಗುಜರಾತಿಯಲ್ಲಿ ಅಂಥ ಮಹತ್ವದ ಕೃತಿ ಬಂದಿಲ್ಲ. ನಮ್ಮ ಹಾಗೆ ನಿಮ್ಮಲ್ಲೂ ಆತ್ಮಕತೆಗಳು ಇಲ್ಲ. ಆದರೆ ಮರಾಠಿಯಲ್ಲಿ ಅವುಗಳ ಸಂಖ್ಯೆ ಗುಣಾತ್ಮಕತೆ ವಿಭಿನ್ನ ಅಂದಳು. ರಾಜಕೀಯ ಪ್ರಜ್ಞೆಯ ಬಗೆಗಿನ ಮಾತಿಗೆ ಕಾರಂತ, ಅಡಿಗ, ಲಂಕೇಶ, ಚಂಪಾ ಮುಂತಾದವರ ರಾಜಕೀಯ ನಿಲುವು ಹೇಳಿ ಅಡಿಗರ 'ನೆಹರೂ ನಿವೃತ್ತರಾಗುವುದಿಲ್ಲ' ಮತ್ತು ಪ್ರಾರ್ಥನೆ ಕವಿತೆ ಕುರಿತ ವಿವಾದ ವಿವರಿಸಿದೆ. ಪಕ್ಕಾ ಬೆಂಗಳೂರಿಗಳ ಹಾಗೆ ಕಾಫಿ ಹೀರುತ್ತ ಅದನ್ನ ಸವಿದ ಆಕೆ ಖುಷಿಪಟ್ಟಳು. ಓದಲಿಕ್ಕೆ ಅದರ ಇಂಗ್ಲಿಷ್ ಅನುವಾದ ಬೇಕೆಂದಳು. ಎಕ್ಕುಂಡಿ, ಮಾಸ್ತಿ ಬೇಂದ್ರೆ, ಸಿದ್ದಲಿಂಗಯ್ಯ, ದೇವನೂರು ಇವರುಗಳ ಬಗ್ಗೆ ಅಭಿಮಾನದಿಂದ ಹೇಳಿದ್ದನ್ನ ಗುರುತು ಹಾಕಿಕೊಂಡಳು. ಈಗಿನ ಹೊಸ ಕವಿಗಳ ಕವಿತೆಯ ಮುಖ್ಯ ಲಕ್ಷಣಗಳ ಬಗ್ಗೆ ಮುಂಚೂಣಿಯಲ್ಲಿ ಈಗ ಚಳುವಳಿಗಳಿಲ್ಲ. ಹಾಗೆ ಥಳಾಗಿ ಕಾಣುವ ಗುಣ ಇಲ್ಲವೆನ್ನಲು ತುಂಡು ತುಂಡು ವಾಕ್ಯಗಳು ಬಲು ತೊಂದರೆ ಕೊಟ್ಟಿತು.

ನಿಮ್ಮಲ್ಲಿ ಯಾವುದರ ಅನುವಾದ ಜಾಸ್ತಿ ಅಂದಳು. ಕಣ್ಣು ಮುಚ್ಚಿ ಇಂಗ್ಲಿಷ್ ಅಂದೆ. ನಾವು ನಡೆಮುಡಿ ಹಾಸಿ ಪಶ್ಚಿಮದ ವಿಚಾರ, ಭಾಷೆಗಳನ್ನು ಸಾಹಿತ್ಯ-ಸಾಹಿತಿಗಳನ್ನು ನಮ್ಮದಾಗಿಸಿಕೊಂಡ ಹಾಗೆ ಇತರ ಪೂರ್ವದ ಅಷ್ಟೇಕೆ ಭಾರತದ ಸೋದರ ಭಾಷೆಗಳಿಂದಲೂ ಕೊಡು-ಕೊಂಡಿದ್ದು ಕಡಿಮೆಯೇ. ಒಟ್ಟಾರೆ ಅನುವಾದ ಒಂದು ದ್ವಿತೀಯ ದರ್ಜೆಯ ಕೆಲಸ ಎಂಬ ನಂಬಿಕೆ ನಮ್ಮಲ್ಲಿ ಗಾಢವಾಗಿದೆ. ಈಚೆಗೆ ಕೆಲವು ಚೀನೀ, ಜಪಾನಿ, ಕತೆ-ಕಾದಂಬರಿಗಳು ತೆಲುಗು, ತಮಿಳು ಕವಿತೆಗಳು, ಕೆಲವು ಆತ್ಮಕತೆಗಳು ಪ್ರಕಟಗೊಳ್ಳುತ್ತಿದೆ. ಅವುಗಳ ಸಂಖ್ಯೆಯ ಬಾಹುಳ್ಯ ಅವುಗಳಿಗೆ ದೊರಕಬೇಕಿರುವ ಸಾಹಿತ್ಯಕ ಮನ್ನಣೆ, ಪ್ರಾಮುಖ್ಯತೆ ದೊರಕುತ್ತಿಲ್ಲ. ಮೊದಲ ತಲೆಮಾರಿನ ಅನುವಾದಕರಾದ ಗಳಗನಾಥ, ಅಹೋಬಲಶಂಕರ, ಎ.ಆರ್.ಕೃಷ್ಣಶಾಸ್ತ್ರಿ, ಸಾವಿತ್ರಮ್ಮ ಮುಂತಾದವರು ನೇರ ಬಂಗಾಳಿ, ಹಿಂದಿ ಮುಂತಾದ ಭಾಷೆ ಕಲಿತು ಅನುವಾದಗಳನ್ನ ಕೈಗೊಂಡವರು. ಈಗಿನದ್ದು ಇಂಗ್ಲಿಷಿನ ಫಿಲ್ಟರ್ ಮೂಲಕ ತನ್ನ ಗುಣ ಬನಿಯನ್ನು ಕಳೆದುಕೊಂಡು ಬರುತ್ತವೆ. ಆಕೆ ಕೇಳಿದಳು, 'ನಿಜ ಹೇಳಿ, ಕನ್ನಡದ ಹೊಸ ತಲೆಮಾರಿನ ಸಾಹಿತ್ಯ ಗುಜರಾತಿಗೆ ನಾನು ಅನುವಾದಿಸುವುದು ಸೂಕ್ತವೇ' ಅಂತ. ಕ್ಷಣವೂ ತಡಮಾಡದೆ ಹೇಳಿದೆ, 'ಹೌದು; ನಮ್ಮ ಹೊಸ ತಲೆಮಾರಿನ ಹುಡುಗ-ಹುಡುಗಿಯರ ಬರಹ ಇತರ ಭಾಷೆಗಳಿಗೂ ದಾಟಬೇಕು ಆಕೆ ಕೇಳಿದ್ದು 'ಗುಜರಾತಿ ಕನ್ನಡಕ್ಕೆ ಯಾಕೆ ಅಪರಿಚಿತ? ಬರೇ ಎರಡು ಪುಸ್ತಕಗಳು ಅನುವಾದಗೊಂಡಿವೆ. ಈಚಿನ ಗುಜರಾತಿ ಸಾಹಿತ್ಯ ಕನ್ನಡಕ್ಕೆ ಬರುವ ದಾರಿ ಯಾವುದು?' ನನ್ನಲ್ಲಿ ಉತ್ತರ ಖಚಿತವಾಗಿರಲಿಲ್ಲ

ದಟ್ಟೈಸಿದ ಕತ್ತಲಲ್ಲಿ ಆಕೆಯನ್ನು ಬೀಳ್ಕೊಟ್ಟು ಹೊರಟಾಗ ಛಳಿ ಇನ್ನೂ ಜಾಸ್ತಿಯಾಗಿತ್ತು. ಆಕೆಯ ಹೆಸರು ಬಾಯಿಗೆ ತಂದುಕೊಳ್ಳಲು ತಿಣುಕಾಡಿದೆ. ಆಕೆಯ ಕಾರ್ಡು ಜೇಬಿನೊಳಗಿತ್ತು. ತೆರೆದು ನೋಡಲಿಕ್ಕೆ ಕತ್ತಲು, ಈ ಸಲದ ಜನವರಿ ೩೧ರ 'ಕವಿದಿನ'ಕ್ಕೆ ಬೇರೆ ಭಾಷೆಯ ಲೇಖಕರೊಬ್ಬರನ್ನು ಅತಿಥಿಯಾಗಿ ಕರೆಯಬೇಕು ಅನ್ನುವ ನಿರ್ಧಾರ ಬಲವಾಗಿತ್ತು. ನಮ್ಮ ಪತ್ರಿಕೆಯ ಜನವರಿ ಸಂಚಿಕೆ ೨೦೦೯ರ ಆಯ್ದ ಕವಿತೆಗಳ ಗುಚ್ಛ ಅದನ್ನು ನಿನಗೂ ಕಳಿಸುವೆ, ಗಮನಿಸು ಅಂತ ಹೇಳಬೇಕೆಂದುಕೊಂಡ ಮಾತು ನನ್ನಲ್ಲೇ ಉಳಿದುಬಿಟ್ಟಿತ್ತು.

ಮುಂದಿನ ಸಂಚಿಕೆಯಲ್ಲಿ ಈ ಹೊತ್ತಿನ ಕವಿತೆಗಳೊಂದಿಗೆ
ನಿಮ್ಮ
ಸಂಪಾದಕ

ಸಾಹಿತ್ಯ ಸ್ಪರ್ಧೆ - ೨೦೦೯
ಬಹುಮಾನಿತ ಲೇಖನ



ಗಿರೀಶ್ ಕಾರ್ನಾಡರ 'ಮದುವೆಯ ಆಲ್ಬಮ್' ನಾಟಕ ವಿಮರ್ಶೆ

ಡಾ. ಬಿ.ಎ. ಅನ್ನದಾನೇಶ

೧. ನಾಟಕಕ್ಕೆ ಪ್ರೇರಣೆ ತಂತ್ರ ಮತ್ತು ಶೀರ್ಷಿಕೆ

೧೯೭೭ರಲ್ಲಿ ಕಾರ್ನಾಡರು 'ಅಂಜುಮಲ್ಲಿಗೆ' ಎಂಬ ಸಾಮಾಜಿಕ ನಾಟಕವನ್ನು ಬರೆದರೂ ಅದು ಪುರಾಣದ ಪ್ರಭಾವದಿಂದ ಬಿಡುಗಡೆಯಾಗಿರಲಿಲ್ಲ. ೨೦೦೪ರಲ್ಲಿ 'ಒಡಕಲು ಬಿಂಬ' ಹಾಗೂ ೨೦೦೬ರಲ್ಲಿ ಬರೆದ 'ಮದುವೆಯ ಆಲ್ಬಮ್' ನಾಟಕಗಳನ್ನು ಮಾತ್ರ ನಿಸ್ಸಂಶಯವಾಗಿ ಸಮಕಾಲೀನ ಜೀವದ ಬಗ್ಗೆ ಬರೆದ ಸಾಮಾಜಿಕ ನಾಟಕಗಳು ಎನ್ನಬಹುದು. ೧೯೬೧ ರಿಂದ ೨೦೦೬ರ ವರೆಗಿನ ನಾಲ್ಕು ದಶಕಗಳಲ್ಲಿ ಸಮಕಾಲೀನ ಸಂವೇದನೆಯ ಒಟ್ಟು ೧೩ ನಾಟಕಗಳನ್ನು ಕಾರ್ನಾಡರು ಬರೆದಿದ್ದಾರೆ.

ತಮ್ಮ ಕೆಲವು ನಾಟಕಗಳನ್ನು ಯಾರಾದರೊಬ್ಬರ ಕೋರಿಕೆಯ ಮೇರೆಗೆ ಬರೆದಿರುವಂತೆ, ತಮ್ಮ ಹೊಸ ನಾಟಕವಾದ 'ಮದುವೆಯ ಆಲ್ಬಮ್' ನಾಟಕವನ್ನು ಸಹಾ ಮನೋಹರ ಗ್ರಂಥಮಾಲೆಯ ಪ್ರಕಟನೆಗಾಗಿ ಬರೆದಿದ್ದಾರೆ. ರಮಾಕಾಂತ ಜೋಶಿಯವರು ಈ ವಿಷಯದ ಬಗ್ಗೆ ಹೀಗೆ ಹೇಳುತ್ತಾರೆ. 'ಈ ವರ್ಷ ಅವರು ತಮ್ಮ ಹೊಸ ನಾಟಕ 'ಲಗ್ನದ ಆಲ್ಬಂ' ಬರೆದು ಮುಗಿಸುವುದಾಗಿ ಹೇಳಿದ್ದರು. ಆದರೆ ಅದು ಪೂರ್ತಿಯಾಗಿ ತಯಾರಾಗದ ಕಾರಣ'[೧] ಅವರು ಈಗಾಗಲೇ ಬರೆದ ಎರಡು ಏಕಾಂಕಗಳಾದ 'ಮಾನಿಷಾದ' ಮತ್ತು 'ಬಿಂಬ'ವನ್ನು ಪ್ರಕಟಿಸಿದ್ದಾರೆ. 'ಕಳೆದ ೨೦-೩೦' ವರ್ಷಗಳಿಂದ ಬರೆಯುತ್ತಿದ್ದ ನಾಟಕವನ್ನು ಇದೀಗ ಪೂರ್ಣಗೊಳಿಸಿದ'[೨] ನಾಟಕ, 'ಮದುವೆಯ ಆಲ್ಬಮ್'ಗೆ ಪ್ರೇರಣೆಯಾದ ಘಟನೆಯನ್ನು ಕಾರ್ನಾಡರು ಒಂದು ಸಂದರ್ಶನದಲ್ಲಿ ಹೀಗೆ ಹೇಳಿದ್ದರು.

---

೧ ರಮಾಕಾಂತ ಜೋಶಿ – ಬಿಂಬ ಮತ್ತು ಇತರ ನಾಟಕಗಳು – ಪ್ರಕಾಶಕರ ಮಾತು.
೨ ರಮಾಕಾಂತ ಜೋಶಿ – ಬಿಂಬ ಮತ್ತು ಇತರ ನಾಟಕಗಳು – ಪ್ರಕಾಶಕರ ಮಾತು.

"ನಾನು ಈಗ ಯೋಜನೆ ಮಾಡುತ್ತಿರುವ ಹೊಸ ನಾಟಕ, ನನ್ನದೇ ಸಮಾಜಕ್ಕೆ ಸಂಬಂಧಿಸಿದ್ದು. ಸುಮಾರು ೨೦ ವರ್ಷಗಳ ಹಿಂದೆ ನನ್ನ ತಂದೆಯ ತಂಗಿಯ ಲಗ್ನ ಆಗಬೇಕಿತ್ತು. ಅಮೆರಿಕೆಯಿಂದ ಬಂದ ಸಾರಸ್ವತರ ಹುಡುಗ ಅವನು ಸುಶಿಕ್ಷಿತ. ನಮ್ಮ ಮನೆಯಲ್ಲೂ ಸುಶಿಕ್ಷಿತರು. ಯಾವುದೇ ಸಮಸ್ಯೆ ಇಲ್ಲದೆಯೇ ಮದುವೆ ಆಗಬೇಕಿತ್ತು. ಆದರೆ ಆಗಲಿಲ್ಲ, ವರದಕ್ಷಿಣೆ ಕೇಳ್ತಿರಲಿಲ್ಲ, ಮತ್ತಾವುದೇ ಸಮಸ್ಯೆ ಇರಲಿಲ್ಲ, ಮದುವೆ ಅಂದಾಕ್ಷಣ, ಒಂದು ಪರಿಸರ ಸೃಷ್ಟಿಯಾಗುತ್ತದೆ ನೋಡಿ, ಭಯಂಕರ Tensionನ ಗೌಜು-ಗದ್ದಲದ ಪರಿಸರ. ಅದರಲ್ಲಿ, ಯಾರಿಗೋ ಚಾ ಸಿಗ್ಲಿಲ್ಲ, ಇನ್ನಾರಿಗೋ ಮನೆತನದ ಹೊಟ್ಟೆಕಿಚ್ಚುಗಳು ತಲೆಹಾಕಿತು ಅನ್ನುವ, ಇಂತಹದ್ದೇ ಸಣ್ಣಪುಟ್ಟ ವಿಷಯಗಳು ಬೆಳೆದು, ದೊಡ್ಡ ವಾಸ್ತವವಾಗಿ ಬಿಟ್ಟಿತು. ಅದನ್ನೇ ಬರೆಯೋಣ ಅಂತಿದ್ದೇನೆ... ನಾವೆಲ್ಲರೂ ಒಂದು ಸಲ Break out ಆಗಬೇಕು. ನಮ್ಮದೇ ಚೌಕಟ್ಟುಗಳಿಂದ ಹೊರಬರಬೇಕು"[೩] ಎಂದು ಈ ನಾಟಕಕ್ಕೆ ಪ್ರೇರಣೆ ದೊರೆತದ್ದನ್ನು, ಹಾಗೂ ಇತಿಹಾಸ, ಪುರಾಣ, ಜಾನಪದ ಆಕರಗಳಿಂದ ಮೂಲದ್ರವ್ಯವನ್ನು ಪಡೆಯದೆ ಸಮಕಾಲೀನ ಸಮಾಜದಿಂದ ವಸ್ತುವನ್ನು ಪಡೆದು ಈ ನಾಟಕವನ್ನು ಬರೆದಿದ್ದಾರೆ. ಈ ಹಿಂದೆ ಮಾವಿನ ಕುಳಿಯವರೊಂದಿಗಿನ ಸಂದರ್ಶನದಲ್ಲಿ ತಾವೇ ಆಡಿದ "ಹೊಸದಾಗಿ ಒರಿಜಿನಲ್ ಆಗಿ ಹೇಳೋದರಲ್ಲಿ ನನಗೆ ಆಸಕ್ತಿ ಇಲ್ಲ. ಕೆಲವರು Easy plotನ್ನು ಕಂಡುಹಿಡೀತಾರೆ. ನನಗೆ ಆಗೋದಿಲ್ಲ"[೪] ಎಂಬ ಮಾತನ್ನು 'ಅಂಜುಮಲ್ಲಿಗೆ' ನಾಟಕದ ವಸ್ತುವಿಗೆ ಸಂಬಂಧಿಸಿದಂತೆ ಹೇಳಿದ್ದರೂ ತಮ್ಮ ಮಾತನ್ನು ತಾವೇ ಹುಸಿಗೊಳಿಸಿ, ಸಮಕಾಲೀನ ವಸ್ತುವನ್ನು ತೆಗೆದುಕೊಂಡು ಸಾಮಾಜಿಕ ನಾಟಕ ಬರೆಯಲು ತಾನು ಸಮರ್ಥ ಎಂಬುದನ್ನು 'ಮದುವೆಯ ಆಲ್ಬಮ್' ನಾಟಕದ ಮೂಲಕ ಕಾರ್ನಾಡರು ನಿರೂಪಿಸಿದ್ದಾರೆ.

ಜಿ.ಬಿ. ಜೋಶಿಯವರು ಕಾರ್ನಾಡರನ್ನು "ಸಾಮಕಾಲೀನ ಜೀವನದ ಬಗ್ಗೆ ಒಂದು ನಾಟಕ ಬರೆದರೆ ಮಾತ್ರ ನೀನು ಖರೆ ನಾಟಕಕಾರ' ಎಂದು ಆಗಾಗ ಛೇಡಿಸುತ್ತಿದ್ದರಂತೆ. ಅದಕ್ಕಾಗಿಯೇ ಜಿ.ಬಿ. ಜೋಶಿಯವರು ಬದುಕಿದ್ದಾಗ 'ಅಂಜುಮಲ್ಲಿಗೆ' ನಾಟಕವನ್ನು ಬರೆದರೂ ಅವರಿಗೆ ಅದು 'ಅಂಜುಮಲ್ಲಿಗೆ ಸಮುದ್ರಾಚೇದು. ಬಹಳ ದೂರ ಆತು' ಅಂದಿದ್ದರಂತೆ. "ಈಗ ಈ ನಾಟಕ ಬರೆದಿದ್ದೇನೆ. ಜಿ.ಬಿ. ಇಂದು ಬದುಕಿದ್ದರೆ ಅಡ್ಡಿಯಿಲ್ಲ ಅನ್ನು ಅರ್ಥದಲ್ಲಿ ತಲೆದೂಗುತ್ತಿದ್ದರು ಎಂಬ ಭರವಸೆ ನನಗಿದೆ (ನಾಟಕ ಅವರಿಗೆ ಹಿಡಿಸುತ್ತಿತ್ತೋ ಇಲ್ಲವೋ ಆ ಮಾತು ಬೇರೆ) ಅಂತೂ ನನ್ನನ್ನು ನಾಟಕಕಾರನಾಗಿ ನಿರ್ಮಿಸಿದ ಜಿ.ಬಿ.ಯ ಜನ್ಮಶತಮಾನೋತ್ಸವದ ಸಂದರ್ಭದಲ್ಲಿಯಾದರೂ ನಾನು 'ಖರೆ ನಾಟಕಕಾರ' ಎಂದು ಸಿದ್ಧಗೊಳಿಸಲಿಕ್ಕೆ ಅವಕಾಶ ದೊರಕಿತಲ್ಲ ಅದೇ ಸಂತಸ"೫ ಎಂದು ಜಿ.ಬಿ.ಯವರನ್ನು ನಾಟಕದ ಮುನ್ನುಡಿಯಲ್ಲಿ ಸ್ಮರಿಸಿದ್ದಾರೆ.

ನಾಟಕದ ಶೀರ್ಷಿಕೆಯು ಅವರು ಬರೆಯುತ್ತಿರುವಾಗ 'ಲಗ್ನದ ಆಲ್ಬಂ' ಎಂದಾಗಿದ್ದುದು, ಅದು ಮುದ್ರಣಗೊಳ್ಳುವಾಗ 'ಮದುವೆಯ ಆಲ್ಬಮ್' ಎಂದು ಬದಲಾಯಿಸಲಾಗಿದೆ. ಅವರ ಯಾವ ನಾಟಕಗಳ ಶೀರ್ಷಿಕೆಯು ಇಂಗ್ಲಿಷ್ ಹೆಸರನ್ನು ಹೊಂದಿಲ್ಲ, ಆದರೆ ಈ ನಾಟಕದ ಶೀರ್ಷಿಕೆಯ ಉತ್ತರಪದ ಆಲ್ಬಮ್ ಎಂಬುದು ಆಂಗ್ಲಪದವಾಗಿದ್ದರೂ ಅನೇಕ ಅರ್ಥಗಳನ್ನು ಹೊಂದಿದ್ದು

---

೩ ಗಿರೀಶ್ ಕಾರ್ನಾಡ (ಒಂದು ಸಂದರ್ಶನದಲ್ಲಿ) ಕೃತಿ : ಗಿರೀಶ್ ಕಾರ್ನಾಡರ ನಾಟಕಗಳು : ಸಂ. ಕೃಷ್ಣಮೂರ್ತಿ ಚಂದರ್ – ಪು. ೧೫೦

೪ ಗಿರೀಶ್ ಕಾರ್ನಾಡ (ಮಾವಿನಕುಳಿಯವರೊಂದಿಗಿನ ಸಂದರ್ಶನದಲ್ಲಿ) ಕೃತಿ – ರಂಗ ಪ್ರತಿಸ್ಪಂದನ ಲೇ: ಡಾ|| ಜಯಪ್ರಕಾಶ್ ಮಾವಿನಕುಳಿ – ಪು.ಸಂ. ೧೫೫

೫. ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ - ಪು.ಸಂ. XIII

ವೈಶಿಷ್ಟ್ಯಪೂರ್ಣವಾಗಿದೆ. 'Album' ಎಂದರೆ 'ಚಿತ್ರಸಂಗ್ರಹ'ವೆಂದೂ ಮತ್ತು 'ಚಿತ್ರಸಂಪುಟ'ವೆಂಬ ಅರ್ಥವನ್ನೂ ಕೊಡುತ್ತದೆ.

ಈ ನಾಟಕದಲ್ಲಿ ಕಾರ್ನಾಡರು 'ಮದುವೆ' ವಸ್ತುವಿನ ಮೂಲಕ ವಿವಾಹಪೂರ್ವ ಮತ್ತು ವಿವಾಹೋತ್ತರದಲ್ಲಿ ಗಂಡು-ಹೆಣ್ಣಿನ ಸಂಬಂಧವನ್ನು ತೀವ್ರ ಶೋಧನೆಗೊಡ್ಡಿ ವಿಶ್ಲೇಷಿಸಿದ್ದಾರೆ. ಇಲ್ಲಿನ ವಿದುಲಾ-ಅಶ್ವಿನ್, ರೋಹಿತ್-ತಪಸ್ಯಾರ ವಿವಾಹೋತ್ತರ ಸಮಸ್ಯೆಯೊಂದಿಗೆ ಆಯಿ-ಅಪ್ಪ, ಹೇಮಾ-ಚಂದ್ರಕಾಂತರ ವಿವಾಹಪೂರ್ವ ಸಮಸ್ಯೆಯನ್ನು ಚರ್ಚಿಸಿದ್ದಾರೆ. ಅಲ್ಲದೆ ವಿವಾಹಾತೀತ ಸಂಬಂಧಗಳಾದ, ಆಯಿ-ರಾಮದಾಸ್ ನಾಡಕರ್ಣಿ, ಸಾವಿತ್ರಿ-ಸೇಟ್‌ಜೀ, ವಿವಾನ್-ಹೇಮಾ, ರೋಹಿತ್-ಇಸಬೆಲ್, ವಿದುಲಾ-ಅಜ್ಞಾತ ವ್ಯಕ್ತಿಯರ ನಡುವಿನ ದೈಹಿಕ ಮತ್ತು ಮಾನಸಿಕ ಸ್ತರದ ಲೈಂಗಿಕ ವಿಷಮ ಸಂಬಂಧಗಳೂ ಕಾಣಿಸಿಕೊಳ್ಳುತ್ತವೆ. ಪ್ರತಿಭಾಖಾನ್-ಇರ್ಫಾನ್ ಅಂತರ್ ಧರ್ಮೀಯ ವಿವಾಹದ ಸಮಸ್ಯೆಯೂ ಸೇರಿದಂತೆ ಮದುವೆಯ ಚಿತ್ರಸಂಪುಟ ಸಂಕೀರ್ಣವಾಗಿದೆ. ಈ ಎಲ್ಲಾ ಅಂಶಗಳಿಂದ 'ಮದುವೆಯ ಆಲ್ಬಮ್' ಎಂಬ ಶೀರ್ಷಿಕೆ ಈ ನಾಟಕಕ್ಕೆ ಔಚಿತ್ಯಪೂರ್ಣವಾಗಿದೆ.

'ಮದುವೆಯ ಆಲ್ಬಮ್'ನಲ್ಲಿ ಒಟ್ಟು ಏಳು ದೃಶ್ಯಗಳಿದ್ದು, ಒಂದು, ಎರಡು, ಮೂರು ಮತ್ತು ಕೊನೆಯ ದೃಶ್ಯ ಪಡಸಾಲೆಯಲ್ಲಿ ನಡೆಯುತ್ತದೆ. ಐದನೇ ದೃಶ್ಯವು 'Internet Cafe' ಯಲ್ಲಿ ಜರುಗುತ್ತದೆ. ಆರನೇ ದೃಶ್ಯವು ರೆಸ್ಟೋರೆಂಟ್‌ನಲ್ಲಿ ನಡೆಯುತ್ತದೆ. ಮೂರು ದೃಶ್ಯಗಳ ನಂತರ 'ಮಧ್ಯಂತರ'ವನ್ನು ನಾಟಕ ಸೂಚಿಸುತ್ತದೆ. ಈ ಎಲ್ಲಾ ದೃಶ್ಯಗಳ ಘಟನೆಗಳು ಧಾರವಾಡದ ಒಂದು ಮನೆಯ ಪಡಸಾಲೆಯಲ್ಲಿ ನಡೆಯುತ್ತವೆ. ಅಡುಗೆ ಮನೆಯಲ್ಲಿ ಕೆಲ ಕ್ರಿಯೆಗಳು ಜರುಗಿದರೂ ರಂಗಮಂದಿರದ ಮೇಲೆ ಅದರ ಅಸ್ತಿತ್ವವಿಲ್ಲ. ಕೇವಲ ಮಾತುಗಳ ಮೂಲಕ ಅದನ್ನು ನಿರ್ವಹಿಸಿದ್ದಾರೆ. ಇನ್ನು 'ಈ ನಾಟಕದ ನಾಲ್ಕನೆಯ ದೃಶ್ಯ ಅನೇಕ ನೆಲೆಗಳಲ್ಲಿ ಗಮನೀಯವಾಗಿದೆ. ನಾಟಕ-ಕಾದಂಬರಿಗಳಲ್ಲಿ ಹಿನ್ನೋಟ ಸಾಮಾನ್ಯ; ಆದರೆ ಈ ದೃಶ್ಯ ಮುನ್ನೋಟ (ಎಂದರೆ Flash Forward) ಮೂರನೆಯ ದೃಶ್ಯವಾದ ಎರಡು ವರ್ಷಗಳ ನಂತರ ನಡೆಯುವ ಘಟನೆಗಳನ್ನು ಈ ದೃಶ್ಯ ತೋರಿಸುತ್ತದೆ. ಇಂತಹ ತಂತ್ರದ ಒಂದು ಉದ್ದೇಶ ನಾಟಕದಲ್ಲಿ ಸಸ್ಪೆನ್ಸ್ ಒಂದು ಮುಖ್ಯ ಅಂಶವಾಗಬಾರದು' ಎಂಬ ಆಧುನಿಕೋತ್ತರ ನಿಲುವಿರಬಹುದು (ಬ್ರೆಕ್ಟ್ ತನ್ನ ನಾಟಕಗಳ ಕಥೆಯ ಸಾರಾಂಶವನ್ನು ನಾಟಕಕ್ಕೆ ಮೊದಲೇ ಪ್ರೇಕ್ಷಕರಿಗೆ ಕೊಡುತ್ತಿದ್ದನಂತೆ)[೬] ಬಹುಶಃ ಈ ದೃಷ್ಟಿಯಿಂದ ನಾಟಕದ ೪ನೇ ದೃಶ್ಯವು ಮಹತ್ವವಾದುದು. ಮತ್ತು ವಿದುಲಾ ವಿವಾಹದ ನಂತರದ ರೋಹಿತ್ - ತಪಸ್ಯಾ, ರಾಧಬಾಯಿ, ಆಯಿ-ಅಪ್ಪ ಹೇಮಾ-ವಿವಾನ್‌ರ ಭವಿಷ್ಯದ ಬದುಕನ್ನು ಮುಂಗಾಣಿಸುತ್ತದೆ.

'ಒಡಕಲು ಬಿಂಬ' ನಾಟಕದಲ್ಲಿ ಟಿ.ವಿ. ಪರದೆ ಎಲೆಕ್ಟ್ರಾನಿಕ್ ವಿದ್ಯುನ್ಮಾನಗಳು ನಾಟಕ ಮತ್ತು ರಂಗತಂತ್ರದ ಒಂದು ಭಾಗವಾಗಿ ಬಂದಿದ್ದು, ಭಾರತೀಯ ರಂಗಭೂಮಿಯಲ್ಲೇ ಅದೊಂದು ಹೊಸ ರೀತಿಯ ನಾಟಕವಾಗಿದೆ. ಮದುವೆಯ ಆಲ್ಬಮ್‌ನಲ್ಲಿ 'Internet Cafe' ಯ ದೃಶ್ಯವನ್ನು ರಂಗದ ಮೇಲೆ ತಂದು, ಚಾಟಿಂಗ್ ಮೂಲಕ ನಗ್ನಗೊಳ್ಳುವ ದೃಶ್ಯದ ಸಂಭಾಷಣೆಯನ್ನು ತಂದು ಭಾರತೀಯ ನಿರ್ದೇಶಕರ ಕ್ರಿಯಾಶೀಲತೆಗೊಂದು ಸವಾಲೆಸೆದಿದ್ದಾರೆ. (ಈ ಲೇಖನ ಬರೆಯುತ್ತಿರುವಾಗ ಈ ನಾಟಕ ಇನ್ನೂ ಪ್ರದರ್ಶನ ಕಂಡಿರಲಿಲ್ಲ).

ಒಟ್ಟಿನಲ್ಲಿ ಪಡಸಾಲೆ, ಡ್ರಾಯಿಂಗ್ ರೂಂ, ಅಡುಗೆಮನೆಯಂತಹ ಸಾಂಪ್ರದಾಯಿಕ ಸ್ಥಳದ

---

೬ ಡಾ. ಸಿ.ಎನ್. ರಾಮಚಂದ್ರನ್ - ಲೇಖನ : 'ಬದಲಾದಷ್ಟು ಹಿಂದಿದ್ದಂತೆಯೇ' ಪತ್ರಿಕೆ – ಪ್ರಜಾವಾಣಿ ಸಾಪ್ತಾಹಿಕ ಪುರವಣಿ (೨೮ನೇ ಜನವರಿ, ೨೦೦೭) – ಪು.ಸಂ. ೫

ದೃಶ್ಯಗಳಿಂದ ರೆಸ್ಟೋರೆಂಟ್, Internet Cafe ಯಂತಹ ಅತ್ಯಾಧುನಿಕ ಸ್ಥಳದವರೆಗೂ ದೃಶ್ಯಗಳನ್ನು ತಂದು ರಂಗತಂತ್ರದ ಸಾಧ್ಯತೆಗಳನ್ನು ಹೆಚ್ಚಿಸಿದ್ದಾರೆ. 'ಬಿಂಬ' ಒಂದು ಸ್ಟುಡಿಯೋದೊಳಗೆ ತನ್ನ ನಾಟಕೀಯತೆಯನ್ನು ಬಿಚ್ಚಿಕೊಂಡರೆ ಈ ನಾಟಕದ ನಾಲ್ಕು ಮತ್ತು ಐದನೇ ದೃಶ್ಯಗಳು ಕ್ರಮವಾಗಿ Software Production Office ಮತ್ತು Internet Cafeಗಳಲ್ಲಿ ಜರುಗುತ್ತವೆ

ಒಟ್ಟಿನಲ್ಲಿ ಕಾರ್ನಾಡರ ಈ ನಾಟಕವು ಜಾಗತಿಕ ಸ್ತರದ ವಿಚಾರಗಳನ್ನು 'ಮದುವೆ ಎಂಬ ಸಂಸ್ಥೆಯ ಮೂಲಕ ಗಂಡು-ಹೆಣ್ಣಿನ ನಡುವಿನ ವಿವಾಹಕ್ಕೆ ಸಂಬಂಧಿಸಿದ ವಿಚಾರಗಳನ್ನು, ಧಾರವಾಡ-ಬೆಂಗಳೂರು - ಅಮೆರಿಕಾ-ಆಸ್ಟ್ರೇಲಿಯಾ ದೇಶಗಳವರೆಗೂ ವಿಶ್ವವ್ಯಾಪಿಯಾಗಿಸುವ ಮೂಲಕ ಸಾರ್ವಕಾಲಿಕ ಸಮಕಾಲೀನತೆಯನ್ನು ಪಡೆದುಕೊಂಡಿದೆ ಎನ್ನಬಹುದು.

ಮದುವೆಯ ಆಲ್ಬಮ್ ನಾಟಕದ ಸಂಕ್ಷಿಪ್ತ ಕಥಾರೂಪ

ಒಂದು ಕುಟುಂಬದೊಳಗೆ ನಡೆದ ಮದುವೆಗೆ ಸಂಬಂಧಿಸಿದ ಏಳು ದೃಶ್ಯಗಳ ಸಾಮಾಜಿಕ ನಾಟಕವೇ 'ಮದುವೆಯ ಆಲ್ಬಮ್'.

ಸರ್ಕಾರಿ ವೈದ್ಯನಾದ 'ಅಪ್ಪ'ನಿಗೆ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಗಂಡುಮಗ. (ನಾಟಕದ ಆರಂಭ ವಿದುಲಾಳ ಮದುವೆಯು ಅಮೆರಿಕಾದ ವರ ಅಶ್ವಿನ್ ಪಂಜೆಯೊಂದಿಗೆ ನಡೆಸಲು ತಯಾರಿ ಸಾಗುತ್ತಿರುತ್ತದೆ). ಇಂಟರ್‌ನೆಟ್-ವಿಡಿಯೋ-ಇ-ಮೇಲ್-ಮೊಬೈಲ್‌ನಂತಹ ಸಂವಹನ ಮಾಧ್ಯಮಗಳಿಂದ ಈಗಾಗಲೇ ಈ ಮದುವೆಯ ಬಗ್ಗೆ ವಿಚಾರ ನಡೆದಿರುತ್ತದೆ. ಅಶ್ವಿನ್‌ನ ಕರಾರುಗಳಿಗೆ ವಿದುಲಾ ಒಪ್ಪಿಕೊಂಡರೆ, ಮದುವೆ ಮುಗಿದೂ ಹೋಗುತ್ತದೆ. ಆದರೆ ಅಶ್ವಿನ್ ಇನ್ನೂ ಭಾರತಕ್ಕೆ ಬಂದು ವಿದುಲಾಳೊಂದಿಗೆ ಮುಖಾಮುಖಿ ಮಾತನಾಡಬೇಕಿದೆ. ಹಾಗಾಗಿ ಮದುವೆಯು ಇನ್ನು ಅನಿಶ್ಚಿತವಾಗಿ ಉಳಿದಿದೆ. ಆದರೆ ಒಡವೆ-ವಸ್ತ್ರ-ಕಲ್ಯಾಣ ಮಂಟಪದ ಅಡ್ವಾನ್ಸ್, ವಿದುಲಾಳ ಪಾಸ್‌ಪೋರ್ಟ್, ವೀಸಾ, ಮುಂತಾದ ತಯಾರಿಗಳು ಮುಗಿಯುವ ಹಂತದಲ್ಲಿವೆ.

ಇಂತಹ ಸಂದರ್ಭದಲ್ಲಿ ವಿದುಲಾಳ ಬರ್ತ್ ಸರ್ಟಿಫಿಕೇಟ್‌ನಲ್ಲಿ ತಂದೆಯ ಹೆಸರಿನ ಬದಲು ಅವಳ ಚಿಕ್ಕಪ್ಪನಾದ 'ರಾಮದಾಸ ಕುಲಕರ್ಣಿ'ಯ ಹೆಸರು ರಿಜಿಸ್ಟರ್ ಆಗಿರುತ್ತದೆ. ವಿದುಲಾ ಮತ್ತು ಆಯಿ, ರಾಮದಾಸನ ಇಂತಹ ಕುಚೋದ್ಯಕ್ಕೆ ಒಳಗೊಳಗೆ ನೋವು ಅನುಭವಿಸುತ್ತಿರುತ್ತಾರೆ. ಆಸ್ಟ್ರೇಲಿಯಾದಲ್ಲಿ ಉದ್ಯೋಗಸ್ಥನಾದ ಚಂದ್ರಕಾಂತನಿಗೆ ವಿದುಲಾಳ ಅಕ್ಕ ಹೇಮಾಳನ್ನು ೧೭ ವರುಷಗಳ ಹಿಂದೆ ಅವರಿಬ್ಬರ ಇಚ್ಛೆಯಂತೆಯೇ ಮದುವೆ ಮಾಡಿರುತ್ತಾರೆ. ಅವಳಿಗೆ ಒಂದು ಗಂಡು ಹಾಗೂ ಒಂದು ಹೆಣ್ಣು, ಇಬ್ಬರು ಮಕ್ಕಳಿರುತ್ತಾರೆ. ಆದರೆ ವಯಸ್ಕಳಾದ ಹೇಮಾಳಿಗೆ ಅವಳ ಮಗ ಕೇತನನಿಗಿಂತ ಎರಡು ವರುಷ ಚಿಕ್ಕವನಾದ, '೧೩ ವರುಷ' ವಯಸ್ಸಿನ ನೆರೆಮನೆಯ ವಿವಾನ್ ಆಕರ್ಷಿತನಾಗಿರುತ್ತಾನೆ. ಇದರಿಂದ ಹೇಮಾ ಆರಂಭದಲ್ಲಿ ಕಿರಿಕಿರಿಗೊಂಡರೂ, ನಂತರ ಅದನ್ನು ಸ್ವೀಕರಿಸಿ ಆನಂದವನ್ನು ಅನುಭವಿಸುತ್ತಾಳೆ. ಅವಳ ಮದುವೆಯನ್ನು ಮನೆಯವರು ವೈಭವದಿಂದ ಮಾಡದಿರುವ ಬಗ್ಗೆ ಅಸಮಾಧಾನ ಮತ್ತು ನೋವಿರುತ್ತದೆ. ಅವಳ ತಮ್ಮ ರೋಹಿತನಿಗೆ ಕ್ರಿಶ್ಚಿಯನ್ ಹುಡುಗಿ ಇಸಬೆಲ್‌ಳೊಂದಿಗೆ ಪ್ರೇಮವಿರುತ್ತದೆ. ಆದರೆ ಮೋಹನ್-ಮೀರಾ ದಂಪತಿಗಳು, ತಮ್ಮ ಸಂಬಂಧಿಕರಾದ ಗೋಪಾಲ-ವತ್ಸಲಾರ ಮಗಳು ತಪಸ್ಯಳೊಂದಿಗೆ ಮದುವೆ ಮಾಡಲು ನಿರ್ಧರಿಸಿ ಸಂಬಂಧ ಕುದುರಿಸಲು ಯತ್ನಿಸಿ ಕೊನೆಯಲ್ಲಿ ಸಫಲರೂ ಆಗುತ್ತಾರೆ(ಇದರಿಂದ ಇಸಬೆಲ್‌ಳಿಗೆ ಆಘಾತವಾಗಿ ನರ್ವಸ್

ಬ್ರೇಕ್‌ಡೌನ್ ಆಗಿ ಎರಡು ವರ್ಷಗಳ ನಂತರ ಚೇತರಿಸಿಕೊಳ್ಳುತ್ತಾಳೆ. ಮತ್ತೆ ರೋಹಿತ ಅವಳ ಪ್ರೇಮವನ್ನು ಬಯಸಿದಾಗ ರೋಹಿತನ ಸಹೋದ್ಯೋಗಿ ಪ್ರತಿಭಾ ಖಾನ್ ಅದನ್ನು ಮುಂದುವರೆಸದಂತೆ ರೋಹಿತನಿಗೆ ತಾಕೀತು ಮಾಡುತ್ತಾಳೆ.) ಮತ್ತೊಂದು ಕೋನದಲ್ಲಿ ಇವರ ಮನೆಯ ಅಡುಗೆ ಕೆಲಸದ ರಾಧಾಬಾಯಿಯ ಮಗಳು ಸಾವಿತ್ರಿಯ ದುರಂತ ಕಥೆಯೊಂದಿದೆ. ಹಳ್ಳಿಯಲ್ಲಿ ವಾಸಿಸುತ್ತಿದ್ದ ಯುವತಿ ಸಾವಿತ್ರಿಯು, ತಮ್ಮ ಕುಟುಂಬದ ಬಡತನ ನೀಗಿಸಲು ಬೆಂಗಳೂರಿಗೆ ಮನೆಗೆಲಸಕ್ಕಾಗಿ ಬಂದಾಗ ಅಲ್ಲಿ ಸೇಟ್‌ಜಿಯೊಬ್ಬನ ಉಪಪತ್ನಿಯಾಗಬೇಕಾಗುತ್ತದೆ. ಅವನು ಹೃದಯಾಘಾತಕ್ಕೊಳಗಾಗಿ ಸತ್ತ ನಂತರ ಅವಳು ಬೀದಿಗೆ ಬಿದ್ದು ಹುಚ್ಚಿಯಾಗಿರುತ್ತಾಳೆ. ಅವಳು ತಾಯಿಯನ್ನು ಹುಡುಕುತ್ತಾ ಅಲೆಯುತ್ತಿದ್ದಾಗ, ರಾಧಾಬಾಯಿಯ ಕಣ್ಣಿಗೆ ಬಿದ್ದು, ರಕ್ಷಿಸುವಷ್ಟರಲ್ಲಿ ಅವಳು ಕಣ್ಮರೆಯಾಗುತ್ತಾಳೆ. ಸೀರಿಯಲ್ ನೋಡುತ್ತಿರುವಾಗ ಆ ಹಳೆಯ ಘಟನೆ ರಾಧಬಾಯಿಯ ಸ್ಮರಣೆಗೆ ಬಂದು ಅಸ್ವಸ್ಥಳಾಗು ತ್ತಾಳೆ. ಮುಂದೆ, ಅಪ್ಪ-ಅಮ್ಮ ತೀರಿಕೊಂಡು, ವಿದುಲಾ ಅಮೆರಿಕವನ್ನು, ಹೇಮಾ ಆಸ್ಟ್ರೇಲಿಯಾವನ್ನು, ರೋಹಿತ್ ಬೆಂಗಳೂರನ್ನು ಸೇರಿದ ನಂತರ ತನ್ನ ಹಳ್ಳಿಗೆ ಹಿಂದಿರುಗುತ್ತಾಳೆ. ಸಾವಿತ್ರಿಯು ಹುಚ್ಚಿಯಾಗಿ ಅವಳ ಬದುಕು ದುರಂತವಾಗುತ್ತದೆ.

ಅಪ್ಪ-ರಾಮದಾಸ್ ಸಹೋದರರು, ಬಡವರು. ವಾರಾನ್ನದಿಂದ ವಿದ್ಯಾಭ್ಯಾಸ ಮುಗಿಸಿ, 'ಅಪ್ಪ' ಸರ್ಕಾರಿ ವೈದ್ಯನಾದರೆ; ರಾಮದಾಸ್ ಜೀನಿಯಸ್ ಆದರೂ ರವಿವರ್ಮನಂತಹ ಪ್ರತಿಭಾವಂತ ನಾಗಬಹುದಾಗಿದ್ದರೂ, ದಿಢೀರ್ ಶ್ರೀಮಂತನಾಗಲು ವ್ಯಾಪಾರ ಮಾಡಲು ಹೋಗಿ, ನಷ್ಟಕ್ಕೀಡಾಗಿ ಕೈಸುಟ್ಟುಕೊಳ್ಳುತ್ತಾನೆ. ಅವನು ಸಾಯುವವರೆಗೂ ಅಣ್ಣ-ತಮ್ಮಂದಿರಲ್ಲಿ ವೈಮನಸ್ಸು ಇದ್ದ ಬಗ್ಗೆ ನಾಟಕದಲ್ಲಿ ಸೂಚನೆಯಿದೆ. ಸುಂದರವಾದ ಅತ್ತಿಗೆಯೊಂದಿಗೆ ರಾಮದಾಸ್‌ನ ಸಂಬಂಧ ಇದ್ದಿರಬಹುದೆಂಬ ಕ್ಷೀಣ ಎಳೆಯೊಂದನ್ನೂ ನಾಟಕ ದಾಖಲಿಸುತ್ತದೆ. ಅಪ್ಪ, ತನ್ನ ತಮ್ಮ ಸತ್ತ ನಂತರ ಅವನನ್ನು ಹೊಗಳುತ್ತಲೇ ಅವನನ್ನು ಸ್ಮರಿಸುತ್ತಿರುತ್ತಾನೆ.

ವಿದುಲಾಳಿಗೆ ಅಜ್ಞಾತ ವ್ಯಕ್ತಿಯೊಂದಿಗೆ ಅಫೇರ್ ಇರುತ್ತದೆ. ಆಕೆ ದಿನವೂ ವಿಡಿಯೋಗೇಮ್ಸ್ ನೆಪದಿಂದ ಆ ವ್ಯಕ್ತಿಯೊಂದಿಗೆ, ಸ್ವಪ್ನಸೃಷ್ಟಿಯ ಚಾಟಿಂಗ್‌ನಲ್ಲಿ ತನ್ನ ಕಾಮನೆಗಳನ್ನು ತೃಪ್ತಿಪಡಿಸಿ ಕೊಳ್ಳುತ್ತಿರುತ್ತಾಳೆ. ಅಲ್ಲಿಗೆ ಬಂದ ಹಿಂದೂ ಧರ್ಮದ ಹೆಸರಿನ ಮತಾಂಧರು ಅವಳ ಈ ಕ್ರಿಯೆಯನ್ನು ವಿರೋಧಿಸುತ್ತಾರೆ. ಆದರೆ ಅವಳ ಪ್ರತಿಭಟನೆಗೆ ಹೆದರಿ ಅಸಹಾಯಕರಾಗಿ ಹೋಗುತ್ತಾರೆ. ವಿದುಲಾಳಿಗೆ ತಮ್ಮ ಬದುಕಿನ ಒಪ್ಪಂದ ಮತ್ತು ಕರಾರುಗಳನ್ನು ಚರ್ಚಿಸಲು ಅಶ್ವಿನ್ ಅಮೆರಿಕದಿಂದ ಧಾರವಾಡಕ್ಕೆ ಬರುತ್ತಾನೆ. ತನ್ನ ಅಮೆರಿಕನ್ ಜೀವನ, ತನ್ನ ಈ ಹಿಂದಿನ ಅಫೇರ್‌ಗಳನ್ನು ಅವಳಿಗೆ ಹೇಳಿ, ಅಮೆರಿಕದ ಯಾಂತ್ರಿಕ ಜೀವನವನ್ನು ಜೀವಂತಗೊಳಿಸುವ ತನ್ನ ಆದರ್ಶಕ್ಕೆ ಭಾರತೀಯ ಸಂಸ್ಕೃತಿಯ ಪವಿತ್ರ ಬದುಕಿಗೆ ವಿದುಲಾಳು ಸಹಕರಿಸುವ ಮೂಲಕ, ಪುನರುಜ್ಜೀವಿಸುವ ಕಾರ್ಯದಲ್ಲಿ ಪಾಲುಗಾರ್ತಿಯಾಗಬೇಕೆಂದು ಕರಾರು ಮಾಡಿಕೊಂಡು ಅವಳ ಒಪ್ಪಿಗೆ ಪಡೆದು ಅವಳನ್ನು ಮದುವೆಯಾಗಿ, ಎಂಟು ದಿನ ಹೋಟೆಲಿನಲ್ಲಿ ಸಂಸಾರ ಸುಖ ಅನುಭವಿಸಿ ಅಮೆರಿಕಕ್ಕೆ ತೆರಳುತ್ತಾನೆ. ಅದಾದ ನಂತರ ವಿದುಲಾ ತನ್ನ ಪಾಸ್‌ಪೋರ್ಟ್-ವೀಸಾ ಸಿಕ್ಕಿದ ತಕ್ಷಣ ತಾನು ಸಹಾ ಅಪ್ಪ-ಅಮ್ಮ, ಅಣ್ಣ-ಅಕ್ಕ ಇವರನ್ನು ಬೀಳ್ಕೊಂಡು ಅಮೆರಿಕಕ್ಕೆ ಹೋಗುತ್ತಾಳೆ. ಇತ್ತ ರೋಹಿತ ತಪಸ್ವಿಯ ತಂದೆಯು ನೀಡಿದ ಹಣದ ಸಹಕಾರದಿಂದ ಜರ್ಮನಿಗೆ ಹೋಗಿ ಟ್ರೈನಿಂಗ್ ಮುಗಿಸಿ ಬಂದು ಆಸ್ತಿಯ ಆಸೆಯಿಂದ ತಪಸ್ವಿಯನ್ನು ಮದುವೆಯಾಗಿ ಬೆಂಗಳೂರು ಸೇರಿದ ರೋಹಿತ್ ಪ್ರತಿಭಾಳೊಂದಿಗೆ, ಟಿ.ವಿ. ಸೀರಿಯಲ್ ತೆಗೆಯುವ ಮತ್ತು ಅದಕ್ಕೆ ರಾಧಬಾಯಿಯ

ಮತ್ತು ಸಾವಿತ್ರಿಯ ದುರಂತ ಬದುಕನ್ನು ಹಾಗೂ ತನ್ನ ತಂಗಿ ವಿದುಲಾಳ ಮದುವೆಯ ಪ್ರಸಂಗವನ್ನು ಕತೆಯಾಗಿ ಆಯ್ಕೆ ಮಾಡಿಕೊಂಡು ಸೀರಿಯಲ್ ತೆಗೆಯುವ ಆಲೋಚನೆಯಲ್ಲಿರುತ್ತಾನೆ. ತನ್ನ ಪತ್ನಿ ಹೆರಿಗೆಗಾಗಿ ತವರು ಮನೆಗೆ ಹೋದ ಸಮಯದಲ್ಲಿ ಮತ್ತೆ ಇಸಬೆಲ್‌ಳ ಸ್ನೇಹಕ್ಕಾಗಿ ಕೈ ಚಾಚುವ, ಅದಕ್ಕೆ ಪ್ರತಿಭಾಳ ಪ್ರತಿರೋಧವಿರುವ ಸೂಚನೆಯೊಂದಿಗೆ ನಾಟಕ ಮುಗಿಯುತ್ತದೆ. ಇದು ನಾಟಕದ ಸಂಕ್ಷಿಪ್ತ ರೂಪ.

ಮದುವೆಯ ಆಲ್ಬಮ್ ನಾಟಕದ ವಿಶ್ಲೇಷಣೆ

ಕಾರ್ನಾಡರ ಹೊಸ ನಾಟಕವಾದ 'ಮದುವೆಯ ಆಲ್ಬಮ್' ನಾಟಕದಲ್ಲಿ ಸುಮಾರು ಒಂಬತ್ತು ಪುರುಷ ಮತ್ತು ಏಳು ಸ್ತ್ರೀ ಪಾತ್ರಗಳಿದ್ದು ಅತಿ ಹೆಚ್ಚು ಪಾತ್ರ ಬಾಹುಳ್ಯವಿರುವ ವಾಸ್ತವವಾದಿ ನೆಲೆಗಟ್ಟಿನ, ಸಂಕೀರ್ಣ ಸಾಮಾಜಿಕ ನಾಟಕವಾಗಿದೆ.

ನಾಟಕದಲ್ಲಿ ವಾಸ್ತವತೆಯ ಬಗ್ಗೆ 'ಭಾರತೀಯ ರಂಗಭೂಮಿಯನ್ನೇ ತೆಗೆದುಕೊಳ್ಳಿ. ನಾವು ತೆಂಡೂಲ್ಕರ್ ಅವರನ್ನು ಶ್ರೀರಂಗರನ್ನ ಅಥವಾ ಒಟ್ಟಾರೆಯಾಗಿ ವಾಸ್ತವವಾದಿ ಪರಂಪರೆಯನ್ನು ಹಾಗಂತ ವಾಸ್ತವವಾದವನ್ನು ಭಾರತೀಯ ರಂಗಭೂಮಿಯಲ್ಲಿ ಪೂರ್ತಿಯಾಗಿ ದುಡಿಸಿಕೊಂಡೂ ಇಲ್ಲ. ಒಬ್ಬ ಚೆಕಾಫ್ ಓದಿದರೆ ಹೇಗೆ ರಷಿಯಾದ ವಾಸ್ತವ ನಮ್ಮ ಮುಂದೆ ಸೃಷ್ಟಿಯಾಗುತ್ತದೋ ಆ ಅರ್ಥದಲ್ಲಿ ನಾವು ಯಾರೂ ಮಾಡೋದಕ್ಕೆ ಆಗಿಲ್ಲ'[೭] ಎಂದು ಕಾರ್ನಾಡರು ಒಂದು ಸಂದರ್ಶನದಲ್ಲಿ ಹೇಳಿದ್ದಾರೆ. 'ಮದುವೆಯ ಆಲ್ಬಮ್' ನಾಟಕವು 'ವಾಸ್ತವವಾದದ ಪರಂಪರೆಯಲ್ಲಿಯೇ ಹುಟ್ಟಿಕೊಂಡಿದೆ. ನಾಟಕದ ಹೆಚ್ಚಿನ ಕ್ರಿಯೆ ಪಡಸಾಲೆ (Living Room)ಯಲ್ಲಿ ನಡೆಯುವುದೂ ಗಮನಾರ್ಹವಾಗಿದೆ.'[೮] ಎಂಬ ಮಾತಿನ ಹಿನ್ನೆಲೆಯಲ್ಲಿ ಇಡೀ ನಾಟಕದ ವಸ್ತು ವಾಸ್ತವವಾದಿ ನೆಲೆಯದ್ದು ಎಂದು ಗುರುತಿಸಬಹುದು. 'ಮದುವೆ' ಎಂಬ ಸಂಸ್ಥೆಯು ಅನಾದಿ ಕಾಲದಿಂದ ಇಂದಿನವರೆಗೂ ಬದಲಾಗದೆ ಉಳಿದಿರುವ, ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯ ಶೋಷಣೆಗಾಗಿ ಬೆಳೆಸಿಕೊಂಡಿರುವ ಒಂದು ಸಾಧನವಾಗಿದೆ ಎಂಬುದನ್ನು 'ಮದುವೆ ಆಲ್ಬಮ್' ನಾಟಕವು ಚಿತ್ರಿಸುತ್ತದೆ. ಆಯಿ-ಅಪ್ಪ ಮತ್ತು ಅವರ ತಂದೆ-ತಾಯಿಯ ಪೀಳಿಗೆ; ಹೇಮಾ–ಚಂದ್ರಕಾಂತರ ಪೀಳಿಗೆ; ರೋಹಿತ್-ತಪಸ್ಯ ಮತ್ತು ವಿದುಲಾ - ಅಶ್ವಿನ್‌ರ ಪೀಳಿಗೆ; ಹಾಗೂ ದಿವಾನ್-ಅಂಬುಜಾರ ಪೀಳಿಗೆಗಳು ಕ್ರಮವಾಗಿ ಆರ್ಷೇಯ, ಸಮಕಾಲೀನ ಮತ್ತು ನವಪೀಳಿಗೆಯ ಮದುವೆಗೆ ಸಂಬಂಧಿಸಿದ ಚಿತ್ರ ಸಂಪುಟವನ್ನು ವಿಶ್ಲೇಷಿಸುತ್ತದೆ. 'ಒಂದು ಸಮಾಜದ ಪ್ರಾತಿನಿಧಿಕ ಸಂಸ್ಥೆ ಎಂದರೆ ಅದು ವೈವಾಹಿಕ ವ್ಯವಸ್ಥೆ; ಈ ವೈವಾಹಿಕ ವ್ಯವಸ್ಥೆಯ ಸ್ವರೂಪ ಒಟ್ಟಾರೆ ಸಮಾಜದ ಸಾಂಸ್ಕೃತಿಕ ರೂಪಕವಾಗುತ್ತದೆ. ಆದ್ದರಿಂದ ವಿವಾಹವನ್ನೇ ವಸ್ತುವನ್ನಾಗಿ ಆರಿಸಿಕೊಂಡು ಅದನ್ನು ವಿಶ್ಲೇಷಿಸುವ ಮೂಲಕ ಬದಲಾದರೂ ಮೊದಲಿನಂತೆಯೇ ಇರುವ ಇಂದಿನ/ಎಂದೆಂದಿನ ಭಾರತೀಯ ಸಮಾಜದ ತೀಕ್ಷ್ಣ ವಿಶ್ಲೇಷಣೆಯನ್ನು ಕಾರ್ನಾಡರು ಈ ನಾಟಕದಲ್ಲಿ ಕೈಗೆತ್ತಿಕೊಳ್ಳುತ್ತಾರೆ'[೯] ಅಶ್ವಿನ್–ವಿದುಲಾರ ಮದುವೆಯು ಗಂಡು–ಹೆಣ್ಣಿನ ಮುಹೂರ್ತದವರೆಗೂ ಅನಿಶ್ಚಯವಾಗಿಯೇ ಇರುವುದು, ವಿದುಲಾಳು ಒಪ್ಪಿಗೆ ನೀಡಿದ್ದರೂ ಅಶ್ವಿನ್ ಇನ್ನೂ ಸಂದಿಗ್ಧತೆಯೊಡ್ಡುವುದು, ಭವಿಷ್ಯವನ್ನು ನಿರ್ಧರಿಸುವಂತಹ ಮಹತ್ವದ

---

೭ ಗಿರೀಶ್ ಕಾರ್ನಾಡ್ (ಸಂದರ್ಶನದಲ್ಲಿ) ಕೃತಿ : ಗಿರೀಶ್ ಕಾರ್ನಾಡರ ನಾಟಕಗಳು: ಸಂ.ಕೃಷ್ಣಮೂರ್ತಿ ಚಂದರ್ - ಪು.ಸಂ. ೨೧೫

೮. ಡಾ|| ಜಿ.ಎಸ್. ಆಮೂರ– ಲೇಖನ: ಗಿರೀಶ್ ಕಾರ್ನಾಡರ ಹೊಸ ನಾಟಕ: ಸಂಯುಕ್ತ ಕರ್ನಾಟಕ ೧೪-೧-೨೦೦೭ – ಪು.ಸಂ. ೪

೯ ಡಾ. ಸಿ.ಎನ್. ರಾಮಚಂದ್ರನ್ - ಲೇಖನ : 'ಬದಲಾದಷ್ಟು ಹಿಂದಿದ್ದಂತೆಯೇ' ಪತ್ರಿಕೆ – ಪ್ರಜಾವಾಣಿ ಸಾಪ್ತಾಹಿಕ ಪುರವಣಿ (೨೮ನೇ ಜನವರಿ, ೨೦೦೭) – ಪು.ಸಂ. ೫

ವಿಷಯದ ಬಗ್ಗೆ ಅಮೆರಿಕದಿಂದ ಸಕಾಲಕ್ಕೆ ಬರದೆ, ಹೆಣ್ಣು ಹೆತ್ತವರನ್ನು ದುಗುಡಕ್ಕೆ ತಳ್ಳುವುದು ಅದು ಅಂದಿನಿಂದ ಇಂದಿನವರೆಗೂ ತನ್ನ ಮೇಲುಗೈಯನ್ನು ಪುರುಷನೇ ಸಾಧಿಸುತ್ತಿರುವುದನ್ನು ಅಶ್ವಿನ್ ಮತ್ತು ರೋಹಿತ್‌ರ ಪಾತ್ರಗಳ ಮೂಲಕ ನಾಟಕ ತೆರೆದಿಡುತ್ತದೆ.

ಇನ್ನೊಂದು ವಿನ್ಯಾಸದಲ್ಲಿ 'ತಪಸ್ಯಾ'ಳ ವಿವಾಹಕ್ಕೆ ಸಂಬಂಧಿಸಿದಂತೆ ರೋಹಿತ್ ಸಹಾ, ಗೋಪಾಲ್- ವತ್ಸಲಾ ದಂಪತಿಗಳನ್ನು ದುಗುಡಕ್ಕೆ ತಳ್ಳುತ್ತಾನೆ. ಅಶ್ವಿನ್ ವಿದುಲಾಳನ್ನು ಇಂಟರ್‌ನೆಟ್, ವಿಡಿಯೋ, ಮೊಬೈಲ್ ಮೂಲಕ ನೋಡಿ ಸಂಪರ್ಕಿಸಿ ಮದುವೆಗೆ ಯತ್ನಿಸುವುದು, ವಿವಾಹದ ಆಧುನಿಕ ಸ್ವರೂಪವನ್ನು ತಿಳಿಸುತ್ತದೆ. ರೋಹಿತ್‌ನು ತಪಸ್ಯಾ ಹತ್ತಿರದಲ್ಲೇ ಇದ್ದರೂ ಅವಳನ್ನು ನೋಡಲು ಒಪ್ಪದೆ ಅವಳ ಆಸ್ತಿಗಾಗಿ ವಿವಾಹವಾಗುವುದು ವಿವಾಹದ ಮತ್ತೊಂದು ಮಗ್ಗುಲನ್ನು ತೆರೆದು ತೋರಿಸುತ್ತದೆ. ಆಯಿ ಹೇಳುವಂತೆ 'ವಿಡಿಯೋ ಮೇಲೆ ಮೋರೆ ನೋಡಿ ಆಯ್ತು. ಮೊಬೈಲ್ ಮೇಲೆ ಮಾತಾಡಿ ಆಯ್ತು. ಭೆಟ್ಟಿಯಾಗೋ ಉಪಚಾರವಾದರೂ ಯಾಕೆ ಬೇಕು? ಸೀದಾ ರಿಜಿಸ್ಟ್ರಾರ್ ಆಫೀಸಿನಲ್ಲೇ ಭೆಟ್ಟಿಯಾದರೆ ಸಾಕಲ್ಲ'[೧೦] ಎಂಬ ಮಾತು ಆಧುನಿಕ ವಿವಾಹಪೂರ್ವ ಸಂಗತಿಗಳ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರೆ, ಆಯಿಯೇ ತನ್ನ ಮದುವೆಯ ಬಗ್ಗೆ ಹೇಳುವ ಇನ್ನೊಂದು ಮಾತು ಗಮನಾರ್ಹವಾದುದು. 'ನನ್ನ ಲಗ್ನ ಆಗೋ ಮೊದಲು ನಾನು– ಇವರು ಒಂದೆರಡು ಸರ್ತಿ ಭೇಟಿಯಾಗಿದ್ದೆವು, ಅಷ್ಟೇ. ಒಂದೇ ಒಂದು ಕಪ್ ಚಹಾ! ನನ್ನ ತಾಯಿ ಅಂತೂ ನನ್ನ ಅಪ್ಪನನ್ನು ಮೊದಲನೇ ಸರ್ತಿ ನೋಡಿದ್ದೇ ಮಾಲೆ ಹಾಕಬೇಕಾದರೆ'[೧೧] ಎಂಬ ಮಾತು ಅಶ್ವಿನ್–ವಿದುಲಾ ಒಂದು ರೆಸ್ಟೋರೆಂಟ್‌ನಲ್ಲಿ ಮೊದಲು ಭೇಟಿಯಾಗಿ ಮದುವೆಯ ವಿಷಯವನ್ನು ಚರ್ಚಿಸಿ ಅಶ್ವಿನ್ ಏಕಪಕ್ಷೀಯ ನಿರ್ಧಾರಕ್ಕೆ ಬರುವುದು; ವಿವಾಹಕ್ಕೆ ವಿದುಲಾಳ ಅಭಿಪ್ರಾಯವನ್ನು ಪಡೆಯದೆ ತಾನೇ ಎಲ್ಲವನ್ನು ನಿರ್ಧರಿಸುವ; ಕರಾರು ಹೇರುವ ಪುರುಷಧೋರಣೆಯನ್ನು ಕಾಣಬಹುದು. ''ಒಂದು 'ಮದುವೆ ಆಲ್ಬಮ್' ಮೂರ್ನಾಲ್ಕು ಪೀಳಿಗೆಗಳನ್ನು ಒಟ್ಟಿ ತೋರಿಸುತ್ತದೆ. ಕಾರ್ನಾಡರ ಈ ನಾಟಕವೂ ಕೂಡ ಭಿನ್ನ ಪೀಳಿಗೆಗಳ ಅನೇಕ ಸ್ತ್ರೀಪುರುಷರನ್ನು ತೋರಿಸುತ್ತದೆ. ಆಯಿಯ ತಾಯಿ ತನ್ನ ಗಂಡನನ್ನು ನೋಡಿದ್ದೇ ಮಾಲೆ ಹಾಕಬೇಕಾದರೆ; ಆಯಿ ಅಪ್ಪನನ್ನು ಭೇಟಿಯಾದದ್ದು ಮದುವೆಗೆ ಮೊದಲು ಒಂದೆರಡು ಸಲ ಚಹಾ ಕುಡಿಯುವಾಗ; ಹೇಮಾಳದ್ದು ಅವಸರದ ಮದುವೆ (ಗಂಡ ಬೇಗ ಆಸ್ಟ್ರೇಲಿಯಾಕ್ಕೆ ಕೆಲಸಕ್ಕೆ ಹೋಗಬೇಕು)''[೧೨] ಎಂಬ ಮಾತುಗಳು ಪ್ರಾಚೀನ ಕಾಲದಿಂದಲೂ ಪುರುಷ ಪರವಾಗಿರುವ ವೈವಾಹಿಕ ಸಂಸ್ಥೆ ಬದಲಾಗದಿರುವುದನ್ನು ಧ್ವನಿಸುತ್ತದೆ. ''ಫ್ರೆಂಚ್ ಭಾಷೆಯಲ್ಲಿ ಒಂದು ಪ್ರಸಿದ್ಧ ನಾಣ್ಣುಡಿಯಿದೆ; 'Plus Ca Change c'est la meme chase' ಇದರ ಅರ್ಥ 'ಬದಲಾದಷ್ಟು ಅದು ಮೊದಲಿನಂತೆಯೇ ಉಳಿಯುತ್ತದೆ.' ಈ ನಾಣ್ಣುಡಿ ಕಾರ್ನಾಡರು ಭಾರತೀಯ ಸಮಾಜದ ಬಗ್ಗೆ ಈ ನಾಟಕದ ಒಟ್ಟಾರೆ ಸೂಚಿಸುವ ಪ್ರಬಂಧ ಧ್ವನಿಯನ್ನು ಸಮರ್ಥವಾಗಿ ದಾಖಲಿಸುತ್ತದೆ.''[೧೩]

---

೧೦. ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ – ಪು.ಸಂ. ೧೬

೧೧. ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ – ಪು.ಸಂ. ೭೭

೧೨ ಡಾ. ಸಿ.ಎನ್. ರಾಮಚಂದ್ರನ್ - ಲೇಖನ : 'ಬದಲಾದಷ್ಟು ಹಿಂದಿದ್ದಂತೆಯೇ' ಪತ್ರಿಕೆ – ಪ್ರಜಾವಾಣಿ ಸಾಪ್ತಾಹಿಕ ಪುರವಣಿ (೨೮ನೇ ಜನವರಿ, ೨೦೦೭) – ಪು.ಸಂ. ೫

೧೩ ಡಾ. ಸಿ.ಎನ್. ರಾಮಚಂದ್ರನ್ - ಲೇಖನ : 'ಬದಲಾದಷ್ಟು ಹಿಂದಿದ್ದಂತೆಯೇ' ಪತ್ರಿಕೆ – ಪ್ರಜಾವಾಣಿ ಸಾಪ್ತಾಹಿಕ ಪುರವಣಿ (೨೮ನೇ ಜನವರಿ, ೨೦೦೭) – ಪು.ಸಂ. ೫

ಅಶ್ವಿನ್ – ವಿದುಲಾಳನ್ನು ಮದುವೆಯಾಗಲು ಬಯಸಲು ಕಾರಣ, ''ಅಮೆರಿಕನ್ ಜೀವನದ ಅಣು-ರೇಣು ಸವಿದು ತಿಂದುಂಡು ನೋಡಿದ್ದೇನೆ. Girl Friends, Affairs. ಹುಡುಗಿಯರು, ಪ್ರೇಯಸಿಯರು. ಒಂದು ರಾತ್ರಿಯ ಮಜಾ! ಎಲ್ಲಾ ಅನುಭೋಗಿಸಿ... ಆ ಜೀವನದಲ್ಲಿ ಹುರುಳಿಲ್ಲ, ಅರ್ಥವಿಲ್ಲದ ಅಸ್ತಿತ್ವ ಅದು. ಬರೀ ಥಳಕು, ಸದ್ದು... basic ಮೌಲ್ಯಗಳಿಲ್ಲದಿರುವ್ರು''[೧೪] ದರಿಂದ ಇನ್ನೂ ಪಾವಿತ್ರ್ಯ, ನೈರ್ಮಲ್ಯ ಉಳಿಸಿಕೊಂಡಿರುವ ಭಾರತೀಯ ಸ್ತ್ರೀಯಾದ, ''ಯುವತಿ ತನ್ನಲ್ಲಿ ಆರ್ಯಸ್ತ್ರೀಯ ಉಚ್ಚ ಆದರ್ಶಗಳನ್ನೆಲ್ಲ ಮೈಗೂಡಿಸಿಕೊಂಡಿರುತ್ತಾಳೆ. ತಾಯಿಯಾಗಿ– ಪತ್ನಿಯಾಗಿ – ಮಗಳಾಗಿ. ಆ ನಿಷ್ಕಳಂಕ ಸ್ತ್ರೀತ್ವ ತಮ್ಮ ಸಂಸ್ಕೃತಿಯ ಆದರ್ಶ ಅದು''[೧೫] ಎಂಬ ಕಾರಣದಿಂದ ಮಾತ್ರ. ಅಲ್ಲದೆ ತಾನು ಮಾತ್ರ ನೈರ್ಮಲ್ಯವುಳಿಸಿಕೊಳ್ಳದಿದ್ದರೂ ತನಗೆ ನಿರ್ಮಲವಾದ, ಭಾರತೀಯತ್ವದ ಪ್ರತೀಕವಾದ ಕನ್ಯೆಯನ್ನು ಬಯಸುವುದು, ''ಹಿಂದೆ ಬಾಲ್ಯವಿವಾಹವಾಗುತ್ತಿದ್ದರ ಕಾರಣ ವಧು ಕನ್ಯೆಯಾಗಿಯೇ ಇರಬೇಕೆಂಬ ಪುರುಷನ ಅಪೇಕ್ಷೆ. ಇಂದು ವಧುವಿನ ವಯಸ್ಸು ಸ್ವಲ್ಪ ಹೆಚ್ಚಾಗಿದ್ದರೂ ವರನು ಅಪೇಕ್ಷಿಸುವುದು ಅವಳು ಅಕ್ಷತ ಕನ್ಯೆಯಾಗಿಯೇ ಇರಬೇಕೆಂದು.''[೧೬] ಎಂಬ ಅಭಿಪ್ರಾಯವಿದೆ. ವರನಿಗೆ, ಈ ಪುರುಷ ಪರ ಸಮಾಜದಲ್ಲಿ ಯಾವುದೇ ಕಟ್ಟುಪಾಡುಗಳನ್ನು ಅನುಸರಿಸಬೇಕಾಗಿಲ್ಲವೆಂಬ ದಾರ್ಷ್ಟ್ಯವನ್ನು ಆಧುನಿಕ ವಿದ್ಯಾಭ್ಯಾಸ ಪಡೆದು ಸುಶಿಕ್ಷಿತನಾದರೂ ತನ್ನ ಆರ್ಷೇಯ ನಡವಳಿಕೆಗಳನ್ನು ಬದಲಾಯಿಸಿಕೊಂಡಿಲ್ಲದ್ದರ ಧೋರಣೆಯನ್ನು ಕಾಣಬಹುದು.

ಅಷ್ಟೆ ಅಲ್ಲದೆ ತಾನು ಈ ಹಿಂದೆ ಎಲ್ಲ ರೀತಿಯ ಮೋಜಿನ ಜೀವನ ಅನುಭವಿಸಿ ಅದೀಗ ''ಅರ್ಥವಿಲ್ಲದ ಅಸ್ತಿತ್ವ'' ಎಂದು ಮನದಟ್ಟಾದ ನಂತರ ''ತನ್ನ ಹೆಂಡತಿ ತನ್ನನ್ನು ಗೌರವಿಸಬೇಕು. ತನಗೆ ಆಜ್ಞಾಧಾರಕಳಾಗಿರಬೇಕು. ಅದಕ್ಕೆ ಪ್ರತಿಯಾಗಿ ತಾನು ಸಂಸಾರಕ್ಕೆ ನಿಷ್ಠನಾಗಿರುತ್ತೇನೆ, ಬದ್ಧನಾಗಿರತೇನೆ''[೧೭] ಎಂದು ಹೇಳುವ ಮಾತು ಅಶ್ವಿನನ ಸೋಗಲಾಡಿತನದ ಆದರ್ಶವನ್ನು ತೋರುತ್ತದೆ.

ಅಶ್ವಿನ್ ವಿದುಲಾಳನ್ನು ಭೇಟಿಯಾಗಲು ಭಾರತಕ್ಕೆ ಬರುವುದು ಕೂಡ ತನ್ನ ವ್ಯವಹಾರಿಕ ಉದ್ದೇಶದಿಂದಲೇ. ಅಮೆರಿಕನ್ ಬಾಸ್ಕೆಟ್‌ಬಾಲ್ ಟೀಮ್ ಮಲೇಶಿಯಾಕ್ಕೆ ಹೋಗುವ ಸಂದರ್ಭದಲ್ಲಿ ಅದಕ್ಕೆ ಲೀಗಲ್ ಕನ್‌ಸಲ್ಟಂಟ್ ಆಗಿ ಚೆನ್ನೈ ತನಕ ಬಂದಾಗ ಹಾಗೇ ಧಾರವಾಡಕ್ಕೆ ಬಂದು, ವಿದುಲಾಳೊಂದಿಗೆ ಮಾತುಕತೆ ಆಡಿ ಒಪ್ಪಿಗೆಯಾದರೆ ಸಾಂಪ್ರದಾಯಿಕ ಲಗ್ನವಿಧಿ ಬಿಟ್ಟು ರಿಜಿಸ್ಟ್ರಾರ್ ಆಫೀಸಿನಲ್ಲಿ ಮದುವೆಯಾಗುವುದು, ಒಪ್ಪಿಗೆಯಿಲ್ಲದಿದ್ದರೆ ''ಗುಡ್‌ಬೈ ಅಂತಂದು ಮಲೇಶಿಯಾಕ್ಕೆ ಹೋಗಿ ಟೀಮು ಸೇರಿಕೊಳ್ಳುವುದು'' ಹೀಗೆ ಒಂದು ಸಂಕೀರ್ಣವಾದ ವಿವಾಹವನ್ನು ಸರಳೀಕರಣಗೊಳಿಸಿ, ವ್ಯವಹಾರದ ಮಟ್ಟಕ್ಕೆ ಇಳಿಸುವ ಅಶ್ವಿನ್ ಮತ್ತು ಅದೇ ಮದುವೆಯ ಮುಹೂರ್ತದಲ್ಲಿ ರೋಹಿತ–ತಪಸ್ಯಾರ ಮದುವೆಯನ್ನು ಮುಗಿಸಿಬಿಡುವ ಇನ್ನೊಂದು ವ್ಯವಹಾರಿಕತೆ ಗೋಪಾಲ್–ವತ್ಸಲಾ ದಂಪತಿಗಳದ್ದು. ''ನಮ್ಮ ಮಗ ಶರದ್, ಇಂಡಿಯಾಕ್ಕೆ ಬಂದಿದ್ದಾನೆ... ಹೊರಳಿ ಕ್ಯಾನಡಾಕ್ಕೆ ಹೋಗಬೇಕು. ಆಮೇಲೆ ಮತ್ತೆ ಮೂರು ವರುಷ ರಜಾ ಸಿಗೋದಿಲ್ಲಂತೆ. ಆದ್ದರಿಂದಲೇ ನೀನು 'ಹೂಂ' ಅಂತಂದು

---

೧೪ ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ – ಪು.ಸಂ. ೬೭

೧೫. ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ – ಪು.ಸಂ. ೬೮

೧೬ ಡಾ. ಸಿ.ಎನ್. ರಾಮಚಂದ್ರನ್ - ಲೇಖನ : 'ಬದಲಾದಷ್ಟು ಹಿಂದಿದ್ದಂತೆಯೇ' ಪತ್ರಿಕೆ – ಪ್ರಜಾವಾಣಿ ಸಾಪ್ತಾಹಿಕ ಪುರವಣಿ (೨೮ನೇ ಜನವರಿ, ೨೦೦೭) – ಪು.ಸಂ. ೫

೧೭. ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ – ಪು.ಸಂ. ೭೪

ಬಿಟ್ಟರೆ ಸಾಕು, ಅವನು ಹೋಗೋದರೊಳಗೆ ಆರತಕ್ಷತೆ ಮುಗಿಸಿಬಿಡೋಣ ಅಂತಿದ್ದೆವು.''[೧೮] ಎಂದು ತನ್ನ ಮಗಳ ಮದುವೆ ಮುಗಿಸಿ ಜವಾಬ್ದಾರಿ ಕಳೆದುಕೊಳ್ಳಲು ವ್ಯವಹಾರಕ್ಕೆ ಇಳಿಯುವುದು, ವಿವಾಹ ಸಂಸ್ಥೆಯ ಮತ್ತೊಂದು ಮಗ್ಗಲನ್ನು ನಾಟಕ ಪರಿಶೀಲಿಸುತ್ತದೆ. ಅಂದರೆ ಅಪ್ಪ ಪದೇಪದೇ ಹೇಳುವಂತೆ "Marriage is a gamble'' ಒಪ್ಪಿಕೊಳ್ಳಲಿಕ್ಕೇ ಬೇಕು ಲಗ್ನ ಅಂದರೊಂದು ಜೂಜು'' ಎಂಬ ಮಾತು ಮದುವೆಯ ಸಮಸ್ಯೆಗಳನ್ನು, ಅದರೊಳಗಿನ ಲೋಪದೋಷಗಳನ್ನು ಕುರಿತ ಸಮರ್ಥನೆಯಾಗುತ್ತದೆ.

ಇಷ್ಟೆಲ್ಲಾ ಆದರೂ 'ಮದುವೆಯ ಆಲ್ಬಮ್ ಒಳಗೆ, ಅಶ್ವಿನ್–ವಿದುಲಾ, ರೋಹಿತ್ –ತಪಸ್ಯಾರ ಮದುವೆಗಳು ಸೇರ್ಪಡೆಯಾಗುತ್ತವೆ. ರೋಹಿತ್ ತಾನು ಪ್ರೀತಿಸುತ್ತಿದ್ದ ಇಸಬೆಲ್‌ಳನ್ನು ವಂಚಿಸಿ ತಪಸ್ಯಾಳನ್ನು ಮದುವೆಯಾಗುತ್ತಾನೆ. ಅವಳು ಗರ್ಭಿಣಿಯಾಗಿ, ಬಾಣಂತನಕ್ಕೆ ತವರುಮನೆಗೆ ಹೋಗಿದ್ದಂತಹ ಸಮಯದಲ್ಲಿ ಮತ್ತೆ ಆಕಸ್ಮಿಕವಾಗಿ ಸಿಕ್ಕ ಇಸಬೆಲ್‌ಳೊಂದಿಗೆ ತನ್ನ ಪ್ರೇಮ ಮುಂದುವರೆಸುವ ಯತ್ನವನ್ನು ಮಾಡುತ್ತಾನೆ. ಅತ್ತ ಅಶ್ವಿನ್‌ನನ್ನು ಮದುವೆಯಾದ ವಿದುಲಾ, ಗರ್ಭಿಣಿಯಾಗಿ ಮಗುವನ್ನು ಹೆತ್ತು ಆದರ್ಶ ಭಾರತೀಯ ನಾರಿಯಾಗಿ ಗಂಡನೊಂದಿಗೆ ಬಾಳುತ್ತಿರುವ ಸೂಚನೆಯು ನಾಟಕದಲ್ಲಿದೆ. ಈ ಎಲ್ಲಾ ವಿಶ್ಲೇಷಣೆಯು 'ಮದುವೆ'ಯ ಬಗ್ಗೆ ಸಂಬಂಧಿಸಿದ್ದರೆ, ನಾಟಕದೊಳಗೆ ಬಂದಿರುವ ಹಲವಾರು ಸಂಬಂಧಗಳು ಗಂಡು-ಹೆಣ್ಣಿನ ನಡುವಿನ ಲೈಂಗಿಕಾಕಾಂಕ್ಷೆಯ ವಿಷಮತೆಯನ್ನು ಕಟ್ಟಿಕೊಡುತ್ತದೆ.

ಆಯಿ ಮತ್ತು ಅವಳ ಮೈದುನನಾದ ರಾಮದಾಸ್ ನಡುವೆ ನಡೆದಿರಬಹುದಾದ ಸಂಬಂಧದ 'ಎಳೆ'ಯು ನಾಟಕದಲ್ಲಿ ಅಸ್ಪಷ್ಟವಾಗಿ ಕಾಣಸುತ್ತದೆ. ವಿದುಲಾ ಹುಟ್ಟಿದಾಗ ಅವಳ ಜನನ ಪ್ರಮಾಣ ಪತ್ರದಲ್ಲಿ ಅವಳ ತಂದೆಯ ಹೆಸರನ್ನು ಬಿಟ್ಟು ರಾಮದಾಸ ನಾಡಕರ್ಣಿಯ ಹೆಸರು ದಾಖಲಾಗಿರುವುದು ಆಕಸ್ಮಿಕವಲ್ಲ ಎಂದು ಆಯಿಯ ದ್ವಂದ್ವಾತ್ಮಕ ನಡವಳಿಕೆಯಲ್ಲಿಯೂ, ಹೇಮಾ–ರೋಹಿತರ ಸಂಭಾಷಣೆಯಲ್ಲಿ ನಾಟಕ ಕಟ್ಟಿಕೊಡುತ್ತದೆ. ಆಯಿ ರಾಮದಾಸ್, ಮಾಡಿದ್ದು 'ಕುಚೋದ್ಯ' ಎಂದೂ: ಈ ವಿಷಯ ತನ್ನ ಗಂಡನಿಗೆ "ಗೊತ್ತಾದರೆ ಇವರು ಎದೆ ಒಡೆದುಕೊಂಡು ಬಿಡತಾರೆ. ಇವನೂ ಎಲ್ಲಿ ಕೆಲಸ ಬಿಟ್ಟು ಓಡಾಡಬೇಕು. ಫೋರ್ಜರಿ, ಲಂಚ, ಯಾತಕ್ಕೆ ಅದೆಲ್ಲ? ಇಷ್ಟೆಲ್ಲಾ ವರ್ಷ ಯಾವುದೋ ಮುನಿಸಿಪಾಲಿಟಿ ಫೈಲ್‌ನಲ್ಲಿ ಬಿದ್ದುಕೊಂಡಿತ್ತಲ್ಲ, ಹಾಗೇ ಬಿದ್ದುಕೊಂಡಿರಲಿ. ಏನಾಗತದೆ?'' ಎಂಬ ಮಾತಿನಲ್ಲಿ ಕಾಣಬಹುದು. ಅಲ್ಲದೆ ಅವಳು ವಿದುಲಾಳ ಮದುವೆಯ ನಂತರ 'Depression'ಗೆ ಒಳಗಾಗಿ ಸತ್ತುಹೋಗುವುದು ಅವರ ನಡುವೆ ನಡೆದ ಸಂಬಂಧದ ಒತ್ತಡದಿಂದಲೇ ಇರಬಹುದೆಂಬ ಸಂಶಯವನ್ನು ತರಿಸುತ್ತದೆ.

ರೋಹಿತ್– ಹೇಮಾರೂ ಸಹ ಅಪ್ಪ–ಚಿಕ್ಕಪ್ಪರ ನಡುವೆ ಆಗಾಗ್ಗೆ ನಡೆಯುತ್ತಿದ್ದ ಜಗಳ; ಆಯಿ ವಿಷಯಕ್ಕೆ ಸಂಬಂಧಿಸಿದಂತೆ ಚಿಕ್ಕಪ್ಪ ಅಪ್ಪನಿಗೆ ಹೊಡೆಯಲು ಹೋಗುತ್ತಿದ್ದುದು; ಆಯಿ ಸುಂದರವಾಗಿದ್ದುದು; ಈ ಮುಂತಾದ ಅಸ್ಪಷ್ಟವಾದ ಸಂಭಾಷಣೆಗಳು ಆಯಿ–ರಾಮದಾಸ್ ನಡುವೆ ಲೈಂಗಿಕ ಸಂಬಂಧ ನಡೆದಿರಬಹುದಾದ ಅನುಮಾನವನ್ನು ಗಟ್ಟಿಗೊಳಿಸುತ್ತವೆ. ಅಪ್ಪ–ರಾಮದಾಸ್ ನಡುವಿನ ಅಣ್ಣ–ತಮ್ಮನ ವಿನ್ಯಾಸವು 'ಅಗ್ನಿ ಮತ್ತು ಮಳೆ'ಯ ರೈಭ್ಯ – ಭರದ್ವಾಜರ ನಡುವಿನ ವೈಷಮ್ಯದ ಹಾಗೂ ಒಡಕಲು ಬಿಂಬದ ಮಂಜುಳಾ–ಮಾಲಿನಿಯರಂತೆ ಅಕ್ಕ–ತಂಗಿ, ಅಣ್ಣ–ತಮ್ಮಂದಿರ ಸಂಬಂಧದ ನಡುವಿನ 'ದಾಯಾದಿ' ವೈಷಮ್ಯದ ವಿನ್ಯಾಸವನ್ನು ಈ ನಾಟಕದಲ್ಲೂ ಮುಂದುವರೆಸಿದಂತೆ ಕಾಣುತ್ತದೆ.

ಇನ್ನು ಹೇಮಾ- ವಿವಾನ್‌ರ ನಡುವಿನ ಪ್ರೇಮ ಸಂಬಂಧದ ಕತೆ ಸ್ತ್ರೀ ಶೋಷಣೆಯ ಮತ್ತೊಂದು

---

೧೮. ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ – ಪು.ಸಂ. ೨೪

ಮಜಲನ್ನು ತೆರೆದಿಡುತ್ತದೆ. ಪತ್ರಗಳನ್ನು ಬರೆದು ಆ ಮೂಲಕ ತನ್ನ ಪ್ರಣಯಾಪೇಕ್ಷೆಯನ್ನು ತನಗಿಂತ ಎರಡು ಪಟ್ಟು ದೊಡ್ಡವಳಾದ ಮತ್ತು ತನಗಿಂತ ಎರಡು ವರ್ಷ ದೊಡ್ಡ ಮಗನಿರುವ ತಾಯಿ, ಹೇಮಾಳನ್ನು ಪ್ರೀತಿಸುವ 'ಕಿಶೋರ ಪ್ರೇಮ ರೋಗಿ'ಯೊಬ್ಬನ ಆಧುನಿಕ ದಾರ್ಷ್ಟ್ಯತೆಯನ್ನು ಕಾಣಬಹುದು. ಅವನ ಪ್ರೇಮವನ್ನು ಹೇಮಾ ಪ್ರೋತ್ಸಾಹಿಸದಿದ್ದರೂ ನಿರಾಕರಿಸಲಾರಳು. ವಿವಾನ್‌ನ ದಾರ್ಷ್ಟ್ಯಕ್ಕೆ, ಅವನ ಕೆನ್ನೆಗೆ ಹೊಡೆದರೂ ಸಹಾ "ತನ್ನ ಅಸಹಾಯಕತೆಗೆ ತಾನೇ ಸೋತು ಕೊಟ್ಟ 'ಏಟ'ನಿಂದ, ವಿವಾನ್ ಹೊಡಿ, ಇನ್ನೂ ಹೊಡಿ... ನಿನ್ನನ್ನು ನೋಡಿದ ಗಳಿಗೆಯಿಂದ I am crazy about you"[೧೯] ಎಂದು ಮತ್ತೊಂದು ಪತ್ರವನ್ನು ಕೊಡುತ್ತಾನೆ. ಅವನನ್ನು ಮನೆಯಿಂದ ಹೊರದೂಡಿ ಅವನು ಕೊಟ್ಟ "ಎರಡೂ ಪತ್ರಗಳ ಮೇಲೆ ಕಣ್ಣು ಹಾಯಿಸುತ್ತಾಳೆ. ನಾಚಿಕೆಯಿಂದ ಮುಖ ಕೆಂಪೇರುತ್ತದೆ. ಆದರೂ ಸುಖದ ಸಂವೇದನೆಯಿಂದ ಮುಗುಳುನಗು ನಗುತ್ತಾಳೆ"[೨೦] ಎಂಬ ವಿವರಣೆಯಲ್ಲಿ ಹೇಮಾ ವಿವಾನ್‌ನ ಪ್ರೇಮವನ್ನು ಒಪ್ಪಿಕೊಂಡಿರುವುದರ ಸೂಚನೆಯಿದೆ. "ಮೇಲ್ನೋಟಕ್ಕೆ ಹೇಮಾ ಸಮಾಧಾನದಿಂದ ಇರುವಂತೆ ಕಂಡರೂ ಅವಳೊಳಗೆ ಕುದಿಯುತ್ತಿರುವ ಅತೃಪ್ತಿ, ಅವಳು ವಿವಾನ್ ಎಂಬ ಅಪ್ರಬುದ್ಧ ಕಿಶೋರನು ಬರೆಯುವ ಹಸಿಹಸಿ ಕಾಗದಗಳನ್ನು ಓದುವಾಗ ತನಗರಿವಿಲ್ಲದಂತೆಯೇ ಅನುಭವಿಸುವ ಸುಖದ ಸಂವೇದನೆಯಿಂದ ನಮಗರಿವಾಗುತ್ತದೆ."[೨೧] ಎಂಬ ವಿಮರ್ಶೆಯಲ್ಲಿ ಅವಳು ತನಗರಿವಿಲ್ಲದಂತೆ ವಿವಾನ್‌ನ ಪ್ರೇಮವನ್ನು ಸುಖಿಸುತ್ತಾಳೆ, ಎಂಬರ್ಥವಿದೆ. ಆದರೆ ಹೇಮಾ ಅತ್ಯಂತ ಎಚ್ಚರದ ಬೆಳಕಿನಲ್ಲಿಯೇ ಅದನ್ನು ಬಯಸುತ್ತಾಳೆ. ಕೊನೆಯ ದೃಶ್ಯದಲ್ಲಿ ರಾಧಾಬಾಯಿಗೆ ಹೇಮಾ ವಿವಾನ್ ಕೊಡುವ ಪುಸ್ತಕವು ಯಾರ ಕೈಗೂ ಕೊಡದಂತೆ ತಾಕೀತು ಮಾಡುವುದು, ಅವನು ಬರೆಯುವ ಪತ್ರಗಳನ್ನು ಓದಿ ಆನಂದಿಸಲು ಎಂಬುದು ಈ ದೃಶ್ಯಹೊರಡಿಸುವ ಧ್ವನಿಯಾಗಿದೆ. ಆದರೆ ಹೇಮಾಳ ಬಹಿರಂಗ ಪ್ರೋತ್ಸಾಹ ಸಿಗದಿರುವುದರಿಂದ ಅಥವಾ ಅವನ ಹೊಸ ಫ್ರೆಂಡ್–ಅಂಬುಜಾಳೊಡನೆ ತನ್ನ ಪ್ರೇಮ ಮುಂದುವರೆಸುವ ನಿರ್ಧಾರದಿಂದ ಹೇಮಾಳ ಜೀವನದಿಂದ ಆಚೆ ಸರಿಯುತ್ತಾನೆ. ಅವನು ತನ್ನ ಕೊನೆಯ ಪತ್ರವಾಗಿ Blank Paper ಕೊಡುವುದು ಈ ದೃಷ್ಟಿಯಿಂದ ಮಹತ್ವದ್ದಾಗುತ್ತದೆ.

ಇನ್ನು ಹೇಮಾ – ವಿವಾನ್ ಮಾದರಿಯ ಮತ್ತೊಂದು ಪ್ರಣಯದ ಕತೆ, ವಿದುಲಾ ಮತ್ತು ಅಜ್ಞಾತ ವ್ಯಕ್ತಿಯದು. ವಿವಾನ್‌ನ ಪ್ರೇಮವನ್ನು ಹೇಮಾ ಒಪ್ಪಿಕೊಂಡಂತೆ, ವಿದುಲಾಳು ಅಜ್ಞಾತ ವ್ಯಕ್ತಿಯ ಪ್ರಣಯಾಪೇಕ್ಷೆಗೆ ಒಪ್ಪಿಕೊಂಡು ತನ್ನ ಕಾಮನೆಗಳನ್ನು ತೃಪ್ತಿಪಡಿಸಿಕೊಳ್ಳುತ್ತಾಳೆ. ವಿದುಲಾಳು Internet Cafe ಯಲ್ಲಿ ಅಜ್ಞಾತ ದನಿಯ ಮೂಲಕ ತನ್ನ ಅತೃಪ್ತ ಕಾಮನೆಗಳನ್ನು ತೃಪ್ತಿಪಡಿಸಿಕೊಂಡರೆ, ಹೇಮಾ-ವಿವಾನ್ ಪತ್ರದ ಮೂಲಕ ತನ್ನ ಅತೃಪ್ತ ಮನೋಬಯಕೆಗಳನ್ನು ಈಡೇರಿಸಿಕೊಳ್ಳುತ್ತಾಳೆ.

ಇನ್ನೊಂದು ವಿನ್ಯಾಸದಲ್ಲಿ ಅಪ್ರಾಪ್ತ ಬಾಲಕಿಯಾಗಿದ್ದ ವಿದುಲಾಳನ್ನು, ಪ್ರಾಪ್ತಳಾಗಿದ್ದ ಹೇಮಾಳನ್ನು ಅಡುಗೆ ಭಟ್ಟ ನಾಗಪ್ಪ ತನ್ನ ಲೈಂಗಿಕ ಕಾಮನೆಗಳಿಗೆ ಬಳಸಿಕೊಂಡಿರುತ್ತಾನೆ. ಅಂತೆಯೇ ಅಪ್ರಾಪ್ತ ಬಾಲಕ ವಿವಾನ್ ಪ್ರಾಪ್ತ ವಯಸ್ಕಳಾದ ಹೇಮಾಳನ್ನು ತನ್ನ ಪ್ರಣಯತೃಪ್ತಿಗಾಗಿ ಪತ್ರದ ಮೂಲಕ ಕಾಡುವುದು ಪುರುಷ ವರ್ಗದ ಕಾಮುಕ ಮನಸ್ಸಿನ ನಾನಾ ವಯಸ್ಸಿನ ಹಲವು ಆಯಾಮಗಳನ್ನು ತೆರೆದಿಡುತ್ತದೆ. ಹೇಮಾಳಂತೂ

---

೧೯ ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ ೩೬

೨೦. ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ – ಪು.ಸಂ. ೩೬

೨೧ ಡಾ. ಸಿ.ಎನ್. ರಾಮಚಂದ್ರನ್ - ಲೇಖನ : 'ಬದಲಾದಷ್ಟು ಹಿಂದಿದ್ದಂತೆಯೇ' ಪತ್ರಿಕೆ – ಪ್ರಜಾವಾಣಿ ಸಾಪ್ತಾಹಿಕ ಪುರವಣಿ (೨೮ನೇ ಜನವರಿ, ೨೦೦೭) – ಪು.ಸಂ. ೫

ಎಲ್ಲ ಸ್ತ್ರೀ-ಪಾತ್ರಗಳಿಗಿಂತಲೂ ಹೆಚ್ಚಿನ ಶೋಷಣೆಗೆ ಒಳಗಾದವಳು. ಮೊದಲು ಅಪ್ಪ-ಅಮ್ಮನ ಅನಾದರಕ್ಕೆ ಒಳಗಾಗಿರುತ್ತಾಳೆ. ಚಂದ್ರಕಾಂತನನ್ನು ಪ್ರೀತಿಸುತ್ತಿದ್ದು ಅವನಿಂದ ಮದುವೆಗೆ ಮುಂಚೆಯೇ ಗರ್ಭಿಣಿಯಾಗಿರುತ್ತಾಳೆ. ತರಾತುರಿಯಲ್ಲಿ ಮದುವೆ ನಡೆದು ಹೋಗಿ ಅವಳು ಬಯಸಿದಂತೆ ಮದುವೆ ನಡೆಯದಿರುವ ಬಗ್ಗೆ ನೋವು ಅನುಭವಿಸುತ್ತಿರುತ್ತಾಳೆ. ನಾಗಪ್ಪನಿಂದ ಕಾಮಪೀಡನೆಯನ್ನು, ವಿವಾನ್‌ನಿಂದ ಪ್ರೇಮ ಪೀಡನೆಯನ್ನು, ಹಾಗೂ ತನ್ನ ಮಾವನಿಂದ ಕಾಮದೃಷ್ಟಿಯ ಪೀಡನೆಯನ್ನು ಅನುಭವಿಸಿರುತ್ತಾಳೆ. ''ಆ ನೌಕರಿಗಳಲ್ಲೆಲ್ಲ ಹೇಳದೆ ಕೇಳದೆ Transfer ಮಾಡುತ್ತಾರೆ. ಈ ಹೊತ್ತು ಮೆಲಬರ್ನ್, ನಾಳೆ ಜೋಹಾನ್ಸ್‌ಬರ್ಗ್, ನಾಡದ್ದು ಸಿಂಗಪೂರ್, ಅಮೆರಿಕನ್-ಯುರೋಪಿಯನ್ ಹೆಂಗಸರು ಹಾಗೆ ಊರೂರು ಅಲೀಲಿಕ್ಕೆ ತಯಾರಿರೋದಿಲ್ಲ. ಭಾರತೀಯ ಸತಿ ಸಾವಿತ್ರಿಯರು ತುಟಿ ಪಿಟಕ್ಕನ್ನದೆ ಗಂಡನ ಹಿಂದೆ ಹೋಗುತಾರೆ ಅವಕ್ಕಂತನೇ ನಮ್ಮ ಗಂಡಂದಿರಿಗೆ ಆ ಸ್ಥಾನಮಾನ ಸಿಗತದೆ (ತಡೆದು) ನಮ್ಮ ಗಂಡಂದಿರು ಜಗತ್ತನ್ನು ಆಳಲಿ. ಆದರೆ ಆಯಿಗಿಂತ ನನ್ನ ಸ್ಥಿತಿ ಒಂದು ಹೆಜ್ಜೆ ಮುಂದೆ ಹೋಗಿಲ್ಲ''[೨೨] ಎಂಬ ಮಾತಿನಲ್ಲಿ ತಾನು ಪ್ರೀತಿಸಿದ ಗಂಡ ತನ್ನ ಉದ್ದೇಶ ಸಾಧನೆಗಾಗಿ ತನ್ನ ಅಸ್ತಿತ್ವವನ್ನು ಕಡೆಗಣಿಸಿರುವುದರ ಸೂಚನೆಯನ್ನು ನೋಡಬಹುದು. ಈ ನಾಟಕದಲ್ಲಿ ಚಿತ್ರಿತವಾಗಿರುವ ಪ್ರತಿಯೊಂದು ಸ್ತ್ರೀ ಪಾತ್ರಗಳು ಕೂಡ ಪುರುಷರಿಂದ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆಗೊಳಗಾಗಿರುವುದನ್ನು ಕಾಣುತ್ತೇವೆ.

ಬಿ.ಎ. ಓದುವುದನ್ನು ಬಿಡಿಸಿದ ಆಯಿಯ ತಂದೆ, ಆಯಿಯನ್ನು ಊರೂರುಗಳಿಗೆ Transfer ಆಗುವ ಸರ್ಕಾರಿ ಡಾಕ್ಟರ್‌ಗೆ ಮದುವೆ ಮಾಡಿರುತ್ತಾನೆ. ಅವಳ ಚಿಕ್ಕಪುಟ್ಟ ಆಸೆಯು ಈಡೇರಿಸದೆ ಬೇಜವಾಬ್ದಾರಿ ಗಂಡ. ''ನಮ್ಮದೇ ಆದ ಮನೆ ನೋಡೋಣ ಅಂತ ಆಸೆ ಇಟ್ಟುಕೂತರೆ ಬಾಡಿಗೆ ಮನೆಯಲ್ಲೇ ಜೀವನ ಸಂದಿತು. ನಾನು ನನ್ನ ಜೀವನದಲ್ಲಿ ಏನನ್ನೂ ಸಾಧಿಸಲಿಲ್ಲ. ನೀವು ಹುಡುಗಿಯರಾದರೂ ಏನಾದರೂ ಸಾಧಿಸಬಹುದು ಅಂತ ಅಂದುಕೊಂಡೆ. ಈವತ್ತಿನ ಜಗತ್ತಿನಲ್ಲಿ ಎಂಥೆಂಥಾ Opportunities ಇವೆ, ಏನು? ನಾವಾದರೆ ಕನಸು ಮನಸಿನಲ್ಲೂ ಕಾಣೋ ಹಾಗಿದ್ದಿಲ್ಲ.''[೨೩] ಎಂಬ ಆಯಿಯ ವಿಷಾದದ ನುಡಿಗಳಲ್ಲಿ ಆಯಿಯ ತಾಯಿಯ ಪೀಳಿಗೆಯಿಂದ ವಿದುಲಾಳವರೆಗೂ ಸ್ತ್ರೀಯ ಸ್ಥಾನಮಾನಗಳು ಬದಲಾಗಿಲ್ಲವೆಂಬುದನ್ನು ಸೂಚಿಸುತ್ತವೆ.

ರಾಧಬಾಯಿಯ ಮಗಳು ತನ್ನ ಕುಟುಂಬದ ಬಡತನ ನೀಗಲು ಹಳ್ಳಿಯಿಂದ ಬೆಂಗಳೂರಿಗೆ ಸಂಪಾದಿಸಲು ಬಂದು ಸೇಟ್‌ಜೀಯ ಉಪಪತ್ನಿಯಾದಂತೆ, ವಿದುಲಾ ''ನಮ್ಮ ಸಂಪ್ರದಾಯದ, ಸಂಸ್ಕೃತಿಯ ಅತ್ಯುತ್ತಮ ಅಂಶಗಳನ್ನು ಪಶ್ಚಿಮಕ್ಕೆ ಒಯ್ದು, ಅಲ್ಲಿ ಕುಸಿತಿರೋ ಸಂಸ್ಕೃತಿಯನ್ನು ಉಳಿಸುವ' ''ತನ್ನ ಗಂಡನನ್ನು ಗೌರವಿಸುವ... ಆಜ್ಞಾಧಾರಕಳಾಗಲು'' ಧಾರವಾಡದಿಂದ ಅಮೆರಿಕಕ್ಕೆ ಕೊಂಡೊಯ್ಯಲ್ಪಡುತ್ತಾಳೆ. ಸಾವಿತ್ರಿಯನ್ನು ಸೇಟ್‌ಜಿ 'ಇಟ್ಟು'ಕೊಂಡಿದ್ದರೆ, ವಿದುಲಾಳನ್ನು ಅಶ್ವಿನ್ ಕರಾರು ಮಾಡಿ 'ಕಟ್ಟಿ'ಕೊಳ್ಳುತ್ತಾನೆ, ಎಂಬುದನ್ನು ಬಿಟ್ಟರೆ ಸಾವಿತ್ರಿ-ವಿದುಲಾರ ಜೀವನದ ಸ್ವರೂಪದಲ್ಲಿ ಯಾವ ವ್ಯತ್ಯಾಸವೂ ಇಲ್ಲ ಎನ್ನಬಹುದು. ಅಂತೆಯೇ ತಮ್ಮಿಂದ ಜಾರಿಹೋದ ಹೆಣ್ಣುಮಕ್ಕಳನ್ನು ಅಸಹಾಯಕತೆಯ ನೋವಿನಿಂದ ನೋಡುವುದನ್ನೇ ರಾಧಾಬಾಯಿ ಮತ್ತು ಆಯಿಯ ಪಾತ್ರಗಳು ಪ್ರತಿನಿಧಿಸುತ್ತವೆ. ಈ ಸಮಸ್ಯೆ ಎಲ್ಲಾ ಸ್ತ್ರೀಯರು ಅನುಭವಿಸುವ ವೇದನೆಯಾಗಿ ಸಾರ್ವತ್ರಿಕತೆಯನ್ನು ಪಡೆಯುತ್ತದೆ.

'ಮದುವೆಯ ಆಲ್ಬಮ್' ನಾಟಕದಲ್ಲಿ ಅತ್ಯಾಧುನಿಕವಾದ ಇಲೆಕ್ಟ್ರಾನಿಕ್ ಮಾಧ್ಯಮಗಳು ಪ್ರವೇಶವಾಗಿ

---

೨೨. ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ – ಪು.ಸಂ. ೭

೨೩. ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ – ಪು.ಸಂ. ೭೭

ಆಲ್ಬಮ್‌ನಲ್ಲಿ ಭಾರತೀಯ ಸಂಸ್ಕೃತಿ ಪರವಾದ ಒಲವುಗಳನ್ನು ಕಾಣಬಹುದು ಎನಿಸುತ್ತದೆ. ಅಂಜುಮಲ್ಲಿಗೆ ನಾಟಕದಲ್ಲೇ 'ಗೌತಮ'ನ ಪಾತ್ರದ ಮೂಲಕ ಭಾರತೀಯ ಸಂಸ್ಕೃತಿ ಪರವಾಗಿ ತಮ್ಮ ಆಲೋಚನೆಯನ್ನು ಕಾರ್ನಾಡರು ಮಂಡಿಸಿದ್ದರು. ''ಇಂಗ್ಲೆಂಡಿನಲ್ಲಿ ಏನಿದೆ ಮಣ್ಣು?'' ಎಂದುಕೊಂಡು ಅಲ್ಲಿ ನನ್ನ ಶಿಕ್ಷಣ ಮುಗಿದ ಗಳಿಗೆಗೇ ಭಾರತಕ್ಕೆ ಮರಳಿದೆ. ನನ್ನ ಜೀವನದ ದಿಕ್ಕೇ ಬೇರೆಯಾಯಿತು''[೩೦] ಎನ್ನುವ ಕಾರ್ನಾಡರು ಅಶ್ವಿನ್ ಮತ್ತು ಗೌತಮನ ಪಾತ್ರದ ಮೂಲಕವಾಗಿ ಭಾರತೀಯ ಸಂಸ್ಕೃತಿಯ ಮಹತ್ವವನ್ನು ಎತ್ತಿ ಹಿಡಿಯುತ್ತಾರೆ. ಮಾತ್ರವಲ್ಲದೆ, ''ಅಶ್ವಿನ್ ಪಾತ್ರದ ಮೂಲಕ, ಅಮೆರಿಕದಲ್ಲಿಯೇ ನೆಲೆಸಿ, ಅಲ್ಲಿಯ ವ್ಯವಸ್ಥೆಯ ಸಕಲ ಪ್ರಯೋಜನಗಳನ್ನು ಪಡೆದು ಸದಾ ಭಾರತೀಯ ಸಂಸ್ಕೃತಿಯನ್ನು ಕೀರ್ತಿಸುವ ಇಂದಿನ ಭಾರತೀಯರನ್ನು ನಾಟಕಕಾರರು ತೀಕ್ಷ್ಣವಾಗಿ ಹಿಡಂಬಿಸುತ್ತಾರೆ.''[೩೧]

ಒಟ್ಟಿನಲ್ಲಿ 'ಮದುವೆಯ ಆಲ್ಬಮ್' ನಾಟಕವು ಹಲವಾರು ಅರ್ಥಗಳನ್ನು ಒಳಗೊಂಡು ಒಂದು ಮದುವೆಯ ಮೂಲಕ ಒಂದು ಕುಟುಂಬ ವ್ಯವಸ್ಥೆ ಮತ್ತು ವೈವಾಹಿಕ ಸಂಸ್ಥೆಯು ಛಿದ್ರೀಕರಣಕ್ಕೊಳಗಾಗುತ್ತಿರುವ ದುರಂತವನ್ನು ಕಟ್ಟಿಕೊಡುತ್ತದೆ. ''ಒಂದು ರೀತಿಯಲ್ಲಿ ಇದು ಕುಬ್ಜರ ಲೋಕ. ಒಂದು ರೀತಿಯ ಬೇಸರ, ವಿಷಾದ ಹಾಗೂ ಉದಾಸೀನತೆಗಳು ಈ ನಾಟಕದ ದನಿಯನ್ನು ನಿಯಂತ್ರಿಸುತ್ತವೆ.''[೩೨] 'ಸಾಕಾಯ್ತಪ್ಪ ಈ ಜೀವನ' ಬೇಸರ ಎಂದು ನಿಟ್ಟುಸಿರಿನಿಂದ, ಶೂನ್ಯತೆಯಿಂದ ಆರಂಭವಾಗುವ ನಾಟಕ ರಾಧಾಬಾಯಿಯ ಗತಬದುಕಿನ ಸ್ಮೃತಿಯನ್ನು ಮೆಲುಕುವ ದುಃಖದ ಸನ್ನಿವೇಶದೊಂದಿಗೆ ಅಂತ್ಯವಾಗುತ್ತದೆ. ಒಂದಿಲ್ಲೊಂದು ರೀತಿಯಲ್ಲಿ ಸಮಸ್ಯಾತ್ಮಕವಾದ ಸಂಬಂಧಗಳು, ವಿಷಮವಾದ ಬದುಕನ್ನು ಕಾಣಿಸುತ್ತ ಅದು ಮತ್ತೆ ಮತ್ತೆ ಮರುಕಳಿಸುವಂತೆ, ಕತೆಯಾಗುತ್ತಾ, ಟಿ.ವಿ. ಸೀರಿಯಲ್ ಆಗುತ್ತಾ ಒಂದು ಪರಿಧಿಯಲ್ಲೇ ಭ್ರಮಿಸುವ, ಪರಿಹಾರವಿಲ್ಲದ ಸಮಸ್ಯೆಯಾಗಿರುವುದನ್ನು 'ಮದುವೆಯ ಆಲ್ಬಮ್' ಚಿತ್ರಿಸುತ್ತದೆ.

■

ಉಪನ್ಯಾಸಕರು, ಅಮ್ಮಣ್ಣಿ ಕಾಲೇಜು
ಮಲ್ಲೇಶ್ವರ, ಸೈನ್ಸ್ ಇನ್‌ಸ್ಟಿಟ್ಯೂಟ್ ಅಂಚೆ
ಬೆಂಗಳೂರು - ೫೬೦ ೦೧೨
ಮೊಬೈಲ್: ೯೯೦೦೨ ೮೦೭೧೬


---

೩೦. ಗಿರೀಶ್ ಕಾರ್ನಾಡ್ – ಮದುವೆಯ ಆಲ್ಬಮ್ – ಪು.ಸಂ. VII

೩೧ ಡಾ. ಸಿ.ಎನ್. ರಾಮಚಂದ್ರನ್ - ಲೇಖನ : 'ಬದಲಾವಷ್ಟು ಹಿಂದಿದ್ದಂತೆಯೇ' ಪತ್ರಿಕೆ – ಪ್ರಜಾವಾಣಿ ಸಾಪ್ತಾಹಿಕ ಪುರವಣಿ (೨೮ನೇ ಜನವರಿ, ೨೦೦೭) – ಪು.ಸಂ. ೫

೩೨ ಡಾ|| ಜಿ.ಎಸ್. ಆಮೂರ– ಲೇಖನ: ಗಿರೀಶ್ ಕಾರ್ನಾಡರ ಹೊಸ ನಾಟಕ: ಸಂಯುಕ್ತ ಕರ್ನಾಟಕ ೧೪-೧-೨೦೦೭ – ಪು.ಸಂ. ೪

ಸಾಹಿತ್ಯ ಸ್ಪರ್ಧೆ - ೨೦೦೯
ಬಹುಮಾನಿತ ಲೇಖನ



ಅಗ್ನಿ ಮತ್ತು ಮಳೆಯಲ್ಲಿ ಸಂಸ್ಕೃತಿ ಸಂಘರ್ಷ

ಸೌಮ್ಯ ಪಿ.

ವಸ್ತು ಒಂದೇ ಆಗಿದ್ದರೂ ಅದರ ಅಭಿವ್ಯಕ್ತಿ ಕ್ರಮ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ತಾನು ಓದಿದ ಕೃತಿಗಳು, ಕೇಳಿ ತಿಳಿದ ಅಂಶಗಳು, ಅನುಭವಿಸಿದ ಘಟನೆಗಳು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪರಂಪರೆ ಮತ್ತು ಸಮಕಾಲೀನ ಸನ್ನಿವೇಶಗಳು ಒಬ್ಬ ಬರಹಗಾರನ ಮೇಲೆ ಪ್ರಭಾವ ಬೀರುತ್ತವೆ. ಆದರೆ ಈ ಪ್ರಭಾವವನ್ನೆಲ್ಲಾ ಅರಗಿಸಿಕೊಂಡು, ಅವರಲ್ಲಿನ ಸತ್ತ್ವಗಳನ್ನು ತನ್ನದಾಗಿಸಿಕೊಂಡು ತನ್ನದೇ ಆದ ಶೈಲಿಯನ್ನು ರೂಪಿಸಿಕೊಂಡ ಬರಹಗಾರ ಯಾರೇ ಆಗಿರಲಿ; ಪ್ರಕಾರ ಯಾವುದೇ ಆಗಿರಲಿ ಆತ ಗುರುತಿಸಲ್ಪಡುತ್ತಾನೆ.

ಗಿರೀಶ್ ಕಾರ್ನಾಡರ 'ಅಗ್ನಿ ಮತ್ತು ಮಳೆ' ನಾಟಕದ ವಸ್ತು 'ಇದುವೇ'; ಕಾರ್ನಾಡರು ನಾಟಕದಲ್ಲಿ 'ಇದನ್ನೇ' ಹೇಳಲು ಉದ್ದೇಶಿಸಿದ್ದಾರೆ ಎಂದು ಬೊಟ್ಟು ಮಾಡಿ ತೋರಿಸುವುದು ಯಾ ಹೇಳುವುದು ಸಾಧ್ಯವಿಲ್ಲ. ಬ್ರಾಹ್ಮಣ-ಶೂದ್ರ ದ್ವಂದ್ವ, ಹಿಂಸೆ-ಪ್ರೇಮಗಳ ದ್ವಂದ್ವ ಅದೇ ರೀತಿ ಬೌದ್ಧಿಕ ಅಹಂಕಾರ ಮತ್ತು ಮುಗ್ಧ ಜೀವನ ಪ್ರೀತಿಗಳ ನಡುವಿನ ದ್ವಂದ್ವ- ಈ ಎಲ್ಲ ಅರ್ಥ ಪರಂಪರೆಯನ್ನ ಈ ನಾಟಕ ಒಳಗೊಂಡಿದೆ. ಹೀಗಾಗಿ ಇದು ಒಂದು ವರ್ಗದ ಜನರಿಗೆ ಸೀಮಿತವಾಗಿ ಉಳಿಯುವುದಿಲ್ಲ. ಪ್ರತಿ ಓದಿಗೂ ಹೊಸ ಹೊಳಹನ್ನು ನೀಡುವ ಕಾರಣದಿಂದ ಅಗ್ನಿ ಮತ್ತು ಮಳೆಯನ್ನು ಒಂದು ಚೌಕಟ್ಟಿನೊಳಗೆ ಬಂಧಿಸಿಡುವುದು ಸಾಧ್ಯವಾಗುವುದಿಲ್ಲ.

ಗಿರೀಶ್ ಕಾರ್ನಾಡರ ಸಮಗ್ರ ನಾಟಕಗಳ ಕುರಿತಾಗಿ ಅನೇಕ ವಿಮರ್ಶೆಗಳು ಬಂದಿವೆ. ಒಂದು ನಾಟಕವನ್ನು ಹಲವು ದೃಷ್ಟಿಕೋನದಿಂದ ನೋಡಿ ರಸಾನಂದವನ್ನು ಅನುಭವಿಸುವುದು ಸುಲಭದ ವಿಷಯವಲ್ಲ. ಪ್ರಬಂಧ ಒಂದು ಸೂತ್ರದಲ್ಲಿ ಹೆಣೆಯಬೇಕಾದುದರಿಂದ ಒಟ್ಟು ಪ್ರಬಂಧಕ್ಕೆ ಒಂದು

ಚೌಕಟ್ಟಿನ ಅಗತ್ಯವಿರುವ ಒಂದೇ ಒಂದು ಕಾರಣದಿಂದ ಒಟ್ಟು 'ಅಗ್ನಿ ಮತ್ತು ಮಳೆ'ಯ ಕುರಿತಾದ ನನ್ನ ಆಲೋಚನೆಗಳನ್ನು ಹೇಳುತ್ತ ಹೋಗದೆ, 'ಅಗ್ನಿ ಮತ್ತು ಮಳೆಯಲ್ಲಿ ಸಂಸ್ಕೃತಿಗಳೊಳಗಿನ ಸಂಘರ್ಷ' ಎನ್ನುವುದನ್ನು ಕೇಂದ್ರವಾಗಿಟ್ಟುಕೊಂಡು ಕತೆಯನ್ನು ಅಲ್ಲಿನ ವಿಚಾರಗಳನ್ನು ಬಿಡಿಸಿಡುವ ಪ್ರಯತ್ನ ಮಾಡುತ್ತೇನೆ.

'ಅಗ್ನಿ ಮತ್ತು ಮಳೆ'ಯಲ್ಲಿ ಬರುವ ಮುಖ್ಯ ಸಂಸ್ಕೃತಿಗಳು ನಾಲ್ಕು–

೧. ಆರ್ಯ ಅಥವಾ ವೈದಿಕ ಸಂಸ್ಕೃತಿ

೨. ಅನಾರ್ಯ ಅಥವಾ ಅವೈದಿಕ ಸಂಸ್ಕೃತಿ

೩. ಇಂದ್ರಾದಿ ದೇವತೆಗಳ ಸಂಸ್ಕೃತಿ

೪. ಜಾತಿಗಾರರ ಸಂಸ್ಕೃತಿ

ನಾಟಕದ ನಾಯಕ ಅರವಸು ಬ್ರಾಹ್ಮಣ ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅತ್ಯಂತ ಮೇಲ್ವರ್ಗದವನಾಗಿ ಗುರುತಿಸಲ್ಪಟ್ಟವ. ಅದು ಆತನಿಗೆ ಹುಟ್ಟಿನೊಂದಿಗೇ ಅಂಟಿಕೊಂಡು ಬಂದದ್ದು. ನಾಯಕಿ ನಿತ್ತಿಲೆ ಕೆಳವರ್ಗದವಳು. ನಿಷಾದ ಕನ್ಯೆ. ಅರವಸುವಿನ ಅಣ್ಣ ಪರಾವಸು, ತಂದೆ ರೈಭ್ಯ ಇಬ್ಬರೂ ಯಜ್ಞ ನಡೆಸುತ್ತಾ ಯಜ್ಞದ ಬೆಂಕಿಯ ಸುತ್ತ ಬೆಳೆದು ಬಂದವರು ಅಂತೆಯೇ ಆರ್ಯ ಮತ್ತು ಅನಾರ್ಯ ಸಂಸ್ಕೃತಿಯ ಜೊತೆ ಸೇರದ ಹಾಗೆ ತಮ್ಮ ನಡುವೆ ಬೆಂಕಿಯನ್ನು ಇಟ್ಟುಕೊಂಡು ಆ ಮೂಲಕ ಪ್ರತ್ಯೇಕವಾಗಿ ನಿಲ್ಲುತ್ತಾರೆ.

ಕೃತಿಯ ಹೆಸರು ಅಗ್ನಿ ಮತ್ತು ಮಳೆ ಇಡೀ ನಾಟಕದಲ್ಲಿ ಸಾಂಕೇತಿಕ ರೂಪವನ್ನು ತಾಳುತ್ತದೆ. ಅಗ್ನಿ ಮೇಲ್ವರ್ಗವನ್ನು ಬಿಂಬಿಸಿದರೆ ಮಳೆ ಕೆಳವರ್ಗದ ಸಂಕೇತ. ಅಗ್ನಿ ಇಲ್ಲದೆ ಮಳೆ ಇಲ್ಲ. ಮಳೆ ಇಲ್ಲದೆ ಅಗ್ನಿ ಇಲ್ಲ. ಇವೆರಡೂ ಜೊತೆ ಸೇರದ ಹೊರತು ಭೂಮಿಯಲ್ಲಿ ಯಾವುದೂ ಸಾಧ್ಯವಿಲ್ಲ. ಅಗ್ನಿ ಮತ್ತು ಮಳೆ ಎರಡನ್ನೂ ದಕ್ಕಿಸಿಕೊಳ್ಳಬೇಕಾದರೆ ಆರ್ಯ, ಅನಾರ್ಯ ಪ್ರಜ್ಞೆಯಿಂದ ಹೊರಬಂದು ನಿಲ್ಲಬೇಕು. ಅದು ಸಾಧ್ಯವಾಗುವುದು ಅರವಸು ಮತ್ತು ನಿತ್ತಿಲೆಗೆ.

'ಅಗ್ನಿ' ಯಾವಾಗಲೂ ಊರ್ಧ್ವಮುಖಿ. ಮಳೆ ಊರ್ಧ್ವಮುಖಿಯಾಗುವುದು ಅಸಾಧ್ಯ. ಅಗ್ನಿ ಯಾರ ಕೈಗೂ ಸಿಲುಕದಂತೆ ಮೇಲಕ್ಕೆ ಹೋದರೆ ಮಳೆ ಮೇಲಿನಿಂದ ಕೆಳಕ್ಕೆ ಸುರಿದು ಎಲ್ಲವನ್ನೂ ತನ್ನದಾಗಿಸಿಕೊಂಡು ಬಿಡುತ್ತದೆ. ಅಗ್ನಿಯನ್ನೂ ಕೂಡ.

ಅರವಸು ಹುಟ್ಟಿನಿಂದ ಆರ್ಯನಾದರೂ ತನ್ನ ಸಂಸ್ಕೃತಿಯನ್ನು ತ್ಯಜಿಸಿ ಅನಾರ್ಯಳಾದ ನಿತ್ತಿಲೆಯನ್ನು ಪ್ರೇಮಿಸುವುದು ಎರಡು ಸಂಸ್ಕೃತಿಗಳೊಳಗಿನ ಸಂಘರ್ಷಕ್ಕೆ ಹೇತುವಾಗಿ ನಮಗೆ ಕಾಣಿಸುತ್ತದೆ. ತಂದೆ ರೈಭ್ಯನಂತೆ, ಅಣ್ಣ ಪರಾವಸುವಿನಂತೆ ಮಂತ್ರಘೋಷಗಳಲ್ಲಿ ಮುಳುಗಿ ಧೂಮಪಟಲದ ಮರೆಗೆ ನಿಂತು ಸೂಚ್ಯವಾಗಿ ಗೂಢವಾಗಿ ಹೇಳುವುದನ್ನು ಆತ ಇಷ್ಟಪಡುವುದಿಲ್ಲ. ಅಂಧಕ, ನಿತ್ತಿಲೆ, ಅರವಸು ನಡುವಿನ ಮಾತುಕತೆಯಲ್ಲಿ ಹೇಳುವ ಕೆಳಗಿನ ಮಾತು ಇದನ್ನು ಸ್ಪಷ್ಟೀಕರಿಸುತ್ತದೆ.

"ಆದರೆ ಮೊನ್ನೆ ಹಾಗೇ ಕೂತಿದ್ದೆ. ವಿಚಾರ ಮಾಡುತಾ. ಒಮ್ಮೆಲೆ ಯಾಕೆ ಈ ತರಹ ಹುಚ್ಚುಹುಚ್ಚಾಗಿ ಬಾಳತಿದ್ದೇನೆ ಅನಿಸಿತು. ನಾನು ಅಪ್ಪನ ಹಾಗೆ, ಚಿಕ್ಕಪ್ಪನ ಹಾಗೆ ಜ್ಞಾನಿಯಂತೂ ಎಂದೂ ಆಗೋದಿಲ್ಲ. ಅಣ್ಣನ ಹಾಗೆ ಮಹಾಯಜ್ಞದ ಅಧ್ವರ್ಯು ಆಗೋದು ಸಾಧ್ಯ ಇಲ್ಲ. ಯವಕ್ರೀತನ ಹಾಗೆ ತಪಸ್ವೀನೂ ಆಗೋ ಹಾಗಿಲ್ಲ. ನನಗೆ ಹಾಡು ಬೇಕು, ಕುಣಿತ ಬೇಕು, ದಿನ ಬೆಳಗಾದರೆ

ನಿಷಾದರ ಜೊತೆಗೆ ಆಡ್ತಾಡುತ್ತಿರಬೇಕು. ನಿತ್ತಿಲೆ ನನ್ನ ಕಣ್ಣಂಕೆಯಲ್ಲಿ ಇಲ್ಲದೆ ಹೋದರೆ ಸುತ್ತಮುತ್ತಲಿನ ಗಾಳಿನೇ ಕಬಳಿಸಲಿಕ್ಕೆ ಬಂದ ಹಾಗೆ ಆಗತದೆ. ಅಂದಮೇಲೆ ನನಗೆ ಯಾಕೆ ಈ ಜಾತಿಯ ಸೊಕ್ಕು? ಈ ಸಂಬಂಧಿಗಳ ಹಂಗು?''

ನಿಷಾದರ ಕನ್ಯೆ ನಿತ್ತಿಲೆಯನ್ನು ಪ್ರೀತಿಸಿದ ಇವನು ಇವಳಿಗಾಗಿ ತನ್ನ ಜಾತಿ, ಜನ, ಸಂಸ್ಕಾರ, ಆಚಾರಗಳನ್ನೆಲ್ಲ ತೊರೆದು ನಿಂತಿದ್ದಾನೆ. ಅಂಥ ಸಂದರ್ಭದಲ್ಲೂ– ''ನಿಮ್ಮ ಜಾತಿಯ ಹುಡುಗರಿಗೆ ಅದೆಲ್ಲ ಸಲೀಸಾಗಿರಬಹುದುರಿ. ನಾನು ಹೇಳಿ ಕೇಳಿ ಬ್ರಾಹ್ಮಣ, ಮಂತ್ರಘೋಷಗಳಲ್ಲಿ ಮುಳುಗಿ, ಧೂಮಪಟಲದ ಮರೆಗೆ ನಿಂತು ಸೂಚ್ಯವಾಗಿ, ಗೂಢವಾಗಿ ಹೇಳೋದು ಬಿಟ್ಟು ಹೀಗೆ ಘಂಟಾಘೋಷವಾಗಿ...''– ಎನ್ನುವಾಗ 'ಸಂಸ್ಕಾರ'ದ ಪ್ರಾಣೇಶಾಚಾರ್ಯರ ''ಅವನು ಬ್ರಾಹ್ಮಣತ್ವವನ್ನು ಬಿಟ್ಟರೂ ಬ್ರಾಹ್ಮಣ್ಯ ಅವನನ್ನು ಬಿಡಲಿಲ್ಲ'' ಎಂಬ ಮಾತು ನೆನಪಾಗದಿರದು. ''ಒಮ್ಮೊಮ್ಮೆ ಬಹಳ ಸಂಕಟ ಆಗುತ್ತಿತ್ತು. ನಮ್ಮ ಜನರು ಏನೆಂದಾರು ಅಂತ ನೆನೆಸಿದರೆ ಮನಸ್ಸು ಕದಬದಿಸುತ್ತಿತ್ತು.ಬೆವರು ಬಡೀತಿತ್ತು. ದೊಡ್ಡ ತಪ್ಪು ಮಾಡುತ್ತಿದ್ದೇನೇನೋ ಅನ್ನುವ ಉಮ್ಮಳ'' ಅರವಸುವಿಗೆ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿ ಬಂದಾಗಲೆಲ್ಲಾ ಕಾಡುತ್ತದೆ. ನಿತ್ತಿಲೆಯಂತೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳುವುದು ಆತನಿಗೆ ಸಾಧ್ಯವಾಗುವುದಿಲ್ಲ.

ಅರವಸುವಿನ ಸಂಸ್ಕೃತಿ ಆತನಿಗೆ ಬದುಕುವ ರೀತಿಯನ್ನು ಕಲಿಸಿಕೊಟ್ಟಿತು. ಆದರೆ ಮನುಷ್ಯನಿಗೆ ಬೇಕಾದ 'ಪ್ರೀತಿ' ಮಾಯಾಕನ್ನಡಿಯಾಯಿತು. ಅಧ್ವರ್ಯು ಪಟ್ಟಕ್ಕಾಗಿ ಕಿತ್ತಾಡುವ ಅಣ್ಣ-ತಂದೆಯರ ಮಧ್ಯೆ ಅರವಸು ಎಲ್ಲೋ ಕಾಣೆಯಾದದ್ದು ಪರಾವಸುವಿಗಾಗಲಿ, ರೈಭ್ಯರಿಗಾಗಲಿ ತಿಳಿಯುವುದೇ ಇಲ್ಲ. ಅವರು ಎಚ್ಚೆತ್ತುಕೊಳ್ಳುವಾಗ ಅರವಸು ಕಾಡುಜನರ ಮಧ್ಯೆ 'ಜೀವನದ ಪ್ರೀತಿ' ಕಂಡುಕೊಂಡಿರುತ್ತಾನೆ. ನಿತ್ತಿಲೆ ಆತನಿಗೆ 'ಬದುಕು' ಎಂದರೇನು ಎನ್ನುವುದರ ದರ್ಶನ ಮಾಡಿಸುತ್ತಾಳೆ. ಹೀಗಾಗಿಯೇ ಅಣ್ಣನ ಬೆದರಿಕೆ, ಆಮಿಷಗಳು, ಅಪ್ಪನ ತಿರಸ್ಕಾರ ಯಾವುದೂ ಆತನಿಗೆ ಮುಖ್ಯವಾಗುವುದಿಲ್ಲ. ಜಾತಿಯಿಂದ ಬಹಿಷ್ಕೃತನಾದರೂ ಲೇಶವೂ ಬೇಸರ ಪಟ್ಟುಕೊಳ್ಳುವುದಿಲ್ಲ. ಆತನಿಗೆ ಕೈಗೆಟುಕದ ಆಕಾರದ ಒಂದಂಚನ್ನು ಹಿಡಿಯಲು ಹಾತೊರೆಯುವ ಅಗ್ನಿ ಬೇಡ; ಎಲ್ಲರನ್ನೂ ಒದ್ದೆಯಾಗಿಸುವ, ಸತ್ತದ್ದನ್ನೂ ಚಿಗುರಿಸುವ ಶಕ್ತಿಯುಳ್ಳ ಮಳೆ ಬೇಕು. ಅದು ಆರ್ಯ ಸಂಸ್ಕೃತಿ ಅರವಸುವಿಗೆ ಕೊಡುವುದಿಲ್ಲ.

ನಿತ್ತಿಲೆಗಾಗಿ ಅರವಸು ತನ್ನ ಸಂಸ್ಕೃತಿಯನ್ನೇ ಬಿಡುವ ನಿರ್ಧಾರ ಕೈಗೊಂಡಾಗಲೇ ಆತ ಅಣ್ಣ ಅಪ್ಪ, ಬಂಧುಗಳಿಂದ ಎಲ್ಲರಿಂದಲೂ ದೂರವಾಗುತ್ತಾನೆ. ಮೂಲ ಸಂಸ್ಕೃತಿಯನ್ನು ಬಿಟ್ಟು (ಅನಾಗರಿಕ) ಸಂಸ್ಕೃತಿಯನ್ನು ಅಪ್ಪಿಕೊಳ್ಳುವುದು ಅನಿವಾರ್ಯವಾಗುತ್ತದೆ. ಅವೈದಿಕ ಸಂಸ್ಕೃತಿಯ ನಿತ್ತಿಲೆ ತನ್ನ ಸಂಸ್ಕೃತಿಯ ಕುರಿತು ಅಪಾರವಾದ ಅಭಿಮಾನವುಳ್ಳವಳು. ವೈದಿಕ ಸಂಸ್ಕೃತಿಯನ್ನು ತೊರೆದು ಬಂದ ಅರವಸುವನ್ನು ಅವೈದಿಕ ಸಂಸ್ಕೃತಿ ಹಾರ್ದಿಕವಾಗಿ ಸ್ವಾಗತಿಸುತ್ತದೆ. ನಿತ್ತಿಲೆಯ ತಂದೆ, ಅಣ್ಣ ಅರವಸುವನ್ನು ಸ್ವೀಕರಿಸಲು ಒಪ್ಪಿಕೊಳ್ಳುತ್ತಾರೆ.

ವೈದಿಕ ಸಂಸ್ಕೃತಿಯವರಿಗೆ ಅವೈದಿಕ ಸಂಸ್ಕೃತಿಯ ಮೇಲೆ ತಿರಸ್ಕಾರವಿದ್ದರೆ ಅವೈದಿಕ ಸಂಸ್ಕೃತಿಗೆ ಸಂಶಯವಿದೆ. ನಿತ್ತಿಲೆಯು ತನ್ನ ತಂದೆಯ ಕುರಿತಾಗಿ ಹೇಳುವ ಮಾತುಗಳಲ್ಲಿ ಇದು ಪ್ರಕಟವಾಗುತ್ತದೆ.

''ಅಂದರೆ ತಪ್ಪು ಅಪ್ಪನದೇ! ಅವನು ಹಾಗೆ ಯಾಕೆ ಮಾಡಿದ ಗೊತ್ತಿದೆಯೇನು? ಅಪ್ಪ ಯಾವಾಗಲೂ ಅನ್ನುತಿರತಾನೆ, ಈ ಸವರ್ಣೀಯರಿಗೆ ಬೇಡಿತಿಯರು ಇಟ್ಟುಕೊಳ್ಳಲಿಕೆ ಬೇಕು, ಕಟ್ಟಿಕೊಳ್ಳಲಿಕೆ ಬೇಡ ಅಂತ' – ಈ ಕಾರಣದಿಂದಲೇ ಬುಡಕಟ್ಟಿನ ಹಿರಿಯರೆದುರಿಗೆ ಪ್ರಮಾಣ ಮಾಡಲು ಹೇಳುತ್ತಾನೆ.

ಪರಾವಸುವಿನ ಮಡದಿ ವಿಶಾಖೆ ಆರ್ಯ ಸಂಸ್ಕೃತಿಯಲ್ಲಿದ್ದೂ, ಆಶ್ರಮ ಸಂಸ್ಕೃತಿಯ ನಿಯಮವನ್ನು ಮೀರಿ ನಡೆಯುತ್ತಾಳೆ. ಹಿಂದಿನ ಪ್ರೇಮಿ ಯುವಕ್ರೀತನನ್ನು ಮಾತನಾಡಿಸುತ್ತಾಳೆ, ಆಕೆ ತನ್ನನ್ನೇ ಯುವಕ್ರೀತನಿಗೆ ಅರ್ಪಿಸಿಕೊಳ್ಳುತ್ತಾಳೆ. ಯುವಕ್ರೀತನಿಗಾದರೂ ರೈಭ್ಯನ ಜೊತೆಗಿನ ಸೇಡನ್ನು ತೀರಿಸಿಕೊಳ್ಳುವ ಸಾಧನವಾಗಿ 'ವಿಶಾಖೆ' ಕಾಣುತ್ತಾಳೆ. ತಪಸ್ಸಿಗೆ ಹೋದರೂ ಪ್ರೇಯಸಿ ವಿಶಾಖೆಯನ್ನೇ ನೆನಪಿಸಿಕೊಳ್ಳುತ್ತಾನೆ. ಆ ಕಾಡಿನಲ್ಲಿ ತಪಸ್ಸಿಗೆ ಕೂತಾಗಲೂ ವಿಶಾಖೆಯ ಸೌಂದರ್ಯದ ನೆನಪಿನಿಂದ ಹೊರಬರುವುದು ಸಾಧ್ಯವಾಗುವುದಿಲ್ಲ. ಇಂದ್ರಿಯಗಳನ್ನು ನಿಯಂತ್ರಿಸುವಲ್ಲಿ ಸೋಲುತ್ತಾನೆ. ರೈಭ್ಯನೊಂದಿಗೆ ಸೇಡು ತೀರಿಸಿಕೊಳ್ಳುವುದನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಬಂದ ಯುವಕ್ರೀತ ವಿಶಾಖೆಯನ್ನು ಮಾತಿನಿಂದ ಸೋಲಿಸುತ್ತಾನೆ. ''ಇಂದ್ರ ಕೊಡದೆ ಹೋದಂಥ ಜ್ಞಾನ ನಾನು ಕೊಡತೇನೆ, ಯುವಕ್ರೀ ಎಷ್ಟು ದೋಚಿಕೊಳ್ಳಬೇಕೋ, ದೋಚಿಕೋ'' ಎಂದು ಅರ್ಪಿಸಿಕೊಳ್ಳುವಲ್ಲಿ ಆಶ್ರಮ ಸಂಸ್ಕೃತಿ ಅಧಃಪತನದತ್ತ ಸಾಗುತ್ತದೆ.

ಅರವಸು-ನಿತ್ತಿಲೆಯರ ನಡುವಿನ ಪ್ರೀತಿ ಎರಡೂ ಸಂಸ್ಕೃತಿಗೆ ಹಾನಿ ಉಂಟುಮಾಡುವುದಿಲ್ಲ. ಅಂತಹ ಅನಿವಾರ್ಯ ಸಂದರ್ಭದಲ್ಲಿ ಇಬ್ಬರೂ ತಮ್ಮ ಸಂಸ್ಕೃತಿಯ ಕೊಂಡಿಯಿಂದ ಕಳಚಿಕೊಂಡು ಹೊರಬಂದರೆ ಯುವಕ್ರೀ-ವಿಶಾಖಾ ಅದಕ್ಕೆ ತದ್ವಿರುದ್ಧವಾಗಿ ಕಂಡುಬರುತ್ತಾರೆ.

ಪತ್ನಿಯನ್ನು ತನ್ನ ಸಂಶೋಧನೆಗಾಗಿ ಬಳಸಿಕೊಳ್ಳುವ ಪರಾವಸುವಿಗೂ, ಅರವಸು ನಿತ್ತಿಲೆಯನ್ನು ಮಾತನಾಡಿಸಲು ಬಂದದ್ದನ್ನು ತಿಳಿದು, ''ಹೋಗು ಮಾತಾಡಿಸಿ ಬಾ'' ಎಂದ ಯಜಮಾನನಿಗೂ ನಡುವೆ ವ್ಯತ್ಯಾಸವಿದೆ. ಇನ್ನು ಎಲ್ಲರಿಂದಲೂ ಗೌರವಿಸಲ್ಪಡುವ ರೈಭ್ಯನನ್ನು ವಿಶಾಖಾ ಗುರುತಿಸುವುದು 'ಏಡಿ'ಯಾಗಿ... ''ಯುವಕ್ರೀ ಚಿಕ್ಕವನಿದ್ದಾಗ ಎರಡು ಗಳಿಗೆಯ ಕಾಲ ಈ ಏಡಿಯ ಕೊಂಡಿಗಳನ್ನು ಮರೆಸಿಬಿಟ್ಟೆ. ಅದಕ್ಕಾಗಿ ಜೀವ ತೆತ್ತ... ಇಕಾ ಬಂತು! ನಾನೆಲ್ಲಿ ಮಹಾಸತ್ರದ ಅಧ್ವರ್ಯಗಳ ಚಾರಿತ್ರ್ಯವನ್ನು ಕೆಡಿಸಿಬಿಡತೇನೋ ಅಂತ ಕಟಕತಾ ಕಟಕತಾ ಓಡಿ ಬರತಾ ಇದೆ. ಏಡಿ ಅದು ಮತ್ತೆ ನನ್ನನ್ನು ಎಳೆದುಕೊಂಡು ಪರಚಲಿಕ್ಕೆ ಆರಂಭಿಸುವ ಮುನ್ನ ನನ್ನನ್ನು ಮುಗಿಸಿ ಬಿಡಿರಿ...''

ಪರಾವಸುವಿನ ವ್ಯಕ್ತಿತ್ವವೂ ಹೀಗೆಯೇ. ವಿಶಾಖಾ-ಯುವಕ್ರೀತನ ಜೊತೆ ಮಾತನಾಡುತ್ತಾ ''... ಒಂದು ವರ್ಷ ನನ್ನನ್ನು ಹಾಗೇ ಸುಖದಲ್ಲಿ ಮುಳುಗಿಸಿಬಿಟ್ಟ... ಒಂದು ದಿನ ಬೆಳಗ್ಗೆ ಎದ್ದು... 'ಇಂದಿಗೆ ನಮ್ಮ ವಿವಾಹಕ್ಕೆ ಒಂದು ಸಂವತ್ಸರ ಮುಗಿಯಿತು. ಇಂದಿನಿಂದ ಹೊಸ ದಾರಿ, ಹೊಸ ಅನ್ವೇಷಣೆ.' ಅಂದ... ನನ್ನ ಮೈ ಅವನ ಮೈ – ಇವುಗಳ ಅರ್ಥವೇ ಬದಲಾಯ್ತು. ಅವು ಸಾಧನಗಳಾದವು. ಅನ್ವೇಷಣೆಯ ಸಾಧನ... ಎಂಥೆಂಥ ನೋವು, ಅತ್ಯಾಚಾರ, ಗಲೀಜು ಪ್ರಯೋಗಗಳನ್ನು ಈ ನನ್ನ ಮೈ ಉಂಡು ಅರಗಿಸಿಕೊಂಡಿದೆ ಅಂತ ಹೇಳಲಿ?... ತೊಳೆತೊಳೆಯಾಗಿ ಕೊಳೆತು ನಾರೋದು ಕೂಡಾ ಆಧ್ಯಾತ್ಮದ ಪ್ರಸಾದ ಅನ್ನೋದನ್ನು ನಾನು ಅನುಭವಿಸಿದ್ದೇನೆ...''

ವಿಶಾಖಾಳ ಈ ಮಾತಿನ ಮೂಲಕ ಕೊಡುವ ಇಬ್ಬರ ವ್ಯಕ್ತಿತ್ವದ ಚಿತ್ರಣ ವೈದಿಕ ಸಂಸ್ಕೃತಿಯ ಪ್ರತಿಬಿಂಬಗಳು. ವೈದಿಕ ಸಂಸ್ಕೃತಿಯಲ್ಲಿನ ಆದರ್ಶ, ಸಂಪ್ರದಾಯಗಳನ್ನು ಮೀರಿ ನಿಂತು ಕ್ರಾಂತಿಕಾರಿ ವ್ಯಕ್ತಿಯಾಗಿ ತನ್ನದಾದ ಆಸೆ, ಆಕಾಂಕ್ಷೆಗಳನ್ನು ವಿಶಾಖೆ ಅನುಭವಿಸುತ್ತಾಳೆ. ಆದರೆ ಯಾವುದೇ ಪೊಳ್ಳು ಆದರ್ಶಗಳಿಲ್ಲದ, ಸಂಪ್ರದಾಯವಿಲ್ಲದ, ಸ್ವತಂತ್ರಳಾದ ನಿತ್ತಿಲೆ ತನ್ನ ಸಂಸ್ಕೃತಿಯನ್ನು ಮೀರುವುದೂ ಇಲ್ಲ, ಕಳಕೊಳ್ಳುವುದೂ ಇಲ್ಲ.

ವಿಶಾಖಾ-ಪರಾವಸು-ರೈಭ್ಯ- ಯವಕ್ರೀತ ಇವರ ನಡುವೆ ಸಜಾತೀಯ ಸಂಘರ್ಷ ನಡೆದು ಅದು ಇಡೀ ವ್ಯವಸ್ಥೆಯ ಪೊಳ್ಳುತನವನ್ನು ಬಯಲಿಗೆಳೆಯುತ್ತದೆ.

ವೈದಿಕ ಸಂಸ್ಕೃತಿಯ ಸ್ತ್ರೀ ವಿಶಾಖಾ ಮತ್ತು ಅವೈದಿಕ ಸಂಸ್ಕೃತಿಯ ನಿತ್ತಿಲೆಯ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ನಾಟಕದುದ್ದಕ್ಕೂ ನಿತ್ತಿಲೆ ಜೀವನೋತ್ಸಾಹದ ಸಂಕೇತವಾಗಿ ಕಂಡುಬರುತ್ತಾಳೆ. ಅವೈದಿಕ ಸಂಸ್ಕೃತಿಯಲ್ಲಿದ್ದರೂ ವೈದಿಕ ಸಂಸ್ಕೃತಿಯ ಕುಂದು-ಕೊರತೆಗಳನ್ನು ಎತ್ತಿ ತೋರಿಸುತ್ತಾಳೆ. ವೈಚಾರಿಕತೆ ಮೂಡಿಬಂದಿರುವುದೂ ನಿತ್ತಿಲೆಯಲ್ಲೇ ಅಂಧಕನಲ್ಲಿ, ಯವಕ್ರೀತನ ತಪಸ್ಸಿನ ಕುರಿತಾಗಿ ನಿತ್ತಿಲೆ ಕೇಳುವಾಗ ಪ್ರಶ್ನೆ ಬಿಟ್ಟು ನಾಟಕಕ್ಕೆ ಸಂಬಂಧಿಸಿ, ವೈದಿಕ ಸಂಸ್ಕೃತಿಗೆ ಸಂಬಂಧಿಸಿದಂತೆ ಮುಖ್ಯವಾಗುತ್ತದೆ.

೧. ಯವಕ್ರೀತ ಕಾಡಿನಲ್ಲಿ ಹೋಗಿ ಇಷ್ಟು ವರ್ಷ ತಪಸ್ಸು ಮಾಡಿ ಸಿದ್ಧಿಸಿಕೊಂಡದ್ದೇನು? ಅವನ ಸಾವು ಯಾವಾಗ ಅಂತ ಅವನಿಗೆ ಗೊತ್ತಿದೆಯೇನು?

೨. ನಾಡಿಗೆ ಯಾವಾಗ ಮಳೆ ಬರುತ್ತದೆ?

ಈ ಎರಡು ಪ್ರಶ್ನೆಗೂ ಸಮರ್ಪಕ ಉತ್ತರ ಯಾರಲ್ಲೂ ಇಲ್ಲ. ಏಳು ವರ್ಷಗಳಿಂದ ಸರಾಗವಾಗಿ ಸಾಗಿ ಬಂದಿರುವ ಯಜ್ಞದ ಉದ್ದೇಶವೂ ಮಳೆ. ಸಮಸ್ತ ಜನರ ಅಭೀಕ್ಷೆಯೂ ಅದುವೇ.

ಒಂದೆಡೆ ಅಗ್ನಿಯ ಮೂಲಕ ಮಳೆಯನ್ನು ಪಡೆಯುವ ಪ್ರಯತ್ನ ನಡೆಯುತ್ತಿದ್ದರೆ ಅನಾರ್ಯರಿಗೆ ಬಲವಂತವಾಗಿ ಪಡೆದುಕೊಳ್ಳುವ ರೀತಿ ಗೊತ್ತಿಲ್ಲ. ಅವರು ಮಾಡುವ 'ನಾಟಕ'ವೂ ಅವರಿಗೆ ಸಹಜವಾದದ್ದೇ.

ನಾಟಕದ ಒಳಗೆ ನಡೆಯುವ 'ಇಂದ್ರವಿಜಯ'ದಲ್ಲಿ ಇಂದ್ರದೇವನು ವೃತ್ರಾಸುರನೊಡನೆ ಯುದ್ಧ ಮಾಡಿ, ಅವನನ್ನು ಸಂಹರಿಸಿ, ಆ ದಾನವನನ್ನು ತನ್ನ ಹೊಟ್ಟೆಯಲ್ಲಿ ಬಚ್ಚಿಟ್ಟ ಜಲರಾಶಿಗಳನ್ನು ಹೊರತಂದು ಪೃಥ್ವಿಯನ್ನು ಮತ್ತೆ ಹೇಗೆ ಹಸಿರುಗೊಳಿಸಿದನು ಎಂಬ ವಿಷಯಗಳನ್ನೊಳಗೊಂಡದ್ದು. ಅದು ಸಂಪೂರ್ಣ ಸಾಂಕೇತಿಕತೆಯನ್ನು ಪಡೆದುಕೊಳ್ಳುತ್ತದೆ. ವೈದಿಕರ ಕಣ್ಣಿನಲ್ಲಿ ಯಾವುದೇ ಉಪಯೋಗಕ್ಕೆ ಬಾರದವನಾಗಿ ಗುರುತಿಸಲ್ಪಟ್ಟ, ತಂದೆಯ ಮಂದಬುದ್ಧಿ ಎಂದು ಗುರುತಿಸಿದ ಅರವಸುವನ್ನು ನಿತ್ತಿಲೆ ತನ್ನ ಪ್ರೀತಿಯ ಮಳೆಯಲ್ಲಿ ತೊಯ್ಯಿಸಿಬಿಡುತ್ತಾಳೆ. ಒಳ್ಳೆಯ ಆಚಾರಗಳನ್ನು ಬಿಡಬಾರದು ಎಂದು ಅರವಸುವನ್ನು ಎಚ್ಚರಿಸುವ ನಿತ್ತಿಲೆ ಯಾವುದೋ ಕಟ್ಟುಪಾಡಿಗೆ ಸಿಲುಕಿ ತನ್ನ ಜಾತಿಯ ಹುಡುಗನೊಬ್ಬನನ್ನು ವಿವಾಹವಾದರೂ, ಅರವಸು ಜ್ವರದಿಂದ ಜ್ಞಾನತಪ್ಪಿ ಬಿದ್ದಾಗ, ಆತನ ಶುಶ್ರೂಷೆಗೆ ತಯಾರಾಗಿಬರುತ್ತಾಳೆ ಅದಕ್ಕಾಗಿ ತನ್ನ ಜಾತಿಯವರೆಲ್ಲರನ್ನು ಎದುರು ಹಾಕಿಕೊಂಡರೂ ಚಿಂತಿಸುವುದಿಲ್ಲ. ಆಗ ಆಕೆಯನ್ನು ಯಾವ ಆಚಾರ, ಸಂಪ್ರದಾಯಗಳು ತಡೆಯುವುದಿಲ್ಲ.ಅದರ ಆಲೋಚನೆ ಅವಳಿಗಿಲ್ಲ. ಜಾತಿಗಾರ ಹೇಳುವಂತೆ 'ಮುಟ್ಟಿದ್ದೆಲ್ಲವನ್ನು ಚಿಗುರಿಸುವವಳು' ನಿತ್ತಿಲೆ. ಹಾಗೆ ನೋಡಿದರೆ ನಿತ್ತಿಲೆ ಪ್ರಾಣ ಕಳೆದುಕೊಳ್ಳುವುದೂ ಅರವಸುವಿನ ಕಾರಣದಿಂದಲೇ.

ಜ್ವರದ ತಾಪದಲ್ಲಿ ಕಂಗೆಟ್ಟು, ಅಣ್ಣನ ಅಮಾನವೀಯ ವರ್ತನೆಗೆ ಆಘಾತಗೊಂಡ ಅರವಸುವಿನಲ್ಲಿ ಹೊಸ ಚೈತನ್ಯ ಮೂಡುವಂತೆ ಮಾಡುವ ನಿತ್ತಿಲೆ 'ಇಂದ್ರ ವಿಜಯ'ನಾಟಕದಲ್ಲಿ ಅರವಸುವಿನ ಪಾತ್ರದ ಮಹತ್ವವನ್ನು ಬಲ್ಲಳು. ಎಲ್ಲ ಕಾಡು ಮೃಗಗಳ ಹೆಜ್ಜೆಯನ್ನು ಅನುಕರಿಸುವುದೂ ಆತನಿಗೆ ಅನಾಗರಿಕ ಸಂಸ್ಕೃತಿ ಹೇಳಿಕೊಟ್ಟಿದೆ.

ವೈದಿಕ ಸಂಸ್ಕೃತಿಯಲ್ಲಿದ್ದವನಾಗಿದ್ದೂ ನಾಟಕದ ಕೊನೆಗೆ ಅರವಸುವಿಗೆ ಇಡೀ ವೈದಿಕ ಸಂಸ್ಕೃತಿ

ಟೊಳ್ಳು ಅರ್ಥವಾಗಿಬಿಡುತ್ತದೆ. ಪರಾವಸುವಿನ ಕುರಿತು ''ಅವನು– ಅವನ ಹೆಂಡತಿ – ಆ ಬ್ರಾಹ್ಮಣರು ಎಲ್ಲರೂ ನನ್ನ ಹಾದಿಯಲ್ಲಿ ಹೆಣಗಳನ್ನು ಚೆಲ್ಲಿದರು'' ... ಪರಾವಸು ನನ್ನನ್ನು ಸಮೀಪ ಹಾಯಗೊಡುವುದಿಲ್ಲ. ನನಗದು ಮೊದಲಿನಿಂದಲೇ ಗೊತ್ತಿತ್ತು. ಗೊತ್ತಿದ್ದೂ ಹೀಗೆ ಯಾಕೆ ಕೂಗಾಡುತ್ತಿದ್ದೆ ನಿತ್ತಿಲೆ?...'' ಎನ್ನುವ ಮಾತಿನಲ್ಲಿ ಅರವಸು ವೈದಿಕ ಸಂಸ್ಕೃತಿಯಿಂದ ಬಹಳ ದೂರ ಬಂದಿರುವುದರ, ವೈದಿಕ ಸಂಸ್ಕೃತಿ ತನ್ನತ್ತ ಉಳಿದುದನ್ನು ಹಾಯಗೊಡದುದರ ಸೂಚನೆಯಿದೆ.

ಬ್ರಾಹ್ಮಣನಾದ ಅರವಸುವಿಗೆ ವೃತ್ರಾಸುರನ ಪಾತ್ರವನ್ನು ವಹಿಸುವುದರ ಮೂಲಕ ಕಾರ್ನಾಡರು ಹಲವು ಅರ್ಥಗಳನ್ನು ಧ್ವನಿಸುತ್ತಾರೆ. ಇಲ್ಲಿ ರಾಕ್ಷಸೀ ಪ್ರವೃತ್ತಿ ದೈವತ್ವಕ್ಕೆ ವಿರುದ್ಧವಾದುದಲ್ಲ. ಮನುಷ್ಯನಿರಲಿ, ದೇವರಿರಲಿ ತನ್ನ ಅಸ್ತಿತ್ವಕ್ಕಾಗಿ ರಾಕ್ಷಸೀ ಪ್ರವೃತ್ತಿಯನ್ನು ರೂಢಿಸಿಕೊಳ್ಳುತ್ತಾನೆ. ನಾಟಕದ ಪಾತ್ರದ ಮೂಲಕ ಅರವಸು ರಾಕ್ಷಸೀ ಪ್ರವೃತ್ತಿಯನ್ನು ಆಹ್ವಾನಿಸುತ್ತಾನೆ. ಜ್ವರದಲ್ಲಿ ಮಲಗಿದ್ದಾಗ ಅರವಸು ಕಾಣುವ ಕನಸು ಕೂಡ ಇದನ್ನೇ ಧ್ವನಿಸುತ್ತದೆ. ''ಎರೆಹುಳು ನಾನು ನಿನ್ನ ಕೃಪೆಯಿಂದ ಹಾವಾಗುತ್ತಿದ್ದೇನೆ. ಅಹಿಯಾಗುತ್ತಿದ್ದೇನೆ. ಬಾ ವೃತ್ರ ಬಾ ನನಗೆ ಇಂದ್ರನನ್ನು ನುಂಗಬಲ್ಲ ಬಾಯಿ ಕೊಡು. ಅವನನ್ನು ನುಂಗಿ ಅರಗಿಸಬಲ್ಲ ಜಠರಾಗ್ನಿ ಕೊಡು'' ಎಂದು ಹೇಳುತ್ತಾನೆ. ತನಗಾದ ವಂಚನೆಗೆ ಸೇಡು ತೀರಿಸಬಯಸುವ ಅರವಸು ಹಾಗೂ ತನ್ನ ಸ್ವಾರ್ಥಕ್ಕಾಗಿ ರಾಕ್ಷಸತನವನ್ನು ತೋರ್ಪಡಿಸುವ ಪರಾವಸು ಇವರನ್ನು ವೃತ್ರಾ ಮತ್ತು ಇಂದ್ರರಿಗೆ ಸಮೀಕರಿಸಿ ನೋಡಬಹುದು.

ನಾಟಕದಲ್ಲಿ ಅರವಸು ನಟ ಮತ್ತು ಪಾತ್ರದ ನಡುವಿನ ಅಂತರವನ್ನು ಕಾಯ್ದುಕೊಳ್ಳಲು ಶಕ್ತನಾಗುವುದಿಲ್ಲ. ಬಹುಶಃ ಅವನ ಆಯ್ಕೆಯೂ ಅದೇ ಆಗಿತ್ತು. ನಾಟಕದ ಯಜ್ಞಶಾಲೆ ಬಿಟ್ಟು, ನಿಜವಾದ ಯಜ್ಞಭೂಮಿಯತ್ತ ನುಗ್ಗಿದ 'ವಿಶ್ವರೂಪ' (ಅರವಸು) ''ನಾನು ರಾಕ್ಷಸ! ಅಡ್ಡ ಬಂದವರನ್ನು ಸಿಗಿದು ಹಾಕುತ್ತೇನೆ. ಅವರ ಕರುಳು ತಿನ್ನುತ್ತೇನೆ. ನಾನು ಬ್ರಾಹ್ಮಣ, ನೀವು ಅಡ್ಡ ಬಂದರೆ ನನ್ನನ್ನು ನಾನೇ ಕೊಂದುಕೊಳ್ಳುತ್ತೇನೆ. ಆಗ ಬ್ರಹ್ಮಹತ್ಯೆಯ ಪಾತಕ ನಿಮ್ಮ ತಲೆಯ ಮೇಲೆ ಎಂದು ಚೀರುತ್ತಾ 'ಇಂದ್ರ ಬೇಕು. ಎಲ್ಲಿ ಅವನು?'' ಎಂದು ಪರಾವಸುವನ್ನು ಆಕ್ರಮಿಸಲು ಹೋಗುತ್ತಾನೆ. ಕೊನೆಗೆ ಆವೇಶವಿಳಿದಾಗ 'ಅವನನ್ನು ಧ್ವಂಸ ಮಾಡುವುದು ನನ್ನಿಂದಾಗಲಿಲ್ಲ' ಎಂದು ಕೊರಗುತ್ತಾನೆ. ''ಅವನು ಕರ್ಪೂರ ಉರಿದ ಹಾಗೆ ಉರಿದುಹೋದ. ನನಗೆ ಅಗ್ನಿ ಮುಟ್ಟಲೇ ಇಲ್ಲ ಅಥವಾ ನಾನೇ ಹೇಡಿಯಾಗಿ ತಪ್ಪಿಸಿಕೊಂಡೆನೋ ಎಂದು ಚಿಂತಿಸುತ್ತಾನೆ.

ತಂದೆಯ, ಯಜಮಾನನ, ಅಣ್ಣನ ಕೋಪಕ್ಕೆ ನಿತ್ತಿಲೆ ಆಹುತಿಯಾಗುತ್ತಾಳೆ. ಅದರೊಂದಿಗೆ ವೈದಿಕ ಸಂಸ್ಕೃತಿಯ ಪರಾವಸು, ಅವೈದಿಕ ನಿತ್ತಿಲೆ ಇಬ್ಬರ ಸಾವೂ ಸಂಭವಿಸಿದಂತಾಯ್ತು. ನಿತ್ತಿಲೆಯ ಮರಣದಿಂದ ಜೀವನ ಪ್ರೀತಿಯನ್ನೇ ಕಳೆದುಕೊಂಡು ಅರವಸು ಯಜ್ಞಕ್ಕೆ ಆಹುತಿಯಾಗಲು ನಿತ್ತಿಲೆಯ ಶವವನ್ನು ಎತ್ತಿಕೊಂಡು ಹೊರಡುತ್ತಾನೆ. ಆದರೆ ಪರಾವಸುವನ್ನು ಸ್ವೀಕರಿಸಿದ 'ಯಜ್ಞ' ಅರವಸು, ನಿತ್ತಿಲೆಯರನ್ನು ಸ್ವೀಕರಿಸುವುದಿಲ್ಲ. ಪರಾವಸುವಿನೊಂದಿಗೇ 'ಯಜ್ಞ'ವೂ ಕೊನೆಗೊಂಡಿರಬೇಕು. ಆದರೆ ಇಂದ್ರಾದಿದೇವತೆಗಳು ಇವರನ್ನು ಸ್ವೀಕರಿಸುತ್ತಾರೆ.

ದೇವೇಂದ್ರ ಅರವಸುವಿಗೆ ವರವನ್ನು ದಯಪಾಲಿಸಿದರೂ ಅರವಸು ತನ್ನೆದುರಿದ್ದ ಮೂರು ಆಯ್ಕೆಗಳಲ್ಲಿ ಒಂದನ್ನು ಆರಿಸಲಾಗದೆ ತಳಮಳಗೊಳ್ಳುತ್ತಾನೆ. ಕೊನೆಗೆ ಬ್ರಹ್ಮ ರಾಕ್ಷಸನ ಮುಕ್ತಿಯನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಆದರೆ ಏನೂ ಆಗುವುದಿಲ್ಲ. ಆದರೆ ಅರವಸು ಕೇಳದೆ ಮಳೆ ಸುರಿಯುತ್ತದೆ. ನಿತ್ತಿಲೆಯೇ ಮಳೆಯಾಗಿ ಸುರಿದಳೋ ಅನ್ನುವ ಶಂಕೆಯನ್ನು ನಾಟಕ ಓದುಗರಲ್ಲಿ ಉಳಿಸಿಬಿಡುತ್ತದೆ.

ಅಗ್ನಿಯೊಂದಿಗೆ ಆರಂಭವಾಗುವ ನಾಟಕ 'ಮಳೆ'ಯೊಂದಿಗೆ ಅಂತ್ಯಗೊಳ್ಳುತ್ತದೆ. ಅಗ್ನಿ ಮಳೆಯಾಗಿ ಹರಿಯುತ್ತದೆ. ಬೌದ್ಧಿಕ ದುರಹಂಕಾರ ಇಲ್ಲವಾಗಿ ಅಲ್ಲಿ ಮುಗ್ಧ ಜೀವನ ಪ್ರೀತಿ ಉಳಿದುಬಿಡುತ್ತದೆ. ಅಗ್ನಿಯ ಮೂಲಕ ಮಳೆ ವೈದಿಕರ ದೃಷ್ಟಿ. ಅದು ಇಲ್ಲಿ ಸಾಧಿತವಾಗುವುದಿಲ್ಲ. ವರ್ಷಾನುಗಟ್ಟಲೆ ಯಾರೂ ಬರದ ಹಾಗೆ ಸುತ್ತ ಬೇಲಿ ಹಾಕಿ ಯಜ್ಞ ಮಾಡಿಯೂ ಪರಾವಸುವಿಗೆ 'ಮಳೆ' ಸಿಗುವುದಿಲ್ಲ. ಅದರಲ್ಲಿ ನೆನೆಯುವುದು ಅರವಸು ಮಾತ್ರ. ಅದು ಸಾಧ್ಯವಾಗುವುದು ನಿತ್ತಿಲೆಯ ಮೂಲಕ.


ಆರ್ಯ-ಅನಾರ್ಯರ ನಡುವಿನ ಸಂಘರ್ಷ ಇಂದು ನಿನ್ನೆಯದಲ್ಲ. ಈ ಕುರಿತಾದ ಚರ್ಚೆ ಈಗಲೂ ನಡೆಯುತ್ತಲೇ ಇದೆ ಎನ್ನುವಾಗ ಅದರ ಗಂಭೀರತೆ ಮತ್ತು ಪ್ರಸ್ತುತತೆಯ ಅರಿವಾಗುತ್ತದೆ. ಇಂತಹ ಸಂದರ್ಭದಲ್ಲಿ 'ಅಗ್ನಿ ಮತ್ತು ಮಳೆ' ಸಾಂಕೇತಿಕ ಅರ್ಥಗಳನ್ನು ಧ್ವನಿಸುತ್ತ ಒಳಗೆ ಹೊಕ್ಕಲು ಪ್ರಯತ್ನಿಸಿದಷ್ಟೂ ಹಿಂದೆ ಮುಂದೆ ಸುತ್ತಿಸುತ್ತಾ ಎಲ್ಲೆಲ್ಲಿಗೋ ಕರೆದೊಯ್ಯುತ್ತದೆ. ಸರಳವಾಗಿ ತೋರುವುದು ಹತ್ತಿರ ಹೋದಾಗ ಸಂಕೀರ್ಣವೆನಿಸುತ್ತದೆ. ಒಂದು ತುದಿಯನ್ನು ಹಿಡಿದು ಎಳೆಯ ಹೊರಟರೆ ಜೇಡನ ಬಲೆಯಂತೆ ಸುತ್ತಿಕೊಂಡು ಎಲ್ಲಿಂದ ಹೊರಟಿದ್ದೇವೋ, ಅಲ್ಲಿಗೆ ಬರಲು ತಡಕಾಡಬೇಕಾಗುತ್ತದೆ. ತನ್ನ ಅರ್ಥದ ಪದರವನ್ನು ಸುಲಭವಾಗಿ ತೆರೆಯಬಿಡದೆ ಭೂತಕಾಲವನ್ನು ತಿರುವಿ ಹಾಕಲು ಪ್ರೇರೇಪಿಸುತ್ತದೆ. ಓದಿದಷ್ಟೂ ಹೊಸ ಹೊಸ ಹೊಳಹುಗಳನ್ನು ತೋರಿಸುತ್ತಾ ನಿಲ್ಲುವ 'ಅಗ್ನಿ ಮತ್ತು ಮಳೆ' ಬದುಕಿನ ಕುರಿತು ಗಂಭೀರವಾಗಿ ಚಿಂತಿಸುವಂತೆ ಮಾಡುತ್ತದೆ.

ಗ್ರಂಥ ಋಣ:

★ 'ಅಗ್ನಿ ಮತ್ತು ಮಳೆ' – ಗಿರೀಶ ಕಾರ್ನಾಡ – ೨೦೦೩
★ ಕಾರ್ನಾಡರ ನಾಟಕ ಪ್ರಪಂಚ – ಮಾಧವ ಕುಲಕರ್ಣಿ
★ ಸಾಹಿತ್ಯ ಸಂಸ್ಕೃತಿ – ನರಹಳ್ಳಿ ಬಾಲಸುಬ್ರಹ್ಮಣ್ಯ

■

D/o ಪಿ. ಮಹಾಲಿಂಗಭಟ್
ಪಳ್ಳಮನೆ, ಮುದು ಗ್ರಾಮ ಮತ್ತು ಅಂಚೆ
ಕುಂಬಳೆ, ಕಾಸರಗೋಡು - ೬೭೧ ೩೨೧
ದೂರವಾಣಿ : ೦೪೯೯೮-೨೪೬೬೦೬



ಸಾಹಿತ್ಯ ಸ್ಪರ್ಧೆ - ೨೦೦೯
ಬಹುಮಾನಿತ ಲೇಖನ

ಕನ್ನಡ ಸಿನಿಮಾ: ಸದ್ಯದ ಸಾಧ್ಯತೆ ಮತ್ತು ಸವಾಲುಗಳು

ಕೆ.ಎಲ್.ಚಂದ್ರಶೇಖರ್ ಐಜೂರ್

Cinema is the most beautiful fraud in the world.

Jean Luc Godard

ನನ್ನ ಪ್ರಕಾರ ಸಿನಿಮಾ ಅಂದರೆ ನಾಲ್ಕು ನೂರು ಪುಟಗಳ ಕಾದಂಬರಿಯೊಂದನ್ನು ಓದುಗನೊಬ್ಬ ಲೇಖಕ ಆ ಕೃತಿ ಬರೆಯುವಾಗ ತೋರಿದ ನಿಷ್ಠೆ, ಪ್ರಮಾಣಿಕತೆಗಳನ್ನು ಬದಿಗೊತ್ತಿ ತನಗೆ ಸರಿಕಂಡ ಕ್ರಮಗಳಲ್ಲಿ ಗ್ರಹಿಸುತ್ತಾ ಹೋಗಿ ಕಡೆಗೆ ಲೇಖಕನನ್ನೂ ಮೀರಿ ತನ್ನ ಓದಿನ ಗ್ರಹಿಕೆಯನ್ನು ವಿಸ್ತರಿಸಿಕೊಳ್ಳುತ್ತಾನೆ. ಇಲ್ಲಿ ಎಲ್ಲರಿಗೂ ಗಂಭೀರ ಕಾವ್ಯ, ಕತೆ, ಕಾದಂಬರಿಗಳನ್ನು ಬರೆಯಲು ಸಾಧ್ಯವಾಗದಿರಬಹುದು, ಆದರೆ ಯಾರೂ ಬೇಕಾದರೂ ಗಂಭೀರ ಓದುಗರಾಗಬಹುದು. ಆದರೆ ಸಿನಿಮಾಗಳಲ್ಲಿ ಈ ಅವಕಾಶಗಳಿಲ್ಲ. ನಾಲ್ಕು ನೂರು ಪುಟಗಳ ಸಾಹಿತ್ಯ ಕೃತಿಯೊಂದನ್ನು ಓದುಗನೊಬ್ಬ ಓದುವಾಗ ಖರ್ಚು ಮಾಡಿದ ಒಂದು ಪಾಲನ್ನು ಸಿನಿಮಾ ಎಂಬ ರೆಡಿಮೇಡ್ ಪ್ಯಾಕ್ಡ್ ಫುಡ್ ಮೇಲೆ ಖರ್ಚು ಮಾಡಿದರೆ ಸಾಕು, ಅದೇ ನಾಲ್ಕು ನೂರು ಪುಟಗಳ ಸಾಹಿತ್ಯ ಕೃತಿಯನ್ನು ಎರಡು, ಎರಡೂವರೆ ಗಂಟೆಗಳಲ್ಲಿ ತಿಂದು ಮುಗಿಸಬಹುದು. ಜೀರ್ಣಸಿಕೊಳ್ಳುವುದು ಆಮೇಲಿನ ಮಾತು.

ಕನ್ನಡ ಸಿನಿಮಾಗಳ ಐವತ್ತು, ನೂರು ದಿನಗಳ ವಾಲ್‌ಪೋಸ್ಟರ್‌ಗಳನ್ನು ರಸ್ತೆಬದಿ ಕಂಡಾಗ ಮಾತ್ರ ಗೆಳೆಯರ ದುಡ್ಡಿನಲ್ಲಿ ಪುಕ್ಕಟೆ ಸಿನಿಮಾ ನೋಡುವ ಸಾಹಸಕ್ಕೆ ಕೈಹಾಕುವ ನನ್ನಂಥವರಿಗೆ ಕನ್ನಡ ಸಿನಿಮಾಗಳೆಂದರೆ ಅಷ್ಟಕಷ್ಟೇ. ಜಗತ್ತಿನ ಯಾವ ಮೂಲೆಯಲ್ಲೂ ತಯಾರಾಗದ, ಮತ್ತಿನ್ಯಾರೂ ತಯಾರು ಮಾಡಲಿಕ್ಕಾಗದ ಕಳಪೆ ದರ್ಜೆ ಸಿನಿಮಾಗಳು, ಮನುಷ್ಯರು ನೋಡಲಿಕ್ಕಾಗದ ಸಿನಿಮಾಗಳು, ಜನರನ್ನು

ಬಿಚ್ಚಿಟ್ಟು ಕೇವಲ ಪ್ರಶಸ್ತಿಗಾಗಿ ತಯಾರಾಗುವ ಸಿನಿಮಾಗಳು, ಅತಿ ಕೀಳು ಅಭಿರುಚಿಯ ಸಿನಿಮಾಗಳು, ಸಿನಿಮಾದ ಅಸಲಿ ಗಂಧಗಾಳಿ ಗೊತ್ತಿಲ್ಲದವರು ನಿರ್ಮಿಸುವ ಚಿತ್ರಗಳು, ಸಿನಿಮಾ ತಯಾರಿಕೆಗೆ ಬೇಕಿರುವ ಕನಿಷ್ಠ ಪ್ರಾಥಮಿಕ ವ್ಯಾಕರಣ ಗೊತ್ತಿಲ್ಲದವರು ನಿರ್ದೇಶಿಸುವ ಚಿತ್ರಗಳು, ಕಮರ್ಷಿಯಲ್ ಕಲಾತ್ಮಕ ಅನ್ನುವುದಕ್ಕಿಂತ ಅತಿ ಕಡಿಮೆ ಒಳ್ಳೆಯ ಚಿತ್ರಗಳನ್ನು ಅತಿ ಹೆಚ್ಚು ಕೆಟ್ಟ ಮತ್ತು ಭೀಕರ ಪರಿಣಾಮ ಬೀರುವ ಚಿತ್ರಗಳು, ಗಲ್ಲು ಶಿಕ್ಷೆಗೆ ಒಳಪಟ್ಟ ಕೈದಿಯೊಬ್ಬ ಈ ಸಿನಿಮಾಗಳಿಗಿಂತ ಗಲ್ಲು ಶಿಕ್ಷೆಯೇ ವಾಸಿ ಎನ್ನುವಂತೆ ಮಾಡಿದ ಸಿನಿಮಾಗಳು... ಇಲ್ಲಿ ಅಂದರೆ ಅಖಂಡ ಕರ್ನಾಟಕ ರಾಜ್ಯದ ಕನ್ನಡ ಭಾಷೆಯಲ್ಲಿ ಮಾತ್ರ ರೂಪುಗೊಳ್ಳುತ್ತವೆ ಎಂಬುದು ನನ್ನ ಗ್ರಹಿಕೆ. ಈ ಬಗೆಯ ಸಿನಿಮಾಗಳನ್ನು ನೋಡಲು ಬರೀ ಕಣ್ಣಿದ್ದರೆ ಸಾಲದು ತಟಸ್ಥವಾಗಿ ನೋಡುವ ಎದೆಗಾರಿಕೆಯೂ ಬೇಕು.

ನೆರೆಯ ತಮಿಳು, ತೆಲುಗು, ಮಲಯಾಳಂ ಸಿನಿಮಾಗಳು ಕಾಲಕಾಲಕ್ಕೆ ಸಿನಿಮಾದ ಕಥೆ, ಚಿತ್ರಕಥೆಗಳ ವಸ್ತು, ನಿರೂಪಣೆಯ ತಂತ್ರಗಾರಿಕೆಯನ್ನು ಅಪ್‌ಡೇಟ್ ಮಾಡಿಕೊಂಡು ಹೋಗುತ್ತಿರುವಾಗ ಇಲ್ಲಿನವರು ಅಂದರೆ ಗಾಂಧಿನಗರದ ಇಂಗುಮರ್ರು ಬಗುರ್ಮನ್ನುಗಳು, ಅಕಿರೋ ಕುರಸೋವಾಗಳು ತಮಿಳು, ತೆಲುಗು, ಮಲಯಾಳಂನವರು ಎಸೆದ ಎಂಜಲನ್ನು ಪವಿತ್ರ ತೀರ್ಥದಂತೆ ಸ್ವೀಕರಿಸುತ್ತಿರುವ ದೃಶ್ಯಗಳನ್ನು ನೋಡಲು ೭೦ಎಂಎಂ ಪರದೆಯೇ ಬೇಕಿಲ್ಲ. ನಮ್ಮ ಜನಕ್ಕೆ ಸೂಕ್ಷ್ಮತೆಯೊಂದಿದ್ದರೆ ಸಾಕಿತ್ತು ಕನ್ನಡ ಸಿನಿಮಾಗಳ ನಟರಲ್ಲದ ಈ ಪುಡಿ ನಟರ ಅಭಿಮಾನಿ ಸಂಘಗಳನ್ನು ಕಟ್ಟಲು ಹೋಗುತ್ತಿರಲಿಲ್ಲ, ತೆರೆಯ ಮೇಲೆ ಹತ್ತಿಪ್ಪತ್ತು ಜನರನ್ನು ಹೊಡೆದದ್ದೇ ತಡ ನಮ್ಮನ್ನಾಳುವ ಪ್ರಭುತ್ವದ ಕುರ್ಚಿಯ ಮೇಲೆ ಕೂರಿಸಲು ಮುಜುಗರಪಡುತ್ತಿದ್ದರು.

ಕನ್ನಡ ಸಿನಿಮಾದ ಸದ್ಯದ ಸಾಧ್ಯತೆ ಸವಾಲುಗಳನ್ನು ಹೇಳುವಾಗ ಮೇಲಿನ ಮಾತುಗಳನ್ನು ಕನ್ನಡ ಸಿನಿಮಾ ವರ್ತಮಾನದಲ್ಲಿ ತಲುಪಿರುವ ರಸಾತಳವನ್ನು ಕಂಡು ಖೇದಕರವಾಗಿ ಹೇಳಬೇಕಾಯಿತು. ಜಾಗತಿಕ ಸಿನಿಮಾ ರಂಗದಲ್ಲಿ ನೆರೆಯ ತಮಿಳು ಚಿತ್ರರಂಗಕ್ಕಿರುವಂತಹ ದೊಡ್ಡ ಮಾರುಕಟ್ಟೆ ಗಾಂಧಿನಗರದಲ್ಲಿ ತಯಾರಾಗುವ ಕನ್ನಡ ಚಿತ್ರಗಳಿಗೆ ಖಂಡಿತ ಇಲ್ಲ. ಕೋಲಾರ, ಬಳ್ಳಾರಿ, ಹೈದ್ರಾಬಾದ್-ಕರ್ನಾಟಕ, ಉತ್ತರ ಕರ್ನಾಟಕದ ಗಡಿ ಭಾಗದ ಜಿಲ್ಲೆಗಳಲ್ಲಿ ಕನ್ನಡ ಸಿನಿಮಾಗಳನ್ನು ಸಿನಿಮಾ ಮಂದಿರಗಳಲ್ಲಿ ಬಿಟ್ಟೆ ತೋರಿಸಿದರು ಜನ ಅತ್ತ ತಲೆ ಹಾಕುವುದಿಲ್ಲ. ಯಾಕೆ ಹೀಗಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಗಾಂಧಿನಗರದ ಖಾಲಿ ತಲೆಗಳಿಗೆ ಪುರುಸೊತ್ತಿಲ್ಲ. ರೈತರಿಗೆ, ಶ್ರಮಿಕ ವರ್ಗಕ್ಕೆ, ಕೂಲಿ ಕಾರ್ಮಿಕರಿಗೆ ಸಿಗದ ಸಬ್ಸಿಡಿಗಳು, ಸವಲತ್ತುಗಳು ಈ ಸಿನಿಮಾದವರಿಗೆ ಸಿಗುತ್ತಿದೆ. ಕನ್ನಡ ಭಾಷೆ, ಸಂಸ್ಕೃತಿಯ ರಕ್ಷಣೆಯನ್ನು ನಾವು ಸಿನಿಮಾಗಳ ಮೂಲಕ ಎತ್ತಿಹಿಡಿಯುತ್ತಿದ್ದೇವೆ ಎಂದು ಸರ್ಕಾರದ ಸಬ್ಸಿಡಿಗೆ ಅರ್ಜಿ ಹಾಕುವವರ ಸಿನಿಮಾಗಳನ್ನು ಒಮ್ಮೆ ನೋಡಿದರೆ ಸಾಕು ಕನ್ನಡ ಭಾಷೆಯನ್ನು ಪ್ರೇಕ್ಷಕರ ಅಭಿರುಚಿಯನ್ನು ಹೇಗೆಲ್ಲ ಅತ್ಯಾಚಾರ ಮಾಡಬಹುದೆಂಬ ಹೊಸ ಬಗೆಯ ವಿಧಾನಗಳನ್ನು ಈ ಜನ ಯಾವುದೇ ಲಜ್ಜೆಯಿಲ್ಲದೆ ಹೇಳಿಕೊಡಬಲ್ಲರು.

ಗಡಿ ಪ್ರದೇಶದಲ್ಲಿರುವ ಜನ ಏಕಕಾಲಕ್ಕೆ ಎರಡು ಭಾಷೆಗಳ ಮೇಲೆ ಹಿಡಿತ ಹೊಂದಿರುತ್ತಾರೆ ಎಂಬ ಕನಿಷ್ಠ ಅರಿವು ಗಾಂಧಿನಗರದ ಬಣ್ಣದ ಜನರಿಗೆ ಗೊತ್ತಿದಂತಿಲ್ಲ. ಗಾಂಧಿನಗರವಿರಲಿ ಸರ್ಕಾರವೇ ಎರಡು ಭಾಷೆಗಳ ಮೇಲೆ ಪ್ರಭುತ್ವ ಹೊಂದಿರುವ ಜನರನ್ನು ಪ್ರತಿಭೆಯ ಮಾನದಂಡಗಳಿಂದ ಗುರುತಿಸುವ ಬದಲು ಅದು ಆ ಜನರ ಅಸಹಾಯಕತೆ ಎನ್ನುವಂತೆ ನೋಡುತ್ತಿದೆ. ಈ ಭಾಗದ ಜನರ ನಿಜವಾದ ಸಂಕಟಗಳನ್ನು ಪ್ರತಿನಿಧಿಸುವಂತಹ ಸಿನಿಮಾಗಳಿಗೆ ಗಾಂಧಿನಗರದ ಜನ ಯಾವತ್ತೂ ಕೈಹಾಕಲಾರರು.

ಇಂತಹ ಕಡೆಗಳಲ್ಲಿ ಕನ್ನಡ ಚಲನಚಿತ್ರಗಳ ಸಮಾಧಿಯ ಮೇಲೆ ತಮಿಳು, ತೆಲುಗು ಚಿತ್ರಗಳು ಪ್ರಚಂಡ ಜಯಭೇರಿ ಭಾರಿಸುತ್ತವೆ. ಇಲ್ಲಿ ಜಯಭೇರಿ ಅಂದ ಮಾತ್ರಕ್ಕೆ ತಮಿಳು, ತೆಲುಗು ಸಿನಿಮಾಗಳು ಇಲ್ಲಿನವರ ಕಷ್ಟಗಳಿಗೆ ಸ್ಪಂದಿಸುವಂತಹ ಸಿನಿಮಾಗಳನ್ನು ಕೊಡುತ್ತಿದೆ ಎಂದರ್ಥವಲ್ಲ. ಸಿನಿಮಾದಿಂದ ಪಕ್ಕಾ ಮನರಂಜನೆಯನ್ನು ಮಾತ್ರ ನಿರೀಕ್ಷಿಸುವ ಜನರಿಗೆ ನೀವು ಗೋಳನ್ನು ಪ್ರತಿಸಿಧಿಸುವ, ಹಿಂಸೆಯನ್ನು ವೈಭವೀಕರಿಸುವ, ಸವಕಲು, ತೆಳು ಕಥೆಗಳನ್ನಿಟ್ಟು ಇದೇ ಸಿನಿಮಾ ಎಂದು ಹೇಳ ಹೋದರೆ ಅದನ್ನು ಸಿನಿಮಾದ ಕ್ರಮಗಳಲ್ಲಿ ಯಾರು ನೋಡುತ್ತಾರೆ. ಹೀಗಾಗಿಯೇ ಇಲ್ಲಿ ತರ್ಕಕ್ಕಿಂತ ಮನರಂಜನೆಯನ್ನೇ ಪ್ರಧಾನವಾಗಿರಿಸಿಕೊಂಡಿರುವ ತಮಿಳು, ತೆಲುಗು ಚಿತ್ರಗಳು ಕನ್ನಡವನ್ನು ಓಂದಿಕ್ಕಿ ಸದಾ ಗೆಲುವನ್ನು ಕಾಣುತ್ತವೆ.

ಕನ್ನಡದಲ್ಲಿ ತಯಾರಾಗುವ ಕಮರ್ಷಿಯಲ್ ಮತ್ತು ಕಲಾತ್ಮಕ ಎಂಬ ಲೇಬಲ್‌ಗಳನ್ನು ಅಂಟಿಸಿಕೊಂಡ ಚಿತ್ರಗಳನ್ನು ಗಮನಿಸಿ ಗಾಂಧಿನಗರದ ಸಿದ್ಧ ಮಾದರಿಯ ಚೌಕಟ್ಟಿನಲ್ಲಿಯೇ ರೂಪುಗೊಳ್ಳುವ ಕಮರ್ಷಿಯಲ್ ಚಿತ್ರಗಳನ್ನು ಎರಡೂವರೇ ಗಂಟೆಗಳ ಕಾಲ ಚಿತ್ರಮಂದಿರದಲ್ಲಿ ಕೂತು ನೋಡುವುದು ಹಿಂಸೆ ಎನಿಸಿದರೆ, ಕಲಾತ್ಮಕ ಚಿತ್ರ ನೋಡುವವರು ಸಹನೆಯ ಮೂಟೆಯನ್ನು ಕಣ್ಣಿಗೆ ಕಟ್ಟಿಕೊಳ್ಳಬೇಕಾಗುತ್ತದೆ. ಕಮರ್ಷಿಯಲ್ ಚಿತ್ರಗಳಲ್ಲಿ ವೇಗ ಇರುತ್ತದೆ ಅನ್ನುವುದನ್ನು ಬಿಟ್ಟರೆ ಸಿನಿಮಾದ ಉಳಿದ ಪ್ರಕಾರಗಳು ಆ ದೇವರಿಗೆ ಪ್ರೀತಿಯಾಗಬೇಕು. ಕ್ಯಾಮೆರಾವನ್ನು ಬಸವನ ಹುಳುವಿನ ಹೆಗಲಮೇಲಿಟ್ಟು ಸಿನಿಮಾ ನಿರ್ಮಿಸುವ ಕಲಾತ್ಮಕ ಚಿತ್ರಗಳ ಭೂಪರು ನಾವು ಐದುಮುಕ್ಕಾಲು ಕೋಟಿ ಕನ್ನಡಿಗರಿಗಿಂತ ರಾಷ್ಟ್ರಪ್ರಶಸ್ತಿ, ರಾಜ್ಯಪ್ರಶಸ್ತಿ ನೀಡುವ ಹತ್ತು ಜನ ಜ್ಯೂರಿಗಳ ಸಲುವಾಗಿ ಸಿನಿಮಾ ನಿರ್ಮಿಸುತ್ತಿದ್ದೇವೆ ಎಂದು ನಯವಾಗಿಯೇ ಹೇಳಿಕೊಳ್ಳುತ್ತಾರೆ. ಇಪ್ಪತ್ತೈದು ಸೆಕೆಂಡುಗಳಲ್ಲಿ ಹೇಳಿ ಮುಗಿಸಬಹುದಾದ ಸಂಗತಿಯೊಂದನ್ನು ಕಲಾತ್ಮಕ ಚಿತ್ರದ ನಿರ್ದೇಶಕರು ಹದಿನೆಂಟು ನಿಮಿಷಗಳಲ್ಲಿ ಹೇಳಲು ಬಯಸುತ್ತಾರೆ. ಹೇಗಿದ್ದರು ಈ ಸಿನಿಮಾಗಳನ್ನು ಜನ ನೋಡುವುದಿಲ್ಲವೆಂಬ ಧೈರ್ಯ ಈ ಬಗೆಯ ಸಿನಿಮಾ ನಿರ್ದೇಶಿಸುವ ನಿರ್ದೇಶಕರಿಗಿರುತ್ತದೆ. ಎಪ್ಪತ್ತರ ದಶಕದಲ್ಲಿ ತೆರೆಕಂಡ 'ಬಂಗಾರದ ಮನುಷ್ಯ' ಚಿತ್ರವನ್ನೆ ಗಮನಿಸಿ ಆ ಚಿತ್ರದ ನಾಯಕನಟಿ ಆಕಸ್ಮಿಕವಾಗಿ ಬಾವಿಗೆ ಬಿದ್ದು ಸತ್ತು ಹೋಗುತ್ತಾಳೆ. ನಂತರದ ದೃಶ್ಯದಲ್ಲಿ ಚಟ್ಟಕಟ್ಟುವ ಮತ್ತು ಚಿತ್ರದ ನಾಯಕನಟನನ್ನು ದುಃಖಭರಿತ ಸನ್ನಿವೇಶದಲ್ಲಿ ತೋರಿಸಲಾಗುತ್ತದೆ. ಅಷ್ಟು ತೀಕ್ಷ್ಣವಾಗಿ ಈ ಚಿತ್ರದ ಒಂದೊಂದು ದೃಶ್ಯವು ಒಂದಾದ ಮೇಲೊಂದರಂತೆ ವೇಗ ಪಡೆದುಕೊಳ್ಳುತ್ತದೆ. ಈಗಲೂ 'ಬಂಗಾರದ ಮನುಷ್ಯ ಚಿತ್ರವನ್ನು ಕಮರ್ಷಿಯಲ್ ಚಿತ್ರದ ಚೌಕಟ್ಟಿನಲ್ಲಿ ಹಾಗೂ ಕಲಾತ್ಮಕ ಚಿತ್ರದ ಆಶಯದಲ್ಲಿ ನೋಡಲು ಅನೇಕರು ಬಯಸುತ್ತಾರೆ. ಬಂಗಾರದ ಮನುಷ್ಯ ಚಿತ್ರ ನಿರ್ದೇಶಿಸಿದ ಸಿದ್ದಲಿಂಗಯ್ಯನವರು ಗ್ರಾಮ್ಯ ಬದುಕಿನ ಕ್ರೌರ್ಯ, ಸಿಟ್ಟು, ನೋವು, ಸಂಕಟಗಳನ್ನು ಬಿಂಬಿಸುವ 'ಭೂತಯ್ಯನ ಮಗ ಅಯ್ಯು' ಎಂಬ ಚಿತ್ರವನ್ನು ನಿರ್ದೇಶಿಸಿದ್ದಾರೆ. ಕನ್ನಡದ ಮಟ್ಟಿಗೆ ಈ ಎರಡು ಚಿತ್ರಗಳು ಇವತ್ತಿಗೂ ಕ್ಲಾಸಿಕ್ ಅನ್ನಿಸುತ್ತವೆ. ಕರ್ನಾಟಕದ ಒಟ್ಟು ಸಮಾಜದ ಮೇಲೆ ಈ ಎರಡು ಚಿತ್ರಗಳು ಉಂಟುಮಾಡಿದಷ್ಟು ಪರಿಣಾಮವನ್ನು ದುಡ್ಡಿನ ಮಳೆ ತಂದ ಇವತ್ತಿನ ಮುಂಗಾರು ಮಳೆ, ದುನಿಯಾ ಚಿತ್ರಗಳಿಂದಲೂ ಸರಿಗಟ್ಟಲು ಸಾಧ್ಯವಾಗಿಲ್ಲ.

ಡಾ.ರಾಜ್‌ಕುಮಾರ್, ವಜ್ರಮುನಿ, ಅಶ್ವಥ್, ಬಾಲಕೃಷ್ಣ ನರಸಿಂಹರಾಜು, ಲೀಲಾವತಿ, ಕಲ್ಪನಾ ಮುಂತಾದ ದೊಡ್ಡ ನಟನಟಿಯರ ಮುಂದೆ ಹೀಗಿನ ದರ್ಶನ್, ಸುದೀಪ್, ಉಪೇಂದ್ರ, ಮುರಳಿ, ದಿಗಂತ್, ಆದಿತ್ಯ ಮುಂತಾದ ನಟರನ್ನು ಯಾವ ಮಾನದಂಡಗಳನ್ನಿಟ್ಟುಕೊಂಡು ನಟರೆಂದು

ಕರೆಯಬೇಕೋ ಗೊತ್ತಾಗುತ್ತಿಲ್ಲ. ತಮಿಳಿನ ಗೌಂಡಮಣಿ, ಸೆಂದಿಲ್, ವಡಿವೇಲ್, ವಿವೇಕ್ ಮತ್ತು ತೆಲುಗಿನ ಬ್ರಹ್ಮಾನಂದಂ, ಅಲಿ ಹಾಗೂ ಹಿಂದಿಯ ಜಾನಿಲಿವರ್ ಮುಂತಾದ ಹಾಸ್ಯ ನಟರ ನೆರಳುಗಳಲ್ಲೇ ಕನ್ನಡದ ದೊಡ್ಡಣ್ಣ, ಟೆನ್ನಿಸ್ ಕೃಷ್ಣ, ಸಾಧುಕೋಕಿಲ, ಕೋಮಲ್, ಶರಣ್‌ರಂತಹ ನಟರು ಜೀವಿಸತೊಡಗಿದ್ದಾರೆ. ಮೂಲ ಚಿತ್ರವನ್ನು ನೋಡಿದವರು ಆಕಸ್ಮಾತ್ ಕನ್ನಡ ಚಿತ್ರವನ್ನು ನೋಡಿದರೆ ಮತ್ತೆನ್ನೆಂದೂ ಥೇಟರ್ ಕಡೆ ಕಾಲಿಡಲಾರರೇನೋ.

ಪಡೋಶನ್, ಬಾವರ್ಚಿ, ದೇವರ್ ಮಗನ್, ಪೋಕ್ಕಿರ್ಾಲಂ, ಆಟೋಗ್ರಾಫ್, ಕಾದಲ್‌ಕೊಂಡೇನ್, 7/i ರೈಂಬೋ ಕಾಲೋನಿಯಂತಹ ಒಂದು ಕಾಲದ ಹಿಂದಿ, ತಮಿಳು, ತೆಲುಗಿನ ದೊಡ್ಡ ಯಶಸ್ಸು ಕಂಡ ಚಿತ್ರಗಳು ಗಾಂಧಿನಗರದ ಕೈಗಳಿಗೆ ಸಿಕ್ಕಿ ಹಠಾತ್ ತೀರಿಕೊಳ್ಳುತ್ತವೆ. ಮಣಿರತ್ನಂ ನಿರ್ದೇಶನದ ತಮಿಳಿನ 'ದಳಪತಿ' ಚಿತ್ರ ಕನ್ನಡಕ್ಕೆ 'ಗೌಡ್ರು' ಎಂಬ ಹೆಸರಿನಲ್ಲಿ ರಿಮೇಕಾಯಿತು. ಆ ಚಿತ್ರ ನೋಡಿದ ನಟಿ ಸುಹಾಸಿನಿ 'ದಯವಿಟ್ಟು ಈ ಚಿತ್ರವನ್ನು ನನ್ನ ಗಂಡನಿಗೆ ತೋರಿಸಬೇಡಿ. ಆಗಾಗ ಎದೆನೋವಿನಿಂದ ನರಳುವ ಅವರು ಈ ಚಿತ್ರ ನೋಡಿದರೆ ಪ್ರಾಣ ಬಿಡುವುದು ಖಚಿತ' ಎಂದು ಹೇಳಿದ್ದು ಕನ್ನಡದ ರಿಮೇಕ್ ಶೂರರ ಅಂದು ಚಿವುಟಿದಂತೆ ಕಂಡರೆ ಅದು ಸುಳ್ಳಲ್ಲ.

ಇವತ್ತಿಗೂ ಕನ್ನಡದ ಅನೇಕ ನಟರನ್ನು ನಟನೆಯ ನೆಲೆಗಟ್ಟಿನಲ್ಲಿ ನೋಡಲು ಹೊರಟರೆ ಅವರ ನೆರವಿಗೆ ತಮಿಳು, ತೆಲುಗಿನ ಅನೇಕ ಚಿತ್ರಗಳು ಬರುತ್ತವೆ. ಸಿನಿಮಾದ ಪ್ರಾಥಮಿಕ ಅರಿವು, ಸ್ಪಷ್ಟ ತಿಳುವಳಿಕೆ ಇಲ್ಲದ ಜನ ಇಲ್ಲಿ ನಿರ್ದೇಶಕರಾಗಿ ಕಾಣಿಸಿಕೊಳ್ಳುತ್ತಾರೆ. ಬದುಕಿನಲ್ಲಿ ಅಡ್ಡದಾರಿ ಹಿಡಿದು ಗಳಿಸಿದ ದುಡ್ಡನ್ನೆಲ್ಲ ಇಲ್ಲಿ ಚೆಲ್ಲಲು ನಿರ್ಮಾಪಕರೆಂದು ಕರೆಸಿಕೊಳ್ಳುವ ಜನ ನಿರ್ದೇಶಕರ ಬೆನ್ನಿಗೆ ನಿಲ್ಲುತ್ತಾರೆ. ಇಂಥವರು ನಿರ್ಮಿಸಿದ ಒಂದೇ ಒಂದು ಕನ್ನಡ ಚಿತ್ರ ನೋಡಿದರೆ ಸಾಕು ಈ ಜನ ತಮ್ಮ ಬದುಕಿನಲ್ಲಿ ಒಂದೊಳ್ಳೆ ಸಿನಿಮಾ ನೋಡಿರುವ ಕುರುಹುಗಳೇ ಕಾಣಿಸುವುದಿಲ್ಲ. ಈ ತರಹದ ಅಡ್ಡಕಸುಬಿ ದುಡ್ಡಿನ ಜನಕ್ಕೆ ಸಿನಿಮಾ ಅನ್ನುವುದು ತೆವಲಿನಂತೆ ಕಾಣುತ್ತದೆಯೇ ಹೊರತು ಅದು ಜನರ ನಾಡಿಯನ್ನು ಚೂಪಾಗಿ ಮುಟ್ಟುವ ಮಾಧ್ಯಮ ಎಂದು ಅನ್ನಿಸುವುದೇ ಇಲ್ಲ.

ಎರಡು ವರ್ಷಗಳ ಹಿಂದೆ ತೆರೆಕಂಡ 'ಮಾತಾಡ್ ಮಾತಾಡು ಮಲ್ಲಿಗೆ' ಚಿತ್ರವನ್ನೇ ಗಮನಿಸಿ: ಬಿಡುಗಡೆಗೂ ಮುನ್ನ ಈ ಚಿತ್ರವನ್ನು ರೈತರ ಚಿತ್ರ, ರೈತರ ಪರವಾದ ಚಿತ್ರವೆಂದು ಬಿಂಬಿಸಲಾಯಿತು. ಹೆಂಗಸರಿಗೆ ಹೊಲಿಸಿಟ್ಟ ಬಟ್ಟೆಗಳನ್ನು ತೊಟ್ಟು ನಲಿದಾಡುವ ಈ ಚಿತ್ರದ ನಾಯಕನಟರನ್ನು 'ಹೂವಯ್ಯ' ಎಂದು ಹೆಸರಿಟ್ಟು ರೈತ ಎಂದು ಕರೆಯಲಾಯಿತು. ಈ ದೇಶದ ರೈತನ ದೇಹ ಮನಸ್ಸುಗಳನ್ನು ತೆರೆಯ ಮೇಲೆ ಹೇಗೆ ತೆರೆದಿಡಬೇಕೆಂಬ ಸೂಕ್ಷ್ಮಗಳು ಈ ಚಿತ್ರದ ನಿರ್ದೇಶಕರಿಗಾಗಲಿ ಅಥವಾ ನಾಯಕನಟರಿಗಾಗಲಿ ಗೊತ್ತಿದ್ದಂತೆ ಕಾಣಲಿಲ್ಲ. ಈ ದೇಶದ ಅದ್ಯಾವ ರೈತ ಫ್ಯಾಷನ್ ಷೋಗೆ ಹೊರಟ ಕಮಂಗಿಯಂತೆ ಕಾಣುತ್ತಾನೋ ಅದನ್ನು ಬಲ್ಲವರೇ ಹೇಳಬೇಕು. ಬದುಕು ಮತ್ತು ಸಿನಿಮಾದ ನಡುವಿನ ಅಂತರದ ವ್ಯತ್ಯಾಸಗಳು ಗೊತ್ತಿಲ್ಲದವರು ಮಾತ್ರ ರೈತನ ಕತೆ ಹೇಳುತ್ತಾ ರೈತನನ್ನು ಬಿಟ್ಟು ಮತ್ತೆಲ್ಲವನ್ನೂ ತೋರಿಸುತ್ತಾರೆ. ಈ ಚಿತ್ರದ ನಾಯಕನಟರು ರೈತನ ಯಾವ ಚಹರೆಗಳನ್ನು ತೆರೆಯ ಮೇಲೆ ಬಿಚ್ಚಿಡುವುದಿಲ್ಲ. ರೈತನನ್ನು ಮಹಾತ್ಮನನ್ನಾಗಿಸಲು ಹೊರಟ ನಿರ್ದೇಶಕರಿಗೆ ಈ ದೇಶದ ಸಾಮಾನ್ಯ ರೈತನೊಬ್ಬನ ಅಂತರಂಗದ ಎಲುಬುಗೂಡು ಹೇಗಿರುತ್ತದೆ ಎಂಬುದು ಚಿತ್ರದ ಕೊನೆತನಕ ತಟ್ಟುವುದೇ ಇಲ್ಲ. ಕನ್ನಡ ಸಿನಿಮಾಗಳ ಕತೆಯ ಗುಣಮಟ್ಟ ಎಷ್ಟು ಕಳಪೆ ದರ್ಜೆಯದು ಎಂಬುದಕ್ಕೆ 'ಮಾತಾಡ್ ಮಾತಾಡು ಮಲ್ಲಿಗೆ' ದೊಡ್ಡ ಉದಾಹರಣೆಯಾಗಬಲ್ಲದು.

ಕನ್ನಡ ಸಿನಿಮಾದ ಲೆಕ್ಕಾಚಾರಗಳು ಹೇಗಿರುತ್ತವೆಂದರೆ ಪ್ರೇಕ್ಷಕನಿಂದ ನಲವತ್ತು ರೂಪಾಯಿ ಕಿತ್ತುಕೊಂಡು ಆತನಿಗೆ ಎಂಟಾಣೆಯ ಸಿನಿಮಾ ಮಾತ್ರ ತೋರಿಸಬೇಕು ಎನ್ನುವ ನಿಲುವು ಗಾಂಧಿನಗರದ ಅನೇಕರಿಗಿದೆ. ಕೋಟಿ ವೆಚ್ಚದ ಬಜೆಟ್‌ನಲ್ಲಿ ತಯಾರಾಗುವ ಕನ್ನಡ ಚಿತ್ರಗಳು ತಂದುಕೊಡುವ ಲಾಭ ಆ ಚಿತ್ರದ ವಾಲ್‌ಪೋಸ್ಟರಿಗೆ ಖರ್ಚು ಮಾಡಿದ್ದಕ್ಕೆ ಸಮವಾಗುವುದಿಲ್ಲ. ಕನ್ನಡ ಸಿನಿಮಾದ ನಿರ್ಮಾಪಕರನ್ನು ಆತ್ಮಹತ್ಯೆಯಿಂದ ಪಾರುಮಾಡುತ್ತಿರುವುದು 'ಬಿ', 'ಸಿ' ಸೆಂಟರಿನ ಪ್ರೇಕ್ಷಕರು. ಅದರಲ್ಲೂ ಹೋಟೆಲ್ ಕಾರ್ಮಿಕರು, ದಿನಗೂಲಿ ನೌಕರರು, ಅವತ್ತು ದುಡಿದ ಹಣವನ್ನು ಅವತ್ತೇ ಖರ್ಚು ಮಾಡುವ ಶ್ರಮಿಕ ವರ್ಗದ ಜನ ಇವತ್ತು ಹೆಚ್ಚು ಕನ್ನಡ ಸಿನಿಮಾ ನೋಡಲು ಥೇಟರಿಗೆ ಬರುತ್ತಾರೆ. ನೆರೆಯ ತಮಿಳು, ತೆಲುಗು ಚಿತ್ರಗಳ ಪ್ರೇಕ್ಷಕರಿಗಿಂತ ಕನ್ನಡ ಸಿನಿಮಾಗಳ ನೋಡುಗರು ನಿಜಕ್ಕೂ ಜಾಣರು. ಮನೆಮಂದಿಯಲ್ಲ ಕೂತು ನೋಡುವಂತಹ ಚಿತ್ರವನ್ನು ಸ್ವೀಕರಿಸಿದಷ್ಟೇ ಮನುಷ್ಯರು ನೋಡಲಿಕ್ಕಾಗದ ಚಿತ್ರಗಳನ್ನು ನಿರ್ದಯವಾಗಿ ತಿರಸ್ಕರಿಸುತ್ತಾರೆ.

ಇಪ್ಪತ್ತೈದು ಮೂವತ್ತು ಲಕ್ಷ ರೂಪಾಯಿಗಳಲ್ಲಿ ಸಿದ್ಧಗೊಳ್ಳುವ ಇರಾನ್ ದೇಶದ ಚಿತ್ರಗಳು ಜಗತ್ತಿನ ಗಮನ ಸೆಳೆಯುವಂತೆ ಕೋಟಿ ಕೋಟಿ ಸುರಿದು ನಿರ್ಮಿಸುವ ಕನ್ನಡ ಚಿತ್ರಗಳಿಗೇಕೆ ಸಾಧ್ಯವಾಗುವುದಿಲ್ಲ ಎಂಬುದಕ್ಕೆ ಹೊಸ ಕಾರಣಗಳನ್ನೇನೂ ಹುಡುಕಿಕೊಂಡು ಹೊರಡಬೇಕಿಲ್ಲ. ಇರಾನ್ ದೇಶದ Colour of Paradise, Children of Heaven, Baran, Song of Sparrows, Black-board, Silence, It's Winter, At five in the afternoon, A few kilos of dates for a funeral... ಮುಂತಾದ ಚಿತ್ರಗಳನ್ನು ನೋಡಿದವರು ಮತ್ತೆಂದೂ ಕನ್ನಡ ಸಿನಿಮಾಗಳನ್ನು ಥೇಟರಿನಲ್ಲಿ ನೋಡುವ ಗೋಜಿಗೆ ಹೋಗುವುದಿಲ್ಲ. ಮಜೀದ್ ಮಜೀದೀ ಮತ್ತು ಮೊಹ್ಸಿನ್ ಮಖ್ಮಲ್‌ಬಫ್‌ರಂತಹ ನಿರ್ದೇಶಕರು ಇಡೀ ಇರಾನ್ ದೇಶದ ಜನ ಹೆಮ್ಮೆಪಟ್ಟುಕೊಳ್ಳುವಂತಹ ಚಿತ್ರಗಳನ್ನು ಜಗತ್ತಿಗೆ ಕೊಟ್ಟಿದ್ದಾರೆ. ಮೊಹ್ಸಿನ್ ಮಖ್ಮಲ್‌ಬಫ್‌ರ ಇಡೀ ಕುಟುಂಬವೇ ಚಲನಚಿತ್ರ ನಿರ್ಮಿಸುವಲ್ಲಿ ಸದಾ ತೊಡಗಿಕೊಂಡಿರುತ್ತದೆ. ಮಖ್ಮಲ್‌ಬಫ್‌ರ ಮಗಳು ಸಮೀರಾ ತನ್ನ ತಂಗಿ ಹನಾಳೊಂದಿಗೆ ಕೂಡಿಕೊಂಡು ಅಫಘನಿಸ್ತಾನದ ಖೊಮೆನಿಯ ಮೂಲಭೂತ ಕ್ರೌರ್ಯದಲ್ಲಿ ನರಳುತ್ತಿರುವ ಹೆಣ್ಣುಮಕ್ಕಳ ಸಂಕಟಗಳನ್ನು At five in the afternoon ಚಿತ್ರದಲ್ಲಿ ಸಮರ್ಥವಾಗಿ ತೋರಿಸುತ್ತಾಳೆ. 'ಅಫಘನಿಸ್ತಾನದ ಹೆಣ್ಣುಮಕ್ಕಳ ನೋವಿನ ಮುಂದೆ ನನ್ನ ಇರಾನ್ ದೇಶದ ಹೆಣ್ಣುಮಕ್ಕಳ ನೋವು ಅದು ನೋವು ಅನ್ನಿಸುವುದೇ ಇಲ್ಲ, ಹೀಗಾಗಿ ನನಗೆ ನನ್ನ ತಾಯ್ನೆಲದ ನೋವಿಗಿಂತ ಅಫಘನಿಸ್ತಾನದ ಹೆಣ್ಣುಮಕ್ಕಳು ಅನುಭವಿಸುತ್ತಿರುವ ನೋವು ದೊಡ್ಡದೆಂದು ಕಾಣುತ್ತಿದೆ, ಜಗತ್ತಿಗೆ ಇದನ್ನು ನಾನು ಮೊದಲು ಹೇಳಬೇಕು' ಎನ್ನುವ ಸಮೀರಾ ಮಖ್ಮಲ್‌ಬಫ್ ಇರಾನ್-ಇರಾಕ್ ದೇಶಗಳ ಗಡಿ ಕದನಗಳಿಂದ ಅಲ್ಲಿನ ಎಳೆಯ ಮಕ್ಕಳಿಗೆ ಶಾಲೆಯ ಹಾದಿಗಳು ದೂರವಾಗಿ ಅವರೆಲ್ಲ ಇಪ್ಪತ್ತು ವರ್ಷ ದಾಟುವುದಕ್ಕೂ ಮುನ್ನವೇ ಸೈನಿಕರ ಗುಂಡೇಟಿಗೆ ಬಲಿಯಾಗುವುದನ್ನೂ ತನ್ನ 'ಬ್ಲಾಕ್‌ಬೋರ್ಡ್' ಚಿತ್ರದಲ್ಲಿ ಯಾವುದೇ ಆಡಂಬರವಿಲ್ಲದೆ ತಣ್ಣಗಿನ ದನಿಯಲ್ಲಿ ಹೇಳುತ್ತಾಳೆ. ಜಾಗತಿಕ ಸಿನಿಮಾ ರಂಗದಲ್ಲಿ ಇವತ್ತು ಇರಾನ್ ಸಿನಿಮಾಗಳ ಬಗ್ಗೆ ದೊಡ್ಡ ಚರ್ಚೆಗಳು ನಡೆಯುತ್ತಿವೆ. ಇರಾನ್ ದೇಶಕ್ಕೆ ದಕ್ಕಿರುವ ಇಂಥ ವಿಪುಲ ಸಾಧ್ಯತೆಗಳನ್ನು ನಾವು ಎಲ್ಲ ಬಗೆಯ ಸಂಪನ್ಮೂಲಗಳನ್ನಿಟ್ಟುಕೊಂಡು ಕನ್ನಡ ಸಿನಿಮಾದ ಮೂಲಕ ಕಾಣಲು ಸಾಧ್ಯವಾಗಿದ್ದಿದ್ದರೆ ಎಷ್ಟು ಚೆಂದವಿರುತ್ತಿತ್ತು.

ಹೆಣ್ಣೊಬ್ಬಳು ಅತ್ಯಾಚಾರಕ್ಕೊಳಗಾದ ನಂತರ ಆಕೆ ಕಡ್ಡಾಯವಾಗಿ ಸಾಯಲೇಬೇಕೆಂಬ ನಿಲುವಿನ ದೃಶ್ಯದಲ್ಲಿ ತೋರಿಸುವ ಕನ್ನಡ ಸಿನಿಮಾರಂಗದ ನಿಸ್ಸೀಮರು ಆಕೆ ಮತ್ತೆ ಬದುಕು ಕಟ್ಟಿಕೊಳ್ಳಲು ನೂರು

ದಾರಿಗಳಿವೆ ಎಂಬುದನ್ನೇ ಮರೆತು ರೀಲು ಸುತ್ತುತ್ತಾರೆ. ಇಂಥವರ ಕಣ್ಣಿಗೆ ತೀರಾ ಒರಿಜಿನಲ್ ಕನಸುಗಳು ಯಾವತ್ತೂ ಬೀಳುವುದಿಲ್ಲ. ಇನ್ನು ಇವರು ತರುವ ಬಾಡಿಗೆ ಕನಸುಗಳಿಗೆ ಹೇಗೆ ಬಣ್ಣ ಹಚ್ಚಬೇಕೆಂಬುದು ಇವರಿಗೆ ಮೊದಲೇ ಗೊತ್ತಿರುವುದಿಲ್ಲ. ತಮ್ಮ ಮಿತಿಗಳು, ದೌರ್ಬಲ್ಯಗಳ ಅರಿವಿಲ್ಲದ ಗಾಂಧಿನಗರದ ಜನ ಮಾತ್ರ ಕತೆ ಕಟ್ಟುವ ಮುನ್ನವೇ ಚಿತ್ರದ ಹೀರೋ, ಹೀರೋಯಿನ್‌ಗಳ ಕಾಲ್‌ಶೀಟ್‌ಗಾಗಿ ಚಪ್ಪಲಿ ಸವೆಸುತ್ತಾರೆ. ಇಂಥವರ ಚಿತ್ರಗಳ ಶೀರ್ಷಿಕೆ, ಮುಹೂರ್ತ, ಬಿಡುಗಡೆಯ ದಿನಾಂಕಗಳನ್ನು ಲಾಟರಿ ಮೂಲಕ ನಿರ್ಧರಿಸುವವರು ಅಣ್ಣಮ್ಮದೇವಿಯ ನೆಂಟರಾದ ಅಲ್ಲಿನ ಪೂಜಾರಿಗಳು.

ಪುರೋಹಿತರು ಕೊಡುವ ಡೇಟಿಗೆ ಮುಹೂರ್ತ, ಎಡಿಟಿಂಗ್, ಚಿತ್ರ ಬಿಡುಗಡೆ ಎಲ್ಲವನ್ನು ಮಾಡುವ ಗಾಂಧಿನಗರದ ಜನ ಚಿತ್ರ ಮಕಾಡೆ ಮಲಗಿದಾಗ ಮಾತ್ರ ನಮ್ಮ ಚಿತ್ರದ ಸೋಲಿಗೆ ಪತ್ರಿಕೆಗಳ ಕೆಟ್ಟ ವಿಮರ್ಶೆ, ಕ್ರಿಕೆಟ್, ಮಳೆ, ಕಾಲೇಜ್ ರಜೆ, ಹಬ್ಬಹರಿದಿನಗಳು ಕಾರಣವೆಂದು ಬೊಬ್ಬಿಡುತ್ತಾರೆ. 'ಗಂಡುಗಲಿ ಕುಮಾರರಾಮ' ಎಂಬ ದೊಡ್ಡ ಬಜೆಟಿನ ಚಿತ್ರ ಬಿಡುಗಡೆಯಾದ ಮೂರೇ ದಿನಕ್ಕೆ ಥೇಟರ್‌ಗಳಿಂದ ಕಂಬಿಕಿತ್ತಾಗ ಗಾಂಧಿನಗರದ ಸಿನಿಪಂಡಿತರು ಚಿತ್ರದ ಮುಹೂರ್ತದ ಸಂದರ್ಭದಲ್ಲಿ 'ಕುಮಾರರಾಮ'ನಿಗೆ ಪೂಜೆ ಮಾಡದೆ ಶೂಟಿಂಗ್ ಆರಂಭಿಸಿದ್ದೇ ಚಿತ್ರದ ಸೋಲಿಗೆ ಕಾರಣ ಎಂದು ಷರಾ ಬರೆದರು. ಕನ್ನಡದಲ್ಲಿ ದೇವರ ಮಹಾತ್ಮೆಗಳನ್ನು ಹೇಳುವ ದೇವರ ಚಿತ್ರಗಳನ್ನೇ ಕನ್ನಡದ ಪ್ರೇಕ್ಷಕ ಮುಲಾಜಿಲ್ಲದೆ ತಿಪ್ಪೆಗೆಸೆದಿದ್ದಾನೆ ಎಂಬುದನ್ನು ಹೇಳಲು ಶ್ರೀಮಂಜುನಾಥ, ಮಣಿಕಂಠನ ಮಹಿಮೆ, ನಾಗದೇವತೆ, ದುರ್ಗಾಶಕ್ತಿ, ಕೊಲ್ಲೂರು ಮೂಕಾಂಬಿಕೆ, ರೇಣುಕಾದೇವಿ ಮಹಾತ್ಮೆ.... ಮುಂತಾದ ಮೂರನೇ ದರ್ಜೆ ಚಿತ್ರಗಳ ದೊಡ್ಡ ಪಟ್ಟಿಯನ್ನೇನೂ ಕೊಡಬೇಕಿಲ್ಲ.

ಗಾಂಧಿನಗರದ ಜನ ನಿಜಕ್ಕೂ ಭ್ರಮೆಗಳ ಜನ. ಭ್ರಮೆಗಳೊಂದಿಗೆ ಮೂಢನಂಬಿಕೆ ಸೇರಿಕೊಂಡು ನರಳುವ ರೋಗಿಷ್ಟರನ್ನು ನಾವು ಗಾಂಧಿನಗರದಲ್ಲಿ ದಂಡಿಯಾಗಿ ಕಾಣಬಹುದು. ಅತಿ ಕಡಿಮೆ ಅವಧಿಯಲ್ಲಿ ದುಡ್ಡು ಹೂಡಿ ಲಾಭ ಮಾಡಬಹುದೆಂದುಕೊಂಡಿರುವುದರಿಂದಲೇ ಈ ಕ್ಷೇತ್ರದಲ್ಲಿ ಸಭ್ಯರಿಗಿಂತ ವಂಚಕರು ಮತ್ತು ತೋಳ್ಬಲದ ಗೂಂಡಾಗಳ ಪ್ರಾಬಲ್ಯ ಹೆಚ್ಚಾಗಿದೆ. ನನಗಿಲ್ಲಿ ಕನ್ನಡದ ವಿಮರ್ಶಕ ಡಿ.ಆರ್.ನಾಗರಾಜರ ಮಾತುಗಳು ನೆನಪಾಗುತ್ತಿವೆ: 'ಬಹುಶಃ ಸಿನೆಮಾ ಚಳುವಳಿಯಲ್ಲಿ ಮಾತ್ರ ನಮ್ಮ ಯುವಜನಾಂಗದ ಅಥೆಂಟಿಕ್ ಚಿತ್ರಣವನ್ನು ನಾವು ಕಾಣಬಹುದು, ಒಟ್ಟಾರೆಯಾಗಿ ನಮ್ಮ ಇಡೀ ಸಮಾಜವನ್ನು ಕಾಣಬಹುದು. ಆದರೆ, ಅದು ಬೆಳೆದು ಬರುವ ತನಕ ಅದೇ ಸುಳ್ಳನ್ನು ಆ ಸುಂದರವಾದ ಕೊಳಕನ್ನು, ಯುವಜನಾಂಗದಲ್ಲಿ ಭ್ರಮೆಯನ್ನು ಹೆಚ್ಚಿಸುವ ಕುರೂಪಿ ಸಿನೆಮಾಗಳನ್ನು ನೋಡುವ ಗತಿ ತಪ್ಪುದಿಲ್ಲ. ಪರಿಣಾಮವನ್ನು ನಾವು ವಿಶ್ಲೇಷಿಸಬೇಕಾದದ್ದು ಈ ಪರಿಭಾಷೆಯಲ್ಲಿಯೇ. ಅತ್ಯಂತ ಮೋಹಕವಾದ ರೀತಿಯಲ್ಲಿ ಸುಳ್ಳುಗಳನ್ನು ಹೇಳುವ, ಭ್ರಮೆಗಳನ್ನು ಉದ್ದೀಪಿಸುವ ಈ ಚಿತ್ರಗಳು ನಮ್ಮ ಯುವಜನಾಂಗದ ಬೌದ್ಧಿಕ ಸಾಮರ್ಥ್ಯವನ್ನು ಕ್ಷೀಣಿಸುತ್ತವೆ. ಏಕೆಂದರೆ, ಇಷ್ಟೊಂದು ವ್ಯಾಪಕವಾದ ಜನಪ್ರಿಯತೆಯನ್ನೂ ಹೊಂದಿರುವ ಈ ಸಿನೆಮಾ ಬರೀ ಕಲೆಯ ಸೀಮಿತತೆಯನ್ನು ಮೀರಿವೆ. ಒಮ್ಮೊಮ್ಮೆಯಂತೂ ಇದು ಹಿಂದುಳಿದ ಸಮಾಜಗಳಲ್ಲಿ ಧರ್ಮ ಯಾವ ರೀತಿಯ ಪ್ರಭಾವ ಬೀರುತ್ತಿತ್ತೋ, ಆ ಕೆಲಸವನ್ನು ಈ ಹೊತ್ತು ಸಿನೆಮಾಗಳು ಮಾಡುತ್ತಿವೆ ಎಂಬ ವಿಚಾರ ಅನೇಕ ಸಂಶೋಧನೆಗಳಿಂದ ಖಚಿತವಾಗಿದೆ.'

ಈಚೆಗೆ ಕನ್ನಡದ ದೊಡ್ಡ ನಟರೊಬ್ಬರು 'ನನಗೆ ಕನ್ನಡ ಚಿತ್ರರಂಗದ ನಿರ್ಮಾಪಕರಿಂದ ಆದ ಚೆಕ್ ಬೌನ್ಸ್ ವಂಚನೆ ಪ್ರಕರಣಗಳನ್ನು ನ್ಯಾಯಾಲಯಕ್ಕೆ ಕೊಂಡೊಯ್ಯಬೇಕಾದರೆ ಬೌನ್ಸ್ ಆಗಿರುವ

ಚೆಕ್‌ಗಳನ್ನು ಒಂದು ಲಾರಿಯಲ್ಲಿ ಸಾಗಿಸಬೇಕಾಗುತ್ತದೆ' ಎಂದು ಹೇಳಿಕೊಂಡಿದ್ದರು. ಸಿನಿಮಾದಲ್ಲಿ ವಂಚನೆಗಳು ತೀರಾ ಸಾಮಾನ್ಯ ಅನ್ನಿಸುವಂತೆ ದಿನನಿತ್ಯ ಘಟಿಸುತ್ತವೆ. ದೊಡ್ಡ ನಟನಟಿಯರಿಗಾದ ವಂಚನೆಗಳನ್ನು ಮಾತ್ರ ನಾವು ಚಿತ್ರರಂಗದಿಂದಾದ ಮೋಸ ಎಂದು ಪತ್ರಿಕೆಗಳಲ್ಲಿ ಓದಿಕೊಂಡು ಸುಮ್ಮನಾಗುತ್ತೇವೆ. ಚಿತ್ರರಂಗವನ್ನೇ ದಿನಪೂರ್ತಿ ನಂಬಿಕೊಂಡು ಬದುಕುತ್ತಿರುವ ಸಿನಿಮಾ ಕಾರ್ಮಿಕರು ಅಂದರೆ ಲೈಟ್‌ಬಾಯ್‌ನಿಂದಿಡಿದು ಸಹನಿರ್ದೇಶಕರವರೆಗೆ ಎದುರಿಸುವ ವಂಚನೆಯ ಪ್ರಮಾಣ ಹೆದರಿಕೆ ಹುಟ್ಟಿಸುತ್ತದೆ. ಕನ್ನಡದ ದೊಡ್ಡ ನಟನಟಿಯರು ತಮ್ಮ ಪ್ರಭಾವಗಳನ್ನು ಬಳಸಿಕೊಂಡು ಹತ್ತು ಬರುವ ಕಡೆ ಆರೋ ಏಳೋ ಪಡೆದು ಸುಮ್ಮನಾಗುತ್ತಾರೆ. ಆದರೆ ಸಿನಿಮಾರಂಗದ ಈ ಕೂಲಿಕಾರ್ಮಿಕರಿದ್ದಾರಲ್ಲ ಇವರನ್ನು ವಂಚಿಸುವುದು, ಶೋಷಿಸುವುದು ತುಂಬ ಸುಲಭ. ಸದಾ ಅನಿಶ್ಚಿತತೆಯ ಮೇಲೆ ಬದುಕು ಸಾಗಿಸುವ ಸಿನಿಮಾ ಕಾರ್ಮಿಕರು ಬಂಡೇಳುವ ಗುಣಗಳನ್ನು ತೋರ್ಪಡಿಸಿದರೆ ಒಂದೋ ಉಪವಾಸ ಚೀಳಬೇಕು ಇಲ್ಲವೆಂದರೆ ಸಂಪೂರ್ಣವಾಗಿ ಚಿತ್ರರಂಗದಿಂದಲೇ ದೂರವಾಗಬೇಕಾಗುತ್ತದೆ.

ಕನ್ನಡ ಚಿತ್ರರಂಗವನ್ನೇ ಬಲವಾಗಿ ನಂಬಿಕೊಂಡಿರುವ ಸಿನಿಕಾರ್ಮಿಕರ ರಕ್ಷಣೆಗೆಂದೆ ಇಲ್ಲಿ ಪ್ರಬಲವಾದ ಕಾಯ್ದೆಯೊಂದು ಇದುವರೆಪಿಗೂ ರಚನೆಯಾಗಿಲ್ಲ. ಸದಾ ತಂತಿಯ ಮೇಲೆ ಬದುಕು ಸವೆಸುವ ಸಿನಿಮಾ ಕಾರ್ಮಿಕರ ಉಳಿವಿನ ಪ್ರಶ್ನೆಯನ್ನು ಕನ್ನಡದ ಯಾವೊಬ್ಬ ನಟನು ಈ ಕ್ಷಣದವರೆಗೂ ಸರ್ಕಾರದ ಗಮನಕ್ಕೆ ತಂದಿಲ್ಲ. ತಮ್ಮ ಮಡಿಚಿತ್ರಗಳು ಐವತ್ತು ನೂರು ದಿನಗಳ ಗಡಿ ದಾಟಿದಾಗ ಸಾವಿರ ಯುದ್ಧಗೆದ್ದು ಬಂದ ಸಂಭ್ರಮ ವ್ಯಕ್ತಪಡಿಸುವ ಗಾಂಧಿನಗರದ ನಿರ್ಮಾಪಕರು, ಅದೆಂತಂಥವೋ ಸ್ಟಾರ್‌ಗಳು ತಮ್ಮ ಸಿನಿಮಾ ಐವತ್ತು ನೂರು ದಿನಗಳನ್ನು ಮುಟ್ಟಲು ಲೈಟ್‌ಬಾಯ್ ಕ್ಲಾಪ್‌ಬಾಯ್ ನಿಂದಿಡಿದು ಸಹನಿರ್ದೇಶಕರವರೆಗೂ ಕೊಟ್ಟಿರುವ ಕಾಣಿಕೆ ಭಾರಿ ಬೆಲೆಯುಳ್ಳದ್ದು ಎಂಬ ತಿಳುವಳಿಕೆಗೆ ಕಿವಿಕೊಟ್ಟಿದ್ದರೆ ಈ ಬಡಪಾಯಿಗಳು ತಮ್ಮ ಮುಂದಿನ ಚಿತ್ರಗಳಲ್ಲಿ ಇನ್ನೂ ಹೆಚ್ಚಿನ ಉತ್ಸಾಹದಲ್ಲಿ ಕೆಲಸ ಮಾಡಿಯಾರೇನೋ.

ಕನ್ನಡ ಸಿನಿಮಾಗಳಲ್ಲಿ ಗಟ್ಟಿ ಕತೆಗಳ ಕೊರತೆ ತುಂಬಿಕೊಂಡಿರುವುದೇಕೆ ಎಂದು ನೋಡುವಾಗ ನನಗೆ ರಾಜ್‌ಕಪೂರ್ ಮತ್ತು ಅಕಿರ ಕುರಸೋವಾರ ಚಿತ್ರಗಳು ನೆನಪಿಗೆ ಬರುತ್ತವೆ. 'ಅನಾರಿ' ಚಿತ್ರದಲ್ಲಿ ರಾಜ್‌ಕಪೂರ್ ರಸ್ತೆಯಲ್ಲಿ ನಡೆದುಹೋಗುವಾಗ ಆತನಿಗೊಂದು ಪರ್ಸ್ ಸಿಗುತ್ತದೆ. ಪರ್ಸ್ ಕೈಗೆತ್ತಿಕೊಂಡವನಿಗೆ ಅದರ ತುಂಬ ದುಡ್ಡು ಮತ್ತು ಅದರ ಮಾಲೀಕನ ವಿಳಾಸ ಇರುವುದು ಕಾಣುತ್ತದೆ. ಕೊಂಚವೂ ತಡಮಾಡದೆ ರಾಜ್‌ಕಪೂರ್ ಪರ್ಸ್‌ನಲ್ಲಿದ್ದ ವಿಳಾಸ ಹುಡುಕಿಕೊಂಡು ಒಂದು ದೊಡ್ಡ ಬಂಗಲೆಯ ಮುಂದೆ ಬಂದು ನಿಲ್ಲುತ್ತಾನೆ. ಈ ಪರ್ಸ್ ಯಾರೋ ದುಡ್ಡಿರುವ ಧಣಿಮಗನದು ಆತನಿಗೆ ಇದರೊಳಗಿರುವ ದುಡ್ಡಿನ ಅವಶ್ಯಕತೆ ಖಂಡಿತ ಇರಲಾರದೆಂದು ರಾಜ್‌ಕಪೂರ್ ಅಲ್ಲಿಂದ ಕಾಲು ಕೀಳಬಹುದಿತ್ತು. ಆದರೆ ಆತ ಹಾಗೆ ಮಾಡುವುದಿಲ್ಲ. ಬಂಗಲೆಯೊಳಗಿಂದ ಬಂದ ಶ್ರೀಮಂತ ವ್ಯಕ್ತಿಯೊಬ್ಬನಿಗೆ ಹೀಗೀಗೆ ನನಗೆ ರಸ್ತೆಯಲ್ಲಿ ಈ ಪರ್ಸ್ ಸಿಕ್ಕಿತು, ಇದರೊಳಗೆ ನಿಮ್ಮ ವಿಳಾಸ ಇದ್ದಿದ್ದರಿಂದ ಇದು ನಿಮಗೆ ತಲುಪಿಸಲು ಸಾಧ್ಯವಾಯಿತು ಎಂದು ಹೇಳಿ ರಾಜ್‌ಕಪೂರ್ ಪರ್ಸ್ ಆ ಶ್ರೀಮಂತನ ಕೈಗೆ ಕೊಟ್ಟು ಹೊರಡಲು ರೆಡಿಯಾಗುತ್ತಾನೆ. ಆ ಶ್ರೀಮಂತನಿಗೆ ಆಶ್ಚರ್ಯ ರಾಜ್‌ಕಪೂರನ ಹರಿದ ಬೂಟು, ಮಾಸಿದ ಬಟ್ಟೆ ಮತ್ತು ಒಟ್ಟು ಆತನ ದೈನೇಸಿ ಸ್ಥಿತಿಯನ್ನು ಕಂಡು ತನ್ನೊಳಗೆ ಮರುಕಪಡುತ್ತಾನೆ. ನಾಳೇ ನಮ್ಮನೆಯಲೊಂದು ಪಾರ್ಟಿಯಿದೆ ನೀನೇ ಮುಖ್ಯ ಅತಿಥಿ ಬರಲೇಬೇಕೆಂದು ರಾಜ್‌ಕಪೂರನಿಗೆ ಆತ ಆಹ್ವಾನ ನೀಡುತ್ತಾನೆ. ಮರುದಿನ ಆ ಶ್ರೀಮಂತನ ಬಂಗಲೆಯೊಳಗೆ ತನ್ನ ಕೀಳರಿಮೆಯೊಂದಿಗೆ

ಅಂಜುತ್ತಲೇ ಬರುವ ರಾಜ್‌ಕಪೂರನಿಗೆ ಅಲ್ಲಿನ ಪಾರ್ಟಿಗೆ ಬಂದಿದ್ದ ಶ್ರೀಮಂತರನ್ನು ಕಂಡು ತಾನಿಲ್ಲಿಗೆ ಬರಬಾರದಿತ್ತು ಅನ್ನಿಸುತ್ತದೆ. ತಕ್ಷಣ ಆ ಶ್ರೀಮಂತ ವ್ಯಕ್ತಿ ರಾಜ್‌ಕಪೂರನ ಕಣ್ಣುಗಳನ್ನೆ ನೋಡುತ್ತಾ ಪಾರ್ಟಿಗೆ ಬಂದಿರುವ ಶ್ರೀಮಂತರನ್ನು ತೋರಿಸಿ 'ನಿನ್ನಂತೆಯೇ ಈ ಜನಕ್ಕೂ ರಸ್ತೆಯಲ್ಲಿ ಪರ್ಸ್ ಸಿಕ್ಕಿತು, ನೀನು ಹಿಂತಿರುಗಿಸಿದೆ ಈ ಜನ ಹಿಂತಿರುಗಿಸಲಿಲ್ಲ ಅಷ್ಟೇ ವ್ಯತ್ಯಾಸ' ಅನ್ನುತ್ತಾನೆ. ಒಂದು ಸಣ್ಣಕತೆಯಲ್ಲಿ ಹೇಳಬಹುದಾದ ವಿವರಗಳನ್ನು ಹೇಳುವ ಈ ಪುಟ್ಟ ಸಂಭಾಷಣೆ ತೆರೆಯ ಮೇಲೆ ನೋಡುಗರಿಗೆ ಇನ್ನೂ ದೊಡ್ಡ ಮಟ್ಟದ ಪರಿಣಾಮ ಬೀರಬಹುದು. ಹತ್ತಾರು ಪುಟಗಳಲ್ಲಿ ಹೇಳಲು ಹೊರಡುವ ಜೀವನ ಪಾಠಗಳನ್ನು ಸಿನಿಮಾದಲ್ಲಿ ಕೇವಲ ಒಂದೇ ಒಂದು ದೃಶ್ಯದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಬಹುದು. ಹೀಗಾಗಿಯೇ ಕರ್ನಾಟಕದಲ್ಲಿ ಕುವೆಂಪು, ಬೇಂದ್ರೆ, ಲಂಕೇಶರು ತಲುಪದ ಮನೆಗಳಿಗೆ ಡಾ. ರಾಜ್‌ಕುಮಾರ್ ಅನಾಯಾಸವಾಗಿ ತಲುಪಿಕೊಂಡಿದ್ದಾರೆ.

ಅಕಿರ ಕುರಸೋವಾನ 'ಸೆವೆನ್ ಸಮುರಾಯ್' ಚಿತ್ರದಲ್ಲಿ ತಮ್ಮ ರಕ್ಷಣೆಗೆಂದು ನೇಮಿಸಿಕೊಂಡಿರುವ ಸಮುರಾಯ್‌ಗಳ ಮೇಲೆ ತಮ್ಮ ಮನೆಯ ಹೆಣ್ಣುಮಕ್ಕಳ ಕಣ್ಣುಬಿದ್ದಿದೆಯೆಂದು ಹಳ್ಳಿಗನೊಬ್ಬ ಸಂತನೊಬ್ಬನ ಬಳಿ ದೂರು ಹೇಳಿ ಪರಿಹಾರದ ಮಾರ್ಗ ತೋರಬೇಕೆಂದು ಅಂಗಲಾಚುತ್ತಾನೆ. ಅದಕ್ಕೆ ಸಂತ 'ಲೋ ಮುಟ್ಠಾಳ ನಿನ್ನ ತಲೇನೇ ಹೋಗುತ್ತಿರುವಾಗ ನಿನ್ನ ಗಡ್ಡದ ಬಗ್ಗೆ ಚಿಂತೆ ಮಾಡ್ತಿದ್ದೀಯಲ್ಲೋ' ಅನ್ನುತ್ತಾನೆ. ಆ ಹಳ್ಳಿಗ ಮರುಮಾತಾಡದೆ ಅಲ್ಲಿಂದ ಹೊರಟುಬಿಡುತ್ತಾನೆ. ಜೆನ್ ಕತೆಯಂತಿರುವ ಈ ಪುಟ್ಟ ದೃಶ್ಯ 'ಸೆವೆನ್ ಸಮುರಾಯ್' ಚಿತ್ರದ ಜೀವದ್ರವ್ಯ ಅನ್ನುವುದು ಆ ಚಿತ್ರ ನೋಡಿದವರಿಗೆ ತಿಳಿಯಬಹುದು. ಈ ತರಹದ ಚಿತ್ರಗಳ ಉದಾಹರಣೆ ಕೊಡುವಾಗ ನಾನು ಕನ್ನಡ ಚಿತ್ರಗಳಿಗಾಗಿ ತಡಕಾಡಿ ಸೋತುಹೋದೆ. ಕಳೆದ ಅರವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯದಲ್ಲಿ ಅನೇಕ ಸೃಜನಶೀಲ ಕತೆ ಕಾವ್ಯ ಕಾದಂಬರಿಗಳು ರಚನೆಯಾಗಿರುವಂತೆ ಸಿನಿಮಾಗಳು ನಿರ್ಮಾಣಗೊಂಡಿಲ್ಲ. ಕನ್ನಡ ಸಿನಿಮಾಗಳಲ್ಲಿ ಸೃಜನಶೀಲತೆಯ ಅಂಶಗಳನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ. ಸೃಜನಶೀಲತೆ, ಆರೋಗ್ಯಕರ ಅಭಿರುಚಿಯಿರುವ ಕತೆಗಳನ್ನು ಬಿಟ್ಟು ಮತ್ತೆಲ್ಲವನ್ನೂ ಕಟ್ಟಿಕೊಡುವ ಈ ಗಾಂಧಿನಗರದ ಜನರೇಕೇ ಹೆಚ್ಚೆಚ್ಚು ಬರ್ಗ್‌ಮನ್, ಕುರಸೋವಾ, ರಾಜ್‌ಕಪೂರ್ ಮತ್ತು ಇರಾನ್ ದೇಶದ ಸಿನಿಮಾಗಳನ್ನು ನೋಡುವುದಿಲ್ಲ ಎಂಬುದು ನನ್ನ ವೈಯಕ್ತಿಕ ಅಳಲು.

ಇಂಡಿಯಾದ ಯಾವ ಭಾಷೆಯ ಸಿನಿಮಾರಂಗದವರು ಮುಟ್ಟದ ಕತೆ, ವಸ್ತುವನ್ನು ದಿಟ್ಟವಾಗಿ ಮುಟ್ಟುವ ಛಾತಿ ತಮಿಳರಿಗೆ ಸಿದ್ಧಿಸಿದೆ. ಹೊಸ ಪ್ರಯೋಗಗಳಿಗೆ ತಮಿಳರು ತೆತ್ತುಕೊಂಡಂತೆ ದಕ್ಷಿಣ ಭಾರತದ ಇತರ ಭಾಷೆಗಳ ಸಿನಿಮಾ ಮಂದಿ ನಿಜಕ್ಕೂ ತೆತ್ತುಕೊಳ್ಳಲಾರರು. ತಮಿಳಿನ ಕಮಲ್ ಹಾಸನ್, ರಾಜ್‌ಕಿರಣ್, ಪಶುಪತಿಯಂತಹ ಅಪ್ಪಟ ನಟರನ್ನು ಕನ್ನಡದಲ್ಲಿ ಕಾಣಲು ಸಾಧ್ಯವಿಲ್ಲ. ಸಾಮಾಜಿಕ ಬಹಿಷ್ಕಾರಕ್ಕೊಳಗಾದ ಭಿಕ್ಷುಕರ ಜಗತ್ತಿನ ಅಸಹಾಯಕತೆ, ತಲ್ಲಣ ಮತ್ತು ಘನತೆಯನ್ನು 'ನಾನ್ ಕಡವುಳ್' ಚಿತ್ರದಲ್ಲಿ ಬಾಲಾರಂತಹ ನಿರ್ದೇಶಕರು ಮಾತ್ರ ಯಾವುದೇ ಅಬ್ಬರವಿಲ್ಲದೆ ಮೆಲುದನಿಯಲ್ಲಿ ಹೇಳಬಲ್ಲರು. ಇದೇ 'ನಾನ್ ಕಡವುಳ್' ಚಿತ್ರದ ಕತೆಯ ಎಳೆ ಕೊಟ್ಟು ಕನ್ನಡದಲ್ಲಿ ನಿರ್ಮಿಸಲು ಸಾಧ್ಯವೇ ಎಂದು ಗಾಂಧಿನಗರದ ಸಿನಿಮಂದಿಗೆ ಅಕಸ್ಮಾತ್ ಯಾರಾದರೂ ಕೇಳಿದರೆ ಇಡೀ ಗಾಂಧಿನಗರವೇ ಕ್ಯಾಮೆರಾ, ರೀಲಿನ ಡಬ್ಬಗಳನ್ನು ಬಿಸಾಡಿ ದಿಕ್ಕಾಪಾಲಾಗಿ ಓಡಿಬಿಡಬಹುದು.

ತಮಿಳಿನ ಒಂದು ಕಾಲದ ಶ್ರೇಷ್ಠ ಚಿತ್ರಗಳೆಲ್ಲ ಕನ್ನಡಕ್ಕೆ ಬಂದು ತಿಥಿಯಾಗಿವೆ. ಇಲ್ಲಿನವರಿಗೆ ಕಾಪಿ ಹೊಡೆದರೂ ಪಾಸಾಗುವ ಕಲೆಗಳು ಗೊತ್ತಿಲ್ಲ. ರಿಮೇಕ್ ಸಿನಿಮಾ ನಿರ್ಮಿಸುವಾಗಲೂ ಮೂಲ

ಚಿತ್ರದಷ್ಟೇ ಕಸುಬುದಾರಿಕೆಯನ್ನು ಒಂದು ಚಿತ್ರ ಬೇಡುತ್ತದೆ ಎಂಬ ಕಾಮನ್‌ಸೆನ್ಸ್ ಇಲ್ಲಿನವರಿಗೆ ಇಲ್ಲದಿರುವುದರಿಂದಲೇ ರಿಮೇಕ್ ಸಿನಿಮಾಗಳು ಬಿಡುಗಡೆಯಾದ ವಾರಕ್ಕೆ ಥೇಟರಿನಿಂದ ಖಾಲಿಯಾಗಿ ಒಂದೇ ತಿಂಗಳಿಗೆ ಟಿವಿಯಲ್ಲಿ ಕಾಣಸಿಕೊಳ್ಳುತ್ತದೆ.

ಇರಾನ್ ದೇಶದ ಸಮೀರಾ ಮತ್ತು ಹನಾ ಮಖ್ಮಲ್‌ಬಫ್ ಸೋದರಿಯರ ಪ್ರತಿಭೆಯನ್ನು ಗಮನಿಸುವಾಗ ಇಲ್ಲಿ ಕನ್ನಡದ ದೊಡ್ಡನಟರು ತಮ್ಮ ಗಂಡುಮಕ್ಕಳನ್ನು ಸಿನಿಮಾಗಳಿಗೆ ತಂದು ಪರಿಚಯಿಸುವಾಗ ತೋರುವ ಸಂಭ್ರಮ, ಉತ್ಸಾಹಗಳನ್ನು ಹೆಣ್ಣುಮಕ್ಕಳ ಬಗ್ಗೆ ಯಾಕೆ ತೋರಿಸಿಲ್ಲ ಎಂಬ ಪ್ರಶ್ನೆಗಳು ಕಾಡುತ್ತವೆ. ಅವರಿಗೆ ತಮ್ಮ ಮನೆಯ ಹೆಣ್ಣುಮಕ್ಕಳನ್ನು ಕನ್ನಡ ಸಿನಿಮಾರಂಗಕ್ಕೆ ಕರೆತರುವ ಸಾಹಸಕ್ಕೆ ಕನ್ನಡದ ಯಾವೊಬ್ಬ ದೊಡ್ಡ ನಟನೂ ಕೈಹಾಕಿಲ್ಲ ಅನ್ನುವುದು ಹದಿನಾರಣೇ ಸತ್ಯ. ಹೀಗಿರುವಾಗ ಈ ರಂಗದಲ್ಲಿ ಹೆಣ್ಣನ್ನು ಯಾವ ಕಣ್ಣುಗಳಿಂದ ನೋಡಲಾಗುತ್ತಿದೆ ಎಂಬುದನ್ನು ಓದುಗರ ಜಿಜ್ಞಾಸೆಗೆ ಬಿಡುತ್ತೇನೆ. ಇಷ್ಟೆಲ್ಲದರ ನಡುವೆಯೂ ಕನ್ನಡ ಸಿನಿಮಾರಂಗಕ್ಕಿರುವ ಸಾಧ್ಯತೆ, ಸವಾಲುಗಳನ್ನು ಹೀಗೆ ಪಟ್ಟಿಮಾಡಿ ನೋಡಬಹುದು:

ಕನ್ನಡ ಸಿನಿಮಾ: ಸಾಧ್ಯತೆಗಳು

೧. ತಮ್ಮ ಮಿತಿ ಮತ್ತು ದೌರ್ಬಲ್ಯಗಳನ್ನು ಗಾಂಧಿನಗರದ ಜನ ಮೊದಲು ಅರಿತುಕೊಳ್ಳಬೇಕು. ವಿದೇಶದಲ್ಲಿ ಹಾಡುಗಳನ್ನು ಚಿತ್ರೀಕರಿಸಿದರೆ ಮತ್ತು ಎಂಥ ಕಳಪೆ ಚಿತ್ರಕ್ಕೂ ಡಿಟಿಎಸ್ ಅಳವಡಿಸಿಬಿಟ್ಟರೆ ಸಾಕು ಸಿನಿಮಾ ಗೆದ್ದುಬಿಡುತ್ತದೆ ಎಂಬ ಹುಂಬ ವಿಶ್ವಾಸದಿಂದ ಈ ಜನ ಮೊದಲು ಹೊರಬರಬೇಕು.

೨. ಹೊರರಾಜ್ಯ ಮತ್ತು ವಿದೇಶಗಳಲ್ಲಿ ಕನ್ನಡ ಚಿತ್ರಗಳಿಗೆ ಮಾರುಕಟ್ಟೆ ದಕ್ಕುವುದು ಕನಸಿನ ಮಾತು. ಕರ್ನಾಟಕದ ಗಡಿ ಪ್ರದೇಶಗಳಲ್ಲಿ ಜನ ಒಪ್ಪುವಂತಹ ಸಿನಿಮಾ ನಿರ್ಮಿಸಿ ಥೇಟರ್‌ಗಳಲ್ಲಿ ಕಡಿಮೆ ಶುಲ್ಕವಿಟ್ಟು ಜನರನ್ನು ಸೆಳೆಯಬೇಕು.

೩. ಕರ್ನಾಟಕದ ಜನ ಕನ್ನಡ ಸಿನಿಮಾಗಳನ್ನು ಊಟದ ಜೊತೆಗಿನ ಉಪ್ಪಿನಕಾಯಿಯಂತೆ ಸ್ವೀಕರಿಸುತ್ತಾರೆಯೇ ಹೊರತು ಇಡೀ ಉಪ್ಪಿನಕಾಯಿಯನ್ನೇ ಊಟದಂತೆ ತಿನ್ನಲಾರರು. ಇಂಥ ಜನರಿಂದ ನಲವತ್ತು ರೂಪಾಯಿ ಕಿತ್ತುಕೊಂಡು ಎಂಟಾಣೆ ಸಿನಿಮಾ ತೋರಿಸುವ ಬೆಳವಣಿಗೆಗಳನ್ನು ಗಾಂಧಿನಗರದ ಬಣ್ಣದ ಜನ ಇನ್ನಾದರೂ ನಿಲ್ಲಿಸಲಿ.

೪. ಭ್ರಮೆ ಮತ್ತು ಮೂಢನಂಬಿಕೆಗಳಿಂದ ಹೊರಬರದಿದ್ದರೆ ಕನ್ನಡ ಸಿನಿಮಾರಂಗ ಪತನವಾಗುವುದು ಖಚಿತ ಎಂಬುದನ್ನು ಹೇಳಲು ಯಾರೋ ಜ್ಯೋತಿಷಿಯೇ ಬರಬೇಕಿಲ್ಲ.

೫. ರಿಯಲ್ ಎಸ್ಟೇಟ್ ದುಡ್ಡುಬಾಕರನ್ನು, ಮೀಟರ್ ಬಡ್ಡಿ ದುಡ್ಡಿನ ಅಡ್ಡಕಸುಬಿ ಜನರನ್ನು ಗಾಂಧಿ ನಗರದ ಜನ ಇನ್ನಾದರೂ ದೂರವಿಡಲಿ.

೬. ಸಂತೆಹೊತ್ತಿಗೆ ಮೂರು ಮೊಳ ನೇಯ್ದು ಥೇಟರಿಗೆ ರೀಲಿನ ಡಬ್ಬ ಕಳಿಸುವ ಸಿನಿಮಾಗಳನ್ನು ಸೆನ್ಸಾರ್ ಹಂತದಲ್ಲಿಯೇ ನಿಯಂತ್ರಿಸಬೇಕು.

೭. ಇಡೀ ಸಿನಿಮಾದ ಕಾರ್ಮಿಕರಿಗೆಲ್ಲ ಸಂಬಂಧಿಸಿದಂತೆ ಏಕರೂಪ ಸಂಹಿತೆಯೊಂದು ರಚನೆಯಾಗುವಂತೆ ಗಾಂಧಿನಗರದ ಜನ ಸರ್ಕಾರದ ಮೇಲೆ ಒತ್ತಡ ಹೇರಲಿ.

೮. ವರ್ಷಕ್ಕೆ ಐವತ್ತಕ್ಕಿಂತ ಹೆಚ್ಚು ಚಿತ್ರಗಳ ನಿರ್ಮಾಣವಾಗದಂತೆ ನೀತಿಯೊಂದನ್ನು ರೂಪಿಸಬೇಕು. ಐವತ್ತರ ನಂತರ ಬರುವ ಸಿನಿಮಾಗಳಿಗೆ 'ಯು' ಪ್ರಮಾಣ ಪತ್ರ ನೀಡದಂತೆ, ಸರ್ಕಾರದ ಸಬ್ಸಿಡಿಗೆ ಅರ್ಜಿಹಾಕಲು ಅರ್ಹತೆ ಪಡೆಯದಂತೆ ಕಟ್ಟುನಿಟ್ಟಿನ ಅನಿಯಮವನ್ನು ಗಾಂಧಿನಗರದ ಜನ ಸರ್ಕಾರದ ಜತೆಗೂಡಿ ರೂಪಿಸಿದರೆ ಇಡೀ ಕನ್ನಡ ಸಿನಿಮಾರಂಗಕ್ಕೆ ಒಳಿತಾಗುತ್ತದೆ.

೯. ಮಹಿಳಾ ನಟಿಯರನ್ನು ಮತ್ತು ಕಾರ್ಮಿಕರನ್ನು ಕೆಟ್ಟದಾಗಿ ನಡೆಸಿಕೊಳ್ಳುವ ಗಾಂಧಿನಗರದ ನಿಸ್ಸೀಮರಿಗೆ ಕಾನೂನಿನ ಮೂಲಕ ಕ್ರಿಮಿನಲ್ ಸ್ವರೂಪದ ಶಿಕ್ಷೆಯಾಗುವುದರ ಜೊತೆಗೆ ಅಂಥವರನ್ನು ಕನ್ನಡ ಸಿನಿಮಾರಂಗವನ್ನು ಮತ್ತೆ ಪ್ರವೇಶಿಸದಂತೆ ಆಜೀವ ನಿಷೇಧ ಶಿಕ್ಷೆಯಾಗುವಂತೆ ಶಿಸ್ತುಕ್ರಮ ಜರುಗಿಸಬೇಕು.

ಕನ್ನಡ ಸಿನಿಮಾ: ಸವಾಲುಗಳು

೧. ಒಬ್ಬ ಕ್ರಿಕೆಟ್ ಪಟುವನ್ನು ಅಂತರರಾಷ್ಟ್ರೀಯ ಕ್ರಿಕೆಟ್ ತಂಡಕ್ಕೆ ಆಯ್ಕೆ ಮಾಡುವಾಗ ಆತ ರಣಜಿಯಂತಹ ದೇಶೀಯ ಕ್ರಿಕೆಟ್‌ನಲ್ಲಿ ತೋರಿದ ಸಾಮರ್ಥ್ಯವನ್ನು ಪರಿಗಣಿಸುವಂತೆ ನೀನಾಸಂ, ರಂಗಾಯಣ ಮತ್ತು ಕಿರುತೆರೆಯ ಕಲಾವಿದರನ್ನು ಅವರ ಪ್ರತಿಭೆಯ ಆಧಾರದ ಮೇಲೆ ದೊಡ್ಡ ತೆರೆಗೆ ಪ್ರಮೋಟ್ ಮಾಡಲು ಎದುರಾಗಿರುವ ಅಡ್ಡಿಯೇನು?

೨. ಈಗಾಗಲೇ TATA, Airtel, Reliance ನಂತಹ ಬಂಡವಾಳಶಾಹಿಗಳು ಸ್ಯಾಟಲೈಟ್ ಮೂಲಕ ಮಲ್ಟಿಪ್ಲೆಕ್ಸ್ ಥೇಟರ್‌ಗಳಿಗೆ ಚಿತ್ರ ಬಿಡುಗಡೆ ಮಾಡಿ ಪ್ರದರ್ಶಿಸುತ್ತಿರುವಂತೆ ಟಿವಿಗಳಿಗೂ ಈ ಆವಿಷ್ಕಾರಗಳನ್ನು ವಿಸ್ತರಿಸುವ ಸಾಧ್ಯತೆ ಇದೆ. ಒಂದೊಮ್ಮೆ ಈ ಬೆಳವಣಿಗೆ ಜಾರಿಯಾದರೆ ಕರ್ನಾಟಕದಲ್ಲಿರುವ ಬಹುಪಾಲು ಎಲ್ಲ ಚಿತ್ರಮಂದಿರಗಳು ಕಲ್ಯಾಣ ಮಂಟಪಗಳಾಗಿ ತಮ್ಮ ಚಹರೆ ಬದಲಿಸಿಕೊಳ್ಳಬಹುದು.

೩. ಗಾಂಧಿನಗರದ ಒಳಜಗಳಗಳು ಬೀದಿಗೆ ಬಂದು ಹರಾಜಾಗುತ್ತವೆ. ಗಾಂಧಿನಗರದ ಈ ಸಿನಿಮಾ ಜನರನ್ನು ನಿಯಂತ್ರಿಸುವ ಶಿಸ್ತು ಸಮಿತಿ ದಲ್ಲಾಳಿಯಂತೆ ವರ್ತಿಸುತ್ತಿರುವುದೇ ಅಲ್ಲಿನ ಸಣ್ಣಪುಟ್ಟ ತಂಟೆ ತಕರಾರುಗಳು ದೊಡ್ಡವಿವಾದಗಳಾಗಿ ಕಾಣಿಸಿಕೊಳ್ಳುತ್ತವೆ. ಇದನ್ನು ನಿಯಂತ್ರಿಸಲು ಗಾಂಧಿ ನಗರಕ್ಕೆ ಮಿಲಿಟರಿ ಸೈನ್ಯ ಬರಬೇಕೇ?

೪. ಪರಭಾಷಾ ಚಿತ್ರಗಳನ್ನು ಬಿಡುಗಡೆಯಾದ ಏಳು ವಾರಗಳ ನಂತರ ಕರ್ನಾಟಕದಲ್ಲಿ ಬಿಡುಗಡೆಯಾಗುವಂತೆ ಅಲಿಖಿತ ಶಾಸನವೊಂದು ಜಾರಿಗೆ ಬಂತು, ನಂತರ ಅದು ಮೂರು ವಾರಗಳಿಗಿಳಿಯಿತು. ಈಗ ಬಿಡುಗಡೆಯಾದ ದಿನವೇ ಕರ್ನಾಟಕದ ಬಹುತೇಕ ಚಿತ್ರಮಂದಿರಗಳಲ್ಲಿ ಪರಭಾಷಾ ಚಿತ್ರಗಳು ರಾರಾಜಿಸುತ್ತಿವೆ. ಕ್ಷಣಕ್ಕೊಮ್ಮೆ ಬಣ್ಣ ಬದಲಿಸುವ ಗಾಂಧಿನಗರದ ನಿಷ್ಕ್ರಿಯತೆಗೆ ಏನು ಹೇಳುವುದು?

೫. ರಿಮೇಕ್ ಚಿತ್ರಗಳಿಗೆ, ಅರ್ಧಂಬರ್ಧ ಕದ್ದು ಮಾಡಿದ ಚಿತ್ರಗಳಿಗೆ, ಶೇಕಡ ೯೦ರಷ್ಟು ಕನ್ನಡದ ಕಲಾವಿದರನ್ನು ಬಳಸಿಕೊಳ್ಳದ ಚಿತ್ರಗಳಿಗೆ, ಕನ್ನಡ ಭಾಷೆಯನ್ನು ವಿಕೃತವಾಗಿ ಕೊಲ್ಲುವ ಚಿತ್ರಗಳಿಗೆ ಸಬ್ಸಿಡಿ ನೀಡಲಾಗುವುದಿಲ್ಲ ಎಂದು ಹೇಳಲು ಸರ್ಕಾರದ ನಾಲಿಗೇಕೇ ಸಾಧ್ಯವಾಗುತ್ತಿಲ್ಲ?

೬. ಸೃಜನಶೀಲ ಮತ್ತು ಸದಭಿರುಚಿಯ ಚಿತ್ರಗಳಿಗೆ ಮಾತ್ರ ಸಂಪೂರ್ಣ ತೆರಿಗೆ ವಿನಾಯಿತಿ ನೀಡಿ,


ಚಿತ್ರಮಂದಿರಗಳ ಮೇಲೆ ಖಾಸಗಿಯವರ ಹಿಡಿತ ತಪ್ಪಿಸಿ ಏಕಸ್ವಾಮ್ಯ ಸಾಧಿಸಲು ಸರ್ಕಾರಕ್ಕೆ ಸಾಧ್ಯವಿಲ್ಲವೇ?

೭. ಎ, ಬಿ ಮತ್ತು ಸಿ ಕೇಂದ್ರಗಳಲ್ಲಿ ಟಿಕೆಟ್ ಶುಲ್ಕವನ್ನು ರಾಜಧಾನಿ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮಾಂತರ ಭಾಗಗಳಾಗಿ ಪ್ರತ್ಯೇಕಿಸಿ ಭಿನ್ನ ದರಗಳಲ್ಲಿ ಜಾರಿಗೆ ತರಲು ಸಾಧ್ಯವಾದರೆ ಚಿತ್ರಮಂದಿರಗಳತ್ತ ಒಂದಷ್ಟು ಜನರನ್ನು ಸೆಳೆಯಬಹುದು. ಇದನ್ನು ಗಾಂಧಿನಗರದ ತಲೆ ಮತ್ತು ಕಿವಿಗಳಿಗೆ ಮುಟ್ಟುವಂತೆ ಯಾವ ಗೋಪುರದ ತುದಿಯೇರಿ ಕೂಗಿ ಹೇಳಬೇಕೋ ಗೊತ್ತಾಗುತ್ತಿಲ್ಲ.


ಕಡೆಯದಾಗಿ ಕನ್ನಡ ಚಲನಚಿತ್ರಗಳನ್ನು ಮಾತ್ರ ನಂಬಿಕೊಂಡು ಬದುಕಿರುವ ಜನ ಆರ್ಥಿಕವಾಗಿ ತಮ್ಮ ಕಾಲ ಮೇಲೆ ನಿಂತುಕೊಳ್ಳುವ ಛಲ ಸಾಧಿಸಬೇಕಾದರೆ ನಮಗೆ ಡಾ.ರಾಜ್‌ಕುಮಾರ್‌ರಂತಹ ಸಾರ್ವಕಾಲೀಕ ಶ್ರೇಷ್ಠ ನಟರ ಜೊತೆ ರಜನಿಕಾಂತ್ ತರಹದ ಮನುಷ್ಯರ ಅವಶ್ಯಕತೆ ಇದೆ. ಆರ್ಥಿಕವಾಗಿ ಸಂಪೂರ್ಣವಾಗಿ ಮುಳುಗಿಹೋಗುತ್ತಿದ್ದ ನಿರ್ಮಾಪಕರ ಬೆನ್ನಿಗೆ ರಜನಿಕಾಂತ್ ಆಸರೆಯಾಗುತ್ತಿದ್ದ ಪರಿ ಇಡೀ ಭಾರತೀಯ ಚಿತ್ರರಂಗಕ್ಕೆ ಅಪರೂಪದ ನಿದರ್ಶನವಾಗಬಲ್ಲದು. ತೆಗೆದುಕೊಳ್ಳುವುದಕ್ಕಿಂತ ಕೊಡುವುದು ಹೆಚ್ಚು ಅರ್ಥ ಕೊಡುತ್ತದೆ ಅಂದುಕೊಂಡ ದಿನ ಮಾತ್ರ ನಾವು ಗಾಂಧಿನಗರದಲ್ಲಿ ರಜನಿಕಾಂತ್‌ರಂತಹ ಮನುಷ್ಯರನ್ನು ಕಾಣಲು ಸಾಧ್ಯ.

ಇಂಡಿಯಾದಲ್ಲಿ ಅದ್ಯಾವ ಧರ್ಮ ಇನ್ನು ಬದುಕಿದೆಯೋ ಗೊತ್ತಿಲ್ಲ, ಕ್ರಿಕೆಟ್ ಮತ್ತು ಸಿನಿಮಾ ಈ ದೇಶದ ಅಧಿಕೃತ ಧರ್ಮಗಳಾಗಬಲ್ಲವು ಎಂದು ಕವಿ ಜಾವೇದ್ ಅಖ್ತರ್ ಹೇಳಿದ ಮಾತು ನೆನಪಾಗುತ್ತಿದೆ. ಇಲ್ಲಿ ಬದುಕಿನ ವ್ಯಂಗ್ಯ ವಿಪರ್ಯಾಸಗಳು ಹೇಗಿರುತ್ತವೆಂದರೆ 'ಇಲ್ಲಿ ಎಲ್ಲ ಮಾಯಾ ನಾಳೆ ನಾವು ಮಾಯಾ' ಎಂಬ ವ್ಯಾಸಬದ್ಧದ ಹಾಡು ತುರುಕಿ ತೆರೆಯ ಮೇಲೆ ತೋರಿಸುವ ಮಂದಿಗೆ ಈ ಸರ್ಕಾರ, ಸಮಾಜಗಳು ವಿಶೇಷ ಸಾಮಾಜಿಕ ಪರಿಣಾಮ ಬೀರುವ ಚಿತ್ರವಿದು ಎಂದು ಹೇಳಿ ಪ್ರಶಸ್ತಿ ಕೊಡಲು ಮುಂದಾಗುತ್ತವೆ. ಅದೇ ಹಾಡಿನ ನಾಲ್ಕು ಸಾಲನ್ನು ಬೀದಿ ಹೋರಾಟಗಳಲ್ಲಿ ಬಳಸಿಕೊಳ್ಳುವ ಜನರನ್ನು 'ಅವರು ನಕ್ಸಲರು, ಅವರ ಮೇಲೆ ಕಣ್ಣಿರಲಿ' ಎಂದು ಖುದ್ದು ಸರ್ಕಾರವೇ ಪೊಲೀಸರಿಗೆ ಸುದ್ದಿ ರವಾನಿಸುತ್ತದೆ.

ಚಿತ್ರಮಂದಿರಗಳಲ್ಲಿ ಕನ್ನಡ ಸಿನಿಮಾಗಳನ್ನು ಸಂಪೂರ್ಣ ನೋಡುವ ಬದಲು ಅರ್ಧದಲ್ಲಿಯೇ ಎದ್ದು ಬಂದ ಸಂದರ್ಭಗಳು ಹೆಚ್ಚು ಕಂಡಿರುವ ನನಗೆ If you can't believe a little in what you see on the screen, it's not worth wasting your time on cinema ಎಂಬ Serge Daneyಯ ಮಾತುಗಳು ವಿಷಾದದ ಜೊತೆಗೆ ಖುಷಿಯನ್ನು ಕೊಡುತ್ತವೆ.



ಸಂಶೋಧಕ, ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆ
ನೀತಿ ಅಧ್ಯಯನ ಕೇಂದ್ರ
ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ
ನಾಗರಭಾವಿ, ಬೆಂಗಳೂರು ೫೬೦ ೨೪೨
ಮೊ. ೯೮೮೦೯ ೧೪೫೬೮
ದೂ. ೦೮೦-೨೩೧೬೦೫೩೧, ೨೩೧೬೦೫೩೨



ಶತಮಾನದ ಸ್ಮರಣೆ:

ರಾಜರತ್ನಂ ಹಾಗೂ ರಾಘವ ಅವರ ಮಕ್ಕಳ ಸಾಹಿತ್ಯ

ಪ್ರೊ. ಟಿ.ಎಸ್.ನಾಗರಾಜಶೆಟ್ಟಿ

ಕಳೆದ ವರ್ಷದ ಉದ್ದಕ್ಕೂ ನಾಡಿನೆಲ್ಲೆಡೆ ಡಾ.ಜಿ.ಪಿ.ರಾಜರತ್ನಂ ಅವರ ಶತಮಾನೋತ್ಸವವನ್ನು ಉತ್ಸಾಹದಿಂದ ಆಚರಿಸಲಾಯಿತು. ಈ ವರ್ಷ ಡಾ.ಎಂ.ವಿ.ಸೀತಾರಾಮಯ್ಯ(ರಾಘವ) ಅವರ ಶತಮಾನೋತ್ಸವದ ಸರದಿ. ಇಬ್ಬರೂ ಕನ್ನಡ ಸಾರಸ್ವತ ಜಗತ್ತಿನ ಪ್ರಮುಖರು. ಪರಸ್ಪರ ಸ್ನೇಹ, ವಿಶ್ವಾಸಗಳಿಂದ ಬಾಳಿದವರು.

'ರಾಜರತ್ನಂ' ಅವರು ತಮ್ಮ ಶಿಶುಗೀತೆಗಳಿಗೆ ನನ್ನಿಂದ ಚಿತ್ರಗಳನ್ನು ಬರೆಯಿಸಿಕೊಳ್ಳದಿದ್ದರೆ, ನಾನು ಬಹುಶಃ 'ಹೂವಾಡಗಿತ್ತಿ'ಯ 'ರಾಘವ' ನಾಗುತ್ತಿರಲಿಲ್ಲ'' ಎಂದು ಸೀತಾರಾಮಯ್ಯನವರು ನೆನಪಿಸಿಕೊಂಡಿದ್ದಾರೆ. ಅವರು ಎಂ.ಎ. ವಿದ್ಯಾರ್ಥಿಯಾಗಿದ್ದಾಗಲೇ ರಾಜರತ್ನಂ ಅವರ ಕೃತಿಗೆ ಚಿತ್ರಗಳನ್ನು ಬರೆದುಕೊಟ್ಟರು. ಅದರ ಪರಿಣಾಮವಾಗಿ ಅವರ ಮನಸ್ಸಿನಲ್ಲಿ ಮಕ್ಕಳ ಪದ್ಯಗಳನ್ನು ಬರೆಯುವ 'ಆಸಕ್ತಿ' ಹುಟ್ಟಿತು. ರಾಘವರಿಗೆ 'ರತ್ನ'ನ ಮೇಲೆ ಎಷ್ಟು ಅಭಿಮಾನವೆಂದರೆ 'ರತ್ನ' ನಿವೃತ್ತಿ ಪಡೆದಾಗ ಕರ್ನಾಟಕ ಸಂಘ ಅವರನ್ನು ಸನ್ಮಾನಿಸಲು ಪ್ರೇರಣೆ ನೀಡಿದ್ದರು. ಇಬ್ಬರೂ ಹಿರಿಯರ ರಚನೆಗೆ ಜೊತೆಗೆ ಕಿರಿಯರ ಸಾಹಿತ್ಯ ರಚನೆಯ ಬಗ್ಗೆಯೂ ಪ್ರೀತಿ ತೋರಿಸಿದವರೇ, ರಾಜರತ್ನಂ ಅವರು ನೂರಕ್ಕೂ ಹೆಚ್ಚು ಕೃತಿಗಳ ಕರ್ತರಾಗಿದ್ದರೆ ಎಂ.ವಿ.ಸೀ. ಅವರು ಸುಮಾರು ಅರವತ್ತೈದು ಕೃತಿಗಳ ಕರ್ತರು. ಇಬ್ಬರೂ ಬರೆದಿರುವ ಲೇಖನಗಳು ಅಸಂಖ್ಯಾತ. ಬರೆದಷ್ಟು ಕೃತಿಗಳೂ ಗಟ್ಟಿ ಕೃತಿಗಳಾಗಿವೆ. ಎಂ.ವಿ.ಸೀ. ಅವರು ಒಂದು ಕಡೆ ಹೇಳುತ್ತಾರೆ: 'ಗ್ರಂಥ ರಚನೆಯಲ್ಲಿ ಸ್ಫೂರ್ತಿ ಒಂದು ಪಾಲಾದರೆ, ಬೆವರು ಸುರಿಸುವುದು, ಕೆಲವು ವೇಳೆ ರಕ್ತ ಬಸಿಯುವುದೂ ಆಗಬಹುದು – ಇದು

ಹತ್ತು ಹಾಲು' ಇಬ್ಬರೂ ಗ್ರಂಥ ರಚನೆಯನ್ನು ಗಂಭೀರವಾಗಿ ತೆಗೆದುಕೊಂಡವರು. ಅಂದರೆ ಅವರ ಕೃತಿಗಳು ಮೌಲಿಕ ಹಾಗೂ ಸಾರ್ವಕಾಲಿಕ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿ.ಎಂ.ಶ್ರೀ ಅವರು ಸ್ಥಾಪಿಸಿದ್ದ 'ರಜತ ಮಹೋತ್ಸವ ಸ್ವರ್ಣ ಪದಕ ಕವಿತಾ ಸ್ಪರ್ಧೆ'ಯಲ್ಲಿ ಮೊದಲು ರಾಜರತ್ನಂ ಅವರು 'ತಾರೆ' ಮಕ್ಕಳ ಕಥನ ಕವನಕ್ಕೆ ಸ್ವರ್ಣ ಪದಕ ಪಡೆದಿದ್ದರು. ಮುಂದೆ ಎಂ.ವಿ.ಸೀ. ಅವರು 'ಆ ಚಿತ್ರಗಳು' ಎನ್ನುವ ಕಥನ ಕವನಕ್ಕೆ ಆ ಪದಕ ಗಳಿಸಿದರು. ತಂತಮ್ಮ ಪುಸ್ತಕ ಪ್ರಕಾಶನಕ್ಕೆ ಹಣದ ಬಿಕ್ಕಟ್ಟು ಉಂಟಾದಾಗ ಆ ಪದಕವನ್ನು ರಾಜರತ್ನಂ ಅವರು ಒತ್ತೆಯಿಟ್ಟರೆ ಎಂ.ವಿ.ಸೀ. ಅವರು ಮಾರಿಯೇಬಿಟ್ಟರು!

ಅಧ್ಯಯನ, ಅಧ್ಯಾಪನ ಹಾಗೂ ಸಾಹಿತ್ಯ ರಚನೆಗಳು ಇಬ್ಬರಿಗೂ ಪ್ರಿಯ. ರಾಜರತ್ನಂ ಹೇಳಿದ್ದಾರೆ, 'ಪುಸ್ತಕಗಳ ಓದು ಬರಹ ನನಗೆ ಉಚ್ಛ್ವಾಸ ನಿಶ್ವಾಸಗಳಿದ್ದ ಹಾಗೆ... ಅದರಿಂದಲೇ ಆರೋಗ್ಯ, ಅದರಿಂದಲೇ ಆನಂದ, ಅದರಿಂದಲೇ ಕೃತಕೃತ್ಯತೆ ನನ್ನ ಜೀವಕ್ಕೆ...' ಎಂ.ವಿ.ಸೀ ಹೇಳಿದ್ದಾರೆ. 'ಕೀರ್ತಿ, ಹಣ ಸಂಪಾದನೆ ಪ್ರಶಂಸೆ- ಇದು ಯಾವುದನ್ನೂ ಬಯಸದೆ, ಕೇವಲ ಆತ್ಮ ಸಂತೋಷಕ್ಕಾಗಿ ಕೃತಿ ರಚನೆ ಮಾಡಿದೆ... ಇಹ ಸಂಸಾರದ ತಾಪತ್ರಯವನ್ನು ನೀಗಿ ಆತ್ಮ ಸಂಸ್ಕಾರಕ್ಕೆ ಸಾಧಕವಾಗುವ ಸಂಜೀವಿನಿ ಸಾಹಿತ್ಯ... ಅರ್ಧ ಶತಮಾನ ಕಾಲ ಈ ಸಂಜೀವಿನಿಯನ್ನು ಸೇವಿಸಿರುವ ನಾನು 'ಧನ್ಯೋಸ್ಮಿ' ಎಂದು ನಮ್ರತೆಯಿಂದ ಹೇಳುತ್ತೇನೆ.' ವಿಚಾರ ಶುದ್ಧಿ, ಆಚಾರ ಶುದ್ಧಿ, ಉಚ್ಚಾರ ಶುದ್ಧಿ ಎಂಬುದು ರಾಜರತ್ನಂ ನಿತ್ಯ ಜಪಿಸುತ್ತಿದ್ದ ತಿರುಮಂತ್ರ. ಎಂ.ವಿ.ಸೀ. ಅವರ ಬದುಕಿನ ತಂತ್ರ ಕೂಡ ಇದೇ.

ಡಾ. ಶಿವರಾಮ ಕಾರಂತರು 'ಬಾಲ ಪ್ರಪಂಚ'ದ ಮುನ್ನುಡಿಯಲ್ಲಿ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ: ''ಮಕ್ಕಳಲ್ಲಿ ನಿಜವಾದ ಜ್ಞಾನದ ತೃಷೆಯು ಉಂಟಾಗದಿದ್ದರೆ, ಯಾವ ಜನಾಂಗವೂ ಮುಂದುವರೆಯುವುದು ಸಾಧ್ಯವೇ ಇಲ್ಲ... ಇದನ್ನು ಉಂಟುಮಾಡುವುದು ಶಿಕ್ಷಣದ ಕೆಲಸ. ಇಂದು ನಮ್ಮಲ್ಲಿನ ಶಿಕ್ಷಣವು – ಮಕ್ಕಳಲ್ಲಿ ಗಣಿತ, ಓದು-ಬರಹಗಳನ್ನು ಬಲವಂತದಿಂದ ತುಂಬಿಸುವ ಒಂದು ವಿಚಿತ್ರ ಕ್ರಮವಾಗಿದೆ... ಆದುದರಿಂದ ಇಂದಿನ ಶಿಕ್ಷಣ ಒಣಗಿಹೋಗಿದೆ. ಅದರಲ್ಲಿ ಆಸೆ, ಉತ್ಸಾಹ, ರುಚಿಕಟ್ಟುಗಳು ಬರಲು, ಹಳ್ಳಿಯ ಉಪಾಧ್ಯಾಯರಿಗಾಗಲಿ, ಸಾಧಾರಣ- ಎಂಟನೆಯ ತರಗತಿಯನ್ನು ಮುಗಿಸಿದ ಕನ್ನಡ ಬಾಲಕರಿಗಾಗಲಿ- ಉತ್ತಮ ಪುಸ್ತಕಗಳು ಬೇಕು. ಕನ್ನಡದಲ್ಲೇನು?''' ಎಷ್ಟು ಸಮಂಜಸವಾದ ಪ್ರಶ್ನೆ! ಇದನ್ನರಿತೇ ಜಿ.ಪಿ. ರಾಜರತ್ನಂ ಅವರು ಮಕ್ಕಳ ಸಾಹಿತ್ಯ ಕುರಿತಂತೆ, ''ಸಾಲದು ಸ್ವಾಮಿ, ಸಾಲದು, ಏನೇನೂ ಸಾಲದು'' ಎಂದು ಉದ್ಗರಿಸಿದ್ದಾರೆ. ನವದೆಹಲಿಯಲ್ಲಿ ನಡೆದ ಐವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗಾದಿಯಿಂದ ಮಾತನಾಡುವಾಗ ಕೂಡ ಅವರು, ''(ಕನ್ನಡಿಗರು ಪರ್ಯಾಲೋಚಿಸಬೇಕಾದ ವಿಷಯಗಳಲ್ಲಿ) ಅತ್ಯಂತ ಮಹತ್ವದ ವಿಷಯವೇನೆಂದರೆ ಕನ್ನಡದಲ್ಲಿ ಬಾಲ ಸಾಹಿತ್ಯವನ್ನು ನರಳಿಸುತ್ತಿರುವ ಬಾಲಗ್ರಹ'' ಎಂದು ಮಕ್ಕಳ ಸಾಹಿತ್ಯ ಕುರಿತ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಜಿ.ಪಿ. ರಾಜರತ್ನಂ, ಎಂ.ವಿ.ಸೀತಾರಾಮಯ್ಯ ಇಬ್ಬರೂ ಕೂಡ ಅವರ ಗುರುಸ್ಥಾನದಲ್ಲಿರುವ ಬಿ.ಎಂ.ಶ್ರೀ. ಅವರು ಕಲಬುರ್ಗಿ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷ, ಭಾಷಣದಲ್ಲಿ ಹೇಳಿದಂತೆ, ''ನಮ್ಮ ಹೊಸ ಲೇಖಕರು ಹಿರಿಯರ ಸೇವೆಯಲ್ಲಿ ಸಣ್ಣ ಮಕ್ಕಳನ್ನು ಮರೆಯುವುದಿಲ್ಲ'' ಎನ್ನುವ ಮಾತನ್ನು ನಿಜ ಮಾಡಿ ತೋರಿಸಿದವರು. ದೊಡ್ಡವರ ಸಾಹಿತ್ಯ ರಚನೆಯಲ್ಲಿ ಕೈ ಪಳಗಿದವರಾದರೂ ಕನ್ನಡದ ಮಕ್ಕಳನ್ನು ಮರೆಯದೆ ಅವರಿಗೆ ಸವಿ ತುತ್ತುಗಳನ್ನು ಉಣಿಸಿದವರು. ರಾಜರತ್ನಂ ಒಂದೆಡೆ ಬರೆದಿದ್ದಾರೆ. ''ದೊಡ್ಡವರಿಗೆ ಒಂದು ತುತ್ತು ಅನ್ನ ಕಡಮೆಯಾದರೂ ಪರವಾಗಿಲ್ಲ, ಆದರೆ ಮಕ್ಕಳಿಗೆ ಒಂದು ಮಿಳ್ಳೆ ಹಾಲು ಕುಡಿಸೋಣ.''

ನನಗೆ ವೈಯಕ್ತಿಕವಾಗಿ ಇವರಿಬ್ಬರ ಪರಿಚಯ ಲಾಭ ದೊರೆತದ್ದೂ ವಿಶಿಷ್ಟವಾದ ಸನ್ನಿವೇಶಗಳಲ್ಲೇ.

೧೯೮೩ರಲ್ಲಿ ಕೈವಾರ ಸಾಹಿತ್ಯ ಸಮ್ಮೇಳನದಲ್ಲಿ ಎಂ.ವಿ.ಸೀ. ಅವರು ಭೇಟಿ ಆದಾಗ ನನ್ನ ಚೊಚ್ಚಲು ಮಕ್ಕಳ ಕವನಗಳ ಸಂಕಲನ 'ನವಿಲುಗರಿ'ಯನ್ನು ನೀಡಿ ಅವರ ಅಭಿಪ್ರಾಯವನ್ನು ಬಯಸಿದ್ದೆ. ಅದಕ್ಕೆ ಶಿವರಾಮ ಕಾರಂತರ ಮುನ್ನುಡಿಯನ್ನು ಗಿಟ್ಟಿಸಿದ್ದುದು ನನಗೆ ಹೆಮ್ಮೆಯ ಸಂಗತಿಯಾಗಿದ್ದು, ಈ ಹಿರಿಯರ ಅಭಿಪ್ರಾಯದ ಸೇರ್ಪಡೆಯನ್ನೂ ಆಶಿಸಿದ್ದೆ. ೧೯೮೫ರ ಜನವರಿಯಲ್ಲಿ ನಮ್ಮ ಕಾಲೇಜಿನ ಸಮಾರಂಭ ಒಂದಕ್ಕೆ ('ಶ್ರೀ' ಅವರ ಶತಮಾನೋತ್ಸವ) ಅವರು ಅತಿಥಿಗಳಾಗಿ ಆಗಮಿಸಿದಾಗ ನೆನಪಿಸಿದ್ದೆ. 'ನವಿಲುಗರಿ' ಓದಿದ್ದನ್ನು ತಿಳಿಸುತ್ತ ಅದನ್ನು ಬಹುವಾಗಿ ಮೆಚ್ಚಿಕೊಂಡರು. ಅವರ ಮೆಚ್ಚುಗೆಯನ್ನು ನಾನು ಬರೆಹ ರೂಪದಲ್ಲಿ ಅಪೇಕ್ಷಿಸಿದಾಗ 'ಕಳಿಸಿಕೊಡುವೆ' ಎಂದರು. ಅದು ಬರಲೇ ಇಲ್ಲ. ನನ್ನ ಎರಡನೆಯ ಮಕ್ಕಳ ಪದ್ಯಗಳ ಸಂಕಲನ 'ಸಕ್ಕರೆ ಬೊಂಬೆ'ಯ ಹಸ್ತಪ್ರತಿ ಸಿದ್ಧವಾದಾಗ ಮುನ್ನುಡಿಯನ್ನು ಬಯಸಿ ಅವರ ಮನೆಗೇ ದಾಳಿ ಮಾಡಿದೆ. ಭೇಟಿ ಮಾಡಿ ನಮಸ್ಕರಿಸಿದ ಕೂಡಲೇ ಅವರು ಒಂದು ಮಾತು ಹೇಳಿದರು, "ನಾಗರಾಜ ಶೆಟ್ಟರೇ ನಾನು ನಿಮಗೆ ಬಾಕಿ ಇದ್ದೇನೆ. ಅದನ್ನು ಇನ್ನೂ ತೀರಿಸಿಲ್ಲ" ಥಟ್ಟನೆ ಆ ಮಾತಿನ ಅರ್ಥ ನನಗಾಗಲಿಲ್ಲ. ಅರ್ಥ ಆದ ಮೇಲೆ ಮೈ ನವಿರೆದ್ದಿತು. ನನ್ನಂಥ ಎಳೆಯ ಲೇಖಕನ ಪುಸ್ತಕಕ್ಕೆ ಅಭಿಪ್ರಾಯ ತಿಳಿಸುವುದಾಗಿ ಹೇಳಿಯೂ ತಿಳಿಸದೇ ಹೋದ ಬಗ್ಗೆ ಅವರ ಪಶ್ಚಾತ್ತಾಪ ಈ ಮಾತನ್ನು ಹೇಳಿಸಿತ್ತು. ಮೆಲ್ಲನೆ ನನ್ನ 'ಸಕ್ಕರೆ ಬೊಂಬೆ' ಹಸ್ತಪ್ರತಿಯನ್ನು ಕೈಯಲ್ಲಿರಿಸಿ ಇದಕ್ಕೆ ತಮ್ಮ ಮುನ್ನುಡಿಯ ಆಶೀರ್ವಾದ ಬೇಕು ಅಂದೆ. ಸಂತೋಷವಾಗಿ ಒಪ್ಪಿಕೊಂಡು, ಓದಿ ತುಂಬ ಚೆನ್ನಾಗಿ ಬರೆದುಕೊಟ್ಟರು. 'ಮಕ್ಕಳ ಪದ್ಯಗಳು ಮಕ್ಕಳನ್ನು ನಲಿಸಬೇಕು; ನಲಿಸುತ್ತಲೇ ಅವರಿಗೆ ಹಿತವಾಗಿ ಉಪದೇಶ ಮಾಡಬೇಕು. 'ಸಕ್ಕರ ಬೊಂಬೆ" ಮಕ್ಕಳಿಗೆ ಸವಿ ನೀಡಿ, ಲಲಿತವಾಗಿ ನೀತಿಬೋಧೆ ಮಾಡುತ್ತದೆ. ನಾಗರಾಜ ಶೆಟ್ಟಿಯವರು ಇಂಥ ಒಳ್ಳೆಯ ಕೃತಿ ನೀಡಿದ್ದಕ್ಕಾಗಿ ಅಭಿನಂದಿಸುತ್ತೇನೆ' ಎಂದೆಲ್ಲ ಬರೆದು ನನ್ನ ಬೆನ್ನು ತಟ್ಟಿದರು. ಅವರ ಮುನ್ನುಡಿ ಕೂಡ ನನ್ನ ಟೊಪ್ಪಿಗೆಗೆ ಮತ್ತೊಂದು ಗರಿಯೇ ಸರಿ.

ರಾಜರತ್ನಂ ಅವರನ್ನು ನಮ್ಮ ಕಾಲೇಜಿನ ಸಮಾರಂಭವೊಂದಕ್ಕೆ ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದಾಗ ಪ್ರವಾಸಿ ಮಂದಿರದಲ್ಲಿ ಅವರ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅವರ ದೇಖರೇಖಿಯ ಜವಾಬ್ದಾರಿಯನ್ನು ಪ್ರಾಂಶುಪಾಲರು ನನಗೆ ವಹಿಸಿದಾಗ ಖುಷಿಪಟ್ಟೆ. ಅವರಿಗೆ ಅಲ್ಪಸ್ವಲ್ಪ ಸೇವೆ ಮಾಡುವ ಭಾಗ್ಯ ದೊರೆಯಿತು. ಆ ಬೆಳಗ್ಗೆಯೇ ಕೊಠಡಿಗೆ ಹೋದಾಗ ಪುಸ್ತಕವೊಂದರ ಓದಿನಲ್ಲಿ ಮಗ್ನರಾಗಿದ್ದರು. ಆ ಕೃತಿ ಯಾವುದು ಇರಬಹುದು ಎನ್ನುವ ಕುತೂಹಲದಿಂದ ನಾನು ರಕ್ಷಾಪುಟದತ್ತ ಇಣುಕಿದೆ.

"ಇದು ಒಂದು ಇಂಗ್ಲಿಷಿನ ಪತ್ತೇದಾರಿ ಕೃತಿ" ಎಂದು ಬೊಚ್ಚುಬಾಯಿಯಿಂದ ನಕ್ಕರು. "ನಿಮಗೆ ಆಶ್ಚರ್ಯವಾಗುತ್ತಿದೆಯೇ? ಎಲ್ಲ ಬಗೆಯ ಪುಸ್ತಕಗಳನ್ನೂ ಓದಬೇಕು. ವೈವಿಧ್ಯಮಯ ಜ್ಞಾನವನ್ನು ಪಡೆಯಬೇಕು." ಎಂದು ಅವರು ಅಂದು ಹೇಳಿ ಮಾತು ನನ್ನ ಕಿವಿಯಲ್ಲಿ ಇಂದಿಗೂ ಅನುರಣಿಸುತ್ತಿದೆ. ಇಲ್ಲಿ ಅವರೇ ಬರೆದ ಒಂದು ಮಾತು ನೆನಪಾಗುತ್ತದೆ : "(ನಾನು 'ಪುಸ್ತಕ ಪ್ರಾಣಿ').... ಈ ಪುಸ್ತಕ ಆ ಪುಸ್ತಕ ಎಂದೇನಿಲ್ಲ– 'ಪುಸ್ತಕ' ವೆಂಬ ಹೆಸರಿಗೆ ಅರ್ಹವಾದ ಸೃಷ್ಟಿ ವಿಶೇಷವೆಲ್ಲವೂ ನನಗೆ ಪ್ರಿಯವೇ..."

ರಾಜರತ್ನ ಅವರ ಮಕ್ಕಳ ಪದ್ಯಗಳಿಗೆ ಚಿತ್ರ ರಚನೆ ಮಾಡಿದ್ದೇ ಎಂ.ವಿ.ಸೀ. ಅವರಿಗೆ ಶಿಶುಸಾಹಿತ್ಯ ರಚನೆಗೆ ಪ್ರೇರಣೆ ನೀಡಿದ್ದರೆ, ರಾಜರತ್ನಂ ರಚಿಸಲು ನಿರ್ಮಾಣವಾದ ಸನ್ನಿವೇಶ ವಿಶಿಷ್ಟ ಬಗೆಯದು. ಉಪಾಧ್ಯಾಯರಾಗಿದ್ದ ಅವರ ತಂದೆ ಗೋಪಾಲಕೃಷ್ಣ ಅಯ್ಯಂಗಾರ್ ಅವರಿಗೆ ಒಂದು ದಿನ ಜಡ್ಡಾದಾಗ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗಲಿಲ್ಲ. ಹುಡುಗರಿಗೆ ಪಾಠ ಮಾಡಲು ಮುಖ್ಯೋಪಾಧ್ಯಾಯರು ಮಗನನ್ನೇ ಆಹ್ವಾನಿಸಿದರು! ಇವರೂ ಹಾಜರಾದರು. ಮೂರನೆಯ ತರಗತಿಯ ಒಂದು ಪದ್ಯ ಹೀಗಿತ್ತು : 'ಎಂಟು ಗೇಣಿನ ದೇಹ ರೋಮಗಳೆಂಟು ಕೋಟಿಯು... ವೇದಾಂತದ ಕಂತೆ. ಇನ್ನು ಗದ್ಯವೇ,

'ದೇವರು ಎಂಬ ವ್ಯಕ್ತಿ ಇರುವುದೇ?'' ಈ ಕುರಿತು ವಿಚಾರವಾದಿಯಾದ ರಾಯರಿಗೂ ಭಕ್ತ ಶಿರೋಮಣಿ ಶಾಸ್ತ್ರಿಗಳಿಗೂ ನಡೆದ ಸಂವಾದ. ಕೂಡಲೇ ಅವರಿಗೆ ಅನ್ನಿಸಿತು, 'ಈ ಎಳೆಯ ಬುರುಡೆಗಳ ಗತಿಯೇನು? ಹಾಲುಗಲ್ಲದ ಎಳೆಯ ಮಕ್ಕಳಿಗೆ ಇಳಿವಯಸ್ಸಿನವರ ವೈರಾಗ್ಯ ಬೋಧನೆಯೇ?' – ಈ ಚಿಂತೆಯ ಫಲವಾಗಿ ಅಂದು ಸಂಜೆ ಮನದಲ್ಲಿ ಮೂಡಿದ ಕವಿತೆಯೇ 'ತುತ್ತೂರಿ...'

ಬಣ್ಣದ ತಗಡಿನ ತುತ್ತೂರಿ
　ಕಾಸಿಗೆ ಕೊಂಡನು ಕಸ್ತೂರಿ
ಸರಿಗಮ ಪದನಿಸ
ಊದಿದನು
　ಸನಿದಪ ಮಗರಿಸ
　ಊದಿದನು

ತುತ್ತೂರಿ ಚಿಕ್ಕ ಕಸ್ತೂರಿ ಜಂಬದ ಕೋಳಿಯಾಗಿ ಬೀಗುತ್ತಿದ್ದಾಗ ಅದು ನೀರಿಗೆ ಜಾರಿ ಬೀಳುತ್ತೆ. ಬಣ್ಣ ಕಳೆದು ಬೋಳಾಗಿಬಿಡುತ್ತೆ; ಊದಿದರೂ ಗಗಗಗ ಸದ್ದು ಮಾಡುತ್ತಷ್ಟೆ. ಜಂಬಗಾರನ ಸೊಕ್ಕು ಮುರಿಯುವ ಈ ಪದ್ಯ ಕನ್ನಡ ಬಾಲರ ನಾಲಗೆಯ ಮೇಲೆ ಅಂದಿನಿಂದ ಇಂದಿನವರೆವಿಗೂ ನಲಿದಾಡುತ್ತಿದೆ. ಅದರ ಲಯ, ತಾನಗಳು ಗುಂಗು ಹಿಡಿಸುತ್ತವೆ. ''ಈ ಪದ್ಯ ಒಂದೇ ಸಾಕು, ರಾಜರತ್ನಂ ಅವರ ಶಿಶು ಸಾಹಿತ್ಯ ಪ್ರೌಢಿಮೆಗೆ ಸಾಕ್ಷಿ. ಇದಕ್ಕೆ ಸಮಾನವಾದ, ಇಷ್ಟೇ ಜನಪ್ರಿಯವಾದ, ಅಂದವಾದ ಪದ್ಯ ನಮ್ಮ ಮಕ್ಕಳಿಗೆ ಇನ್ನೊಂದು ದೊರೆತಿಲ್ಲ'' ಎನ್ನುವ ಅಭಿಪ್ರಾಯವಿದೆ. ತಾಳಬದ್ಧತೆ, ನಾದ ಮಾಧುರ್ಯಗಳು ಅವರ ಕವಿತೆಗಳ ಹೆಗ್ಗಳಿಕೆ.

ಪಟ್ಟಣಗಳ ಒಂದು ಮಕ್ಕಳ ಶಾಲೆಗೆ ನಾನು ಅತಿಥಿಯಾಗಿ ಹೋಗಿದ್ದಾಗ ಕೈಯನ್ನಾಡಿಸುತ್ತ ಹಾವ-ಭಾವಗಳೊಂದಿಗೆ ರಾಜರತ್ನಂ ಅವರ ಈ ಕೆಳಗಿನ ಕವಿತೆಯನ್ನು ಓದಿದೆ:

ಕರ್‍ರಗಿರುವ ಕಾಗೆಯೊಂದು
　ಸರ್‍ರೆಂದು ಮೇಲೆ ಹಾರಿ
ಗಿರ್‍ರೆಂದು ಸುತ್ತಿ ತಿರುಗಿ
　ಕೆಳಗೆ ಜಾರಿತು
ಕರ್‍ರೆಂದು ಕೂಗಿಕೊಂಡು
ಜರ್‍ರೆಂದು ಜಾರುವಾಗ
　ಪರ್‍ರೆಂದು ಅದರ ರೆಕ್ಕೆ
　ಹರಿದುಹೋಯಿತು..!

ಮುಗಿಸಿದ್ದೇ ತಡ ನೂರಾರು ಮಕ್ಕಳೆಲ್ಲ ಜೋರಾಗಿ ನಗುತ್ತ ಚಪ್ಪಾಳೆ ತಟ್ಟುತ್ತ ಅದರ ಸಾಲುಗಳನ್ನು ಉದ್ಗರಿಸತೊಡಗಿದರು. ಆ ದಿಢೀರ್ ಸ್ಪಂದನ ನನ್ನಲ್ಲಿ ಅತೀವ ಹರ್ಷವನ್ನುಂಟು ಮಾಡಿತು. ಆ ಮಕ್ಕಳು ನನ್ನನ್ನು ಕಂಡಾಗಲೆಲ್ಲ ಇಂದಿಗೂ ಅಭಿಮಾನದ ಕಣ್ಣುಗಳಿಂದ ದಿಟ್ಟಿಸುತ್ತಾರೆ. ಅದರ ರಚನೆಯ ಜಾಣತನಕ್ಕೆ ಬೆರಗಾಗಿದ್ದೇನೆ!

ಮಕ್ಕಳ ಮನಸ್ಸನ್ನು 'ರತ್ನ'ರು ಚೆನ್ನಾಗಿ ಬಲ್ಲರು. ಅವರಿಗೆ ಯಾವುದು ಅಗತ್ಯ, ಯಾವುದು ಖುಷಿ ನೀಡಬಲ್ಲದು, ಸುಲಭವಾಗಿ ಅರ್ಥವಾಗಬಲ್ಲದು ಎಂದು ಅರಿತುಕೊಂಡಿದ್ದರು. ಈ 'ಶಿಶು ವಶೀಕರಣ

ಶಕ್ತಿ' ಇದ್ದ ಐಂದ್ರಜಾಲಿಕ ಅವರಾಗಿದ್ದರು. ಅಂತೆಯೇ ಅವರ ಯಾವುದೋ ಒಂದು ಪದ್ಯ ಗುಣುಗುಣಿಸದ ಮಕ್ಕಳ ಬಾಯಿಯೇ ಇಲ್ಲ ಅನ್ನಿಸುತ್ತದೆ. 'ಚುಟುಕ' ಪ್ರಕಾರವನ್ನು ಮೊದಲು ಕನ್ನಡಕ್ಕೆ ಕೊಟ್ಟ ಅವರ ಈ ರಚನೆ ಜನಜನಿತ:

ಝಣ! ಝಣ! ಝಣ!
ಜೇಬು ತುಂಬ ಹಣ!
ಮೇಲಕ್ಕೆತ್ತಿ ಬಿಡಲು ಸದ್ದು
ಠಣ್! ಠಣ! ಠಣ!

ನಾಣ್ಯವೊಂದನ್ನು ಚಿಮ್ಮಿಸಿದಾಗಿನ ಪರಿಣಾಮವನ್ನು ಇಷ್ಟು ಪ್ರಭಾವಶಾಲಿಯಾಗಿ ಮಕ್ಕಳ ಮನ ಮುಟ್ಟುವ ಹಾಗೆ ಬೇರೆ ಯಾರಿಗೆ ತಾನೆ ಹೇಳಲು ಸಾಧ್ಯ?

ಕುಂಟನೊಬ್ಬ ಕಾಲಿಗೆ ಅಂಟಿಸಿಕೊಂಡಿದ್ದ ಮರದ ಕಾಲಿನೊಂದಿಗೆ ನೀರು ಕುಡಿಯಲು ಬಾವಿಗಿಳಿದಾಗ ಅದರ ಮೇಲೆ ನೀರು ಬಿದ್ದು ಅದು ಚಿಗುರಿ ಹೂವು, ಹಣ್ಣು ಬಿಟ್ಟಿತು! ಭಿಕ್ಷುಕನಾದ ಅವನು ಬೇಡುವುದನ್ನೇ ಬಿಟ್ಟು 'ಹೂವ ಮುಡಿದು ಹಣ್ಣು ಕಡಿದು ತೃಪ್ತಿ ಪಟ್ಟನು' ಈ 'ಕುಂಟ' ಕವಿತೆ ಅವರ ಕಲ್ಪನಾಶಕ್ತಿಗೆ ಒಂದು ಉತ್ತಮ ಉದಾಹರಣೆಯಾಗಿದೆ.

ಮಕ್ಕಳ ಸಾಹಿತ್ಯ 'ನೀತಿ'ಯನ್ನು ನೇರವಾಗಿ ಹೇಳಬಾರದು ಎನ್ನುವ ಮಾತಿದೆ. 'ತೆಂಗು' ಕವಿತೆಯಲ್ಲಿ 'ರತ್ನ'ರು ನೀತಿಯನ್ನು ಅರಿವಿಗೇ ಬಾರದಂತೆ ಹೊಳೆಯಿಸಿಬಿಡುತ್ತಾರೆ:

'ಕೆಳಗೆ ಉಪ್ಪು ನೀರು ಕುಡಿವೆ; ಮೇಲೆ ಎಳನೀರು ಕೊಡುವೆ... ಹೊರಗೆ ಕರಟ, ಒಳಗೆ ಜಲ' ಎಂದೆಲ್ಲ ಬರೆಯುತ್ತ ಕೊನೆಯಲ್ಲಿ–

'ನನ್ನ ನೋಡಿ ನೀನು ಕಲಿ
ನನ್ನ ಹಾಗೇ ನೀನೂ ಬೆಳಿ'

– ಎಂದು ತೆಂಗು ಮಗುವಿಗೆ ಹೇಳುವುದು ರುಚಿಕಟ್ಟಾಗಿದೆ.

ಬೋಳುವಾರರು ಹೇಳುವಂತೆ 'ಮಕ್ಕಳ ಕಾವ್ಯ ಲೋಕದ ರಾಜ ಮತ್ತು ರತ್ನ ಎರಡೂ ಆಗಿದ್ದರು – ರಾಜರತ್ನಂ ಅವರು.'

ಮೈ.ವೆಂ.ಸೀ. ರಾಘವ ಅವರು (ಎಂ.ವಿ.ಸೀತಾರಾಮಯ್ಯ) 'ಹೂವಾಡಗಿತ್ತಿ'ಯೊಂದಿಗೆ ಮಕ್ಕಳ ಕಾವ್ಯಲೋಕಕ್ಕೆ ಪದಾರ್ಪಣ ಮಾಡಿದರು.

ಹಾವನು ಮಾರುತ
ಹೂವಾಡಗಿತ್ತಿ
ಹಾಡುತ ಬರುತಿಹಳು;
ಘಮ ಘಮ ಹೂಗಳು
ಬೇಕೆ ಎನುತ
ಹಾಡುತ ಬರುತಿಹಳು.
ಬಿಳುಪಿನ ಮಲ್ಲಿಗೆ
ಹಳದಿಯ ಸಂಪಿಗೆ
ಹಸುರಿನ ಹೊಸ ಮರುಗ
ಹಾಕಿ ಕಟ್ಟಿರುವೆ

ಬೇಕೆ ಎನುತ
ಹಾಡುತ ಬರುತಿಹಳು.

ಕನ್ನಡದ ಮಕ್ಕಳಲ್ಲಿ ಈ ಕವಿತೆಯೂ 'ಹಿಟ್' ಆಯಿತು. ಅವರ ಮನಸ್ಸಿಗೆ ಬಗೆಬಗೆಯ ಹೂಗಳ ಪರಿಚಯ ಅವುಗಳ ವಿಶಿಷ್ಟ ಲಕ್ಷಣಗಳ ಜೊತೆಜೊತೆಯಲ್ಲಿಯೇ ಆಯಿತು.

ಎಂ.ವಿ.ಸೀ. ಅವರು ಕೂಡ ಮಕ್ಕಳ ಮನೋವಿಜ್ಞಾನಿ ಎನ್ನಲು ಬಹಳ ಚೆಲುವಾಗ ಅವರ 'ನಂ. ಚಿಕ್ಕ' ಎನ್ನುವ ಕವಿತೆಯನ್ನು ನೋಡಬೇಕು:

ಎಲ್ಲರಿಗಣ್ಣ ನಂ ಚಿಕ್ಕ:
ಲೆಕ್ಕ ಅಂದರೆ ಬಲು ದುಃಖ!

ಕೂಡುವುದೆಲ್ಲ ಕವಡೆ ಕಲ್ಲು
ಕಳೆಯುವುದೆಲ್ಲ ಪುಸ್ತಕ ಬಳಪ
ಗುಣಿಸುವುದೆಲ್ಲ ಗೋಡೆಯ ಚಿತ್ರ
ಭಾಗ್ಸೋದೆಲ್ಲಾ ಬಾಯಿನ ಒಳಗೆ
ಜೇಬಿನ ತುಂಬ ರೂ.ಅ.ಪೈ.
ಎಲ್ಲಿತ್ತನೆ ಬಾಯ್ ಬಿಟ್ಟರೆ ಸೈ
ಬೀದಿಯ ಕುಣಿತ
ಚಿಕ್ಕನ ಗಣಿತ!
ಮನೆಯಲಿ ಜೋರು ಕೈಯಿ ಬಾಯಿ;
ಪರೀಕ್ಷೆಯಲ್ಲಿ ಕುಂಬಳಕಾಯಿ!

ಎಲ್ಲರಿಗಣ್ಣ ನಂ ಚಿಕ್ಕ
ಲೆಕ್ಕ ಎಂದರೆ ಬಲು ದುಃಖ!

ಜೀವನ ಲೆಕ್ಕಾಚಾರಕ್ಕೆ ಒಗ್ಗಿಯಿರದ ನಾವೆಲ್ಲರೂ ಬೆಪ್ಪಾಗಲೇಬೇಕಲ್ಲವೆ? ರಾಘವರೂ ಕೂಡ ರತ್ನನ ಹಾಗೆ ಮಕ್ಕಳ ನಾಡಿ ಮಿಡಿತವನ್ನು ಬಲ್ಲ ಮನೋವೈದ್ಯರೇ ಸೈ.

ರಾಘವರ ವೈಶಿಷ್ಟ್ಯವೆಂದರೆ ಕೆಲವು ಚಿತ್ರ ಕವನಗಳು. 'ಇಲಿಯ ಬಾಲ' ಎನ್ನುವ ಕವನದ ಮುದ್ರಣದಲ್ಲಿ ಇಲಿ ಹಾಗೂ ಅದರ ಬಾಲದ ಆಕಾರದಲ್ಲೇ ಅಕ್ಷರ ಜೋಡಣೆ ಇದೆ. 'ಹಾವು' ಕವನದ ಅಕ್ಷರಗಳೂ ಸಾಲುಗಳೂ ಸುರುಳಿ ಸುತ್ತಿಕೊಂಡ ಹಾವು ಹೆಡೆ ಎತ್ತಿದ ಆಕಾರದಲ್ಲಿಯೇ ಅಚ್ಚಾಗಿದೆ. ಗಂಟೆಯಂತೂ ಗಂಟೆಯ ಆಕಾರದಲ್ಲೇ ಒಡಮೂಡಿದೆ. ರಾಜನ ಕಿರೀಟದ ಆಕಾರದ ಪದ್ಯವೂ ಒಂದಿದೆ. ಹೀಗೆಯೇ 'ಹಾವಾಡಿಗ' ಸಂಕಲನದಲ್ಲಿ 'ಬೃಂದಾವನ ಗಾನ' ಕವಿತೆ ಬೃಂದಾವನದ ಆಕಾರದಲ್ಲೇ ರಚನೆ ಹೊಂದಿದೆ. ಎಂ.ವಿ.ಸೀ. ಅವರು ಮಕ್ಕಳಿಗಾಗಿ ಇಂಥ ಕೆಲವು ಕವನ ಪ್ರಯೋಗಗಳನ್ನು ಮಾಡಿರುವುದು ಅವರ ಮುಗ್ಧ ಮನಸ್ಸಿಗೆ ದ್ಯೋತಕ ಎಂದು ನನ್ನ ಭಾವನೆ.

'ದಾದಿ ರನ್ನೆ' ಒಂದು ಮಕ್ಕಳ ಕಥೆ. ಹದಿನಾಲ್ಕು ಪುಟಗಳ ಈ ಕಥನ ಕವನದಲ್ಲಿ ರಾಜಕುಮಾರನಾದ ಉದಯ ಸಿಂಹನನ್ನು ದುಷ್ಟ ಬನವೀರನಿಂದ ಕಾಪಾಡುವುದಕ್ಕಾಗಿ ತನ್ನ ಸ್ವಂತ ಮಗನನ್ನೇ ಬಲಿಯಾಗಿ ಅರ್ಪಿಸುವ ವೀರ ಮಹಿಳೆ ರನ್ನೆಯ ಮಾರ್ಮಿಕ ಕಥೆ ನಿರೂಪಿತವಾಗಿದೆ; ತುಂಬ ಹೃದ್ಯವಾಗಿದೆ.

'ಹಾವಾಡಿಗ' ಸಂಕಲನದ 'ಜೋಗದ ಜಲಪಾತ' ಕವನ ಅದರಷ್ಟೇ ಭರದಿಂದ ಅದರ ಎಲ್ಲ

ವಿವರಗಳನ್ನೂ ಪದರಪದರವಾಗಿ ಬಿಚ್ಚಿಡುತ್ತದೆ. 'ಕುಣಿಯುತ ಮಣಿಯುತ ತಣಿಯುತ ದಣಿಯುತ! ನುಗ್ಗುತ ಬಗ್ಗುತ ಹಿಗ್ಗುತ ತಗ್ಗುತ। ತೆರಳುತ ಮರಳುತ ಹೊರಳುತುತ್ತುರುಳುತ। ಸರಸರ ಹರಿಯುತ ಭರಭರ ಹರಿಯುತ। ಬಾಗುತ ಬಳುಕುತ ತೂಗುತ ತುಳುಕುತ...'

ಆಹಾ! ಆಹಾ! ಆ ಜಲ ಕನ್ನಿಕೆ
  ಕ್ಷಣದಲಾಗುವಳು ಕ್ಷೀರಕನ್ನಿಕೆ!
ಬೆಟ್ಟದ ಅಪ್ಸರೆ ಉಟ್ಟು ಬಿಳಿಸೀರೆ
ನರ್ತಿಸುವಂತಿದೆ ನೀರಿನ ಧಾರೆ.
....
ಕಾಮನ ಬಿಲ್ಲಿನ ಮರಿಗಳು ಬಂದು
ಕುಣಿವುವು ನೊರೆ ಮೋಡದ ಮೇಲ್ನಿಂದು,
ಇಂದ್ರನ ನಂದನವೀ ಚೆಲು ಜೋಗ,
ನಮಗಿಲ್ಲಿದೆ ನಿತ್ಯಾನಂದ ಭೋಗ.

ತನ್ನ ಓಟದಲ್ಲಿ ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರಿ ಜೋಗಿ' ಕವನವನ್ನು ನೆನಪಿಸುವ ಈ ಕವಿತೆ ಆಕರ್ಷಕವಾಗಿದೆ. ಹೀಗೆ ಮಕ್ಕಳಿಗೆ ಸಕ್ಕರೆಯ ಭಾವಗಳನ್ನು ಭಾಷೆಯಲ್ಲಿ ಯಶಸ್ವಿಯಾಗಿ ಅಭಿವ್ಯಕ್ತಿಸುವಲ್ಲಿ ರತ್ನ ರಾಘವರಿಬ್ಬರೂ ದಿಗ್ಗಜರೇ ಆಗಿದ್ದಾರೆ.

ಇನ್ನು ಗದ್ಯದ ವಿಷಯಕ್ಕೆ ಬಂದರೆ, ಮಕ್ಕಳಿಗಾಗಿ ರಾಜರತ್ನಂ ಅವರು ಅಸಂಖ್ಯಾತ ಕಥೆಗಳನ್ನು ಬರೆದಿದ್ದಾರೆ. ೧೯೬೫ ರಿಂದ ೧೯೭೯ ರವರೆವಿಗೆ ಅವಿಶ್ರಾಂತವಾಗಿ ಅವರು ಎಂಟು ನೂರಕ್ಕೂ ಮೀರಿ ಕತೆಗಳನ್ನು ಹೆಣೆದಿದ್ದಾರೆ. ಅವೆಲ್ಲವೂ 'ಸುಧಾ' ವಾರ ಪತ್ರಿಕೆ ಹಾಗೂ 'ಮಯೂರ' ಮಾಸಪತ್ರಿಕೆಗಳಲ್ಲಿ ಸತತವಾಗಿ ಪ್ರಕಟವಾಗಿವೆ. ದೇಶ-ವಿದೇಶಗಳ, ಎಲ್ಲ ಭಾಷೆಗಳಲ್ಲಿನ ಸ್ವಾರಸ್ಯಕರವಾದ, ಅರ್ಥಪೂರ್ಣವಾದ ಕಥೆಗಳನ್ನು ಅವರು ಕನ್ನಡದ ಗಂಧ ಸವರಿ ನಾಡಿನೆಲ್ಲೆಡೆ ಹರಡಿದ್ದಾರೆ. ಅವರು ಕಥೆಗಳನ್ನು ಆಕರ್ಷಕವಾಗಿ ಹೇಳಬಲ್ಲರು.

ಬಾಯಿ ಮಾತಿನಲ್ಲಿ ಹೇಳುವ 'ಬಾ ಕರೂ ಬಾ.', 'ಗೋಳೂರಿನ ನಾಯಕರು' ಹೊಸ ಮಾದರಿಯ ಕತೆಗಳಾಗಿವೆ. 'ಬಾ ಕರೂ ಬಾ' ಹೀಗೆ ಪ್ರಾರಂಭವಾಗುತ್ತದೆ:

ಒಂದು ಊರಿನಲ್ಲಿ ಒಬ್ಬ ಹುಡುಗಿ. ಅವಳ ಹೆಸರು ಕೆಂಪಿ. ಅವಳು ತುಂಟಿ.
ಅವಳ ಮನೆಯಲ್ಲಿ ಒಂದು ಕರು. ಅದು ಅವಳಿಗಿಂತ ತುಂಟು.
ಕೆಂಪಿ ಮನೆಯವರು ಮಾತು ಕೇಳುತಾ ಇರಲಿಲ್ಲ,
ಕರು ಕೆಂಪಿಯ ಮಾತು ಕೇಳುತಾ ಇರಲಿಲ್ಲ.

ಎರಡನೆಯ ಕತೆಯೂ ಹೀಗೆಯೇ ಮಕ್ಕಳ ಭಾವ, ಭಾಷೆಗಳಿಗೆ ಬಹಳ ಹತ್ತಿರವಾಗಿದೆ.

'ರತ್ನ'ನ ಕಥಾರಾಶಿಯನ್ನು ಕಂಡ ಜಿ.ಪಿ. ಪಾಂಡುರಂಗರಾಯರು, 'ರಾಜರತ್ನಂ ಮಕ್ಕಳ ಸಾಹಿತ್ಯ ಗೊಮ್ಮಟ; ಮಕ್ಕಳ ಕಥಾ ಬೊಕ್ಕಸ; ಅವರ ಕಥಾ ಸಾಹಿತ್ಯ ಮಹಾ ಸಾಗರದಂತಿದೆ' ಎಂದು ಉದ್ಗರಿಸಿದ್ದಾರೆ!

'ಮಕ್ಕಳಿಗೆ ಮಣಿದೀಪ' ಹಾಗೂ 'ಹತ್ತು ದಿಕ್ಕಿನ ಬೆಳಕು' ಇಂಥ ಕೆಲವು ಕೃತಿಗಳಲ್ಲಿ ಮಹಾ ಪುರುಷರ ಜೀವನದ ಪ್ರಸಂಗಗಳನ್ನು ನಿರೀಕ್ಷಿಸಿದ್ದಾರೆ. 'ಮಕ್ಕಳ ಮನಸ್ಸುಗಳಿಗೆ ಇವು ದೀಪಿಗೆಯಾಗಲಿ, ಅವರು ದೊಡ್ಡವರ ದಾರಿಯಲ್ಲಿ ನಡೆಯುವಂತಾಗಲಿ' ಎನ್ನುವುದು ಅವರ ಆಶಯ.

ರಾಘವ ಅವರು ಮಕ್ಕಳಿಗೆ ಕಥೆಗಳನ್ನು ಬರೆದಿಲ್ಲ. ಆದರೆ 'ರಾಬಿನ್‌ಸನ್ ಕ್ರೂಸೋ' ಕಥೆಯನ್ನು ಕಾದಂಬರಿಯ ರೂಪದಲ್ಲಿ ಬರೆದಿದ್ದಾರೆ. ಮಕ್ಕಳಿಗಾಗಿ 'ಭಾರತ-ಭಾರತಿ ಪುಸ್ತಕ ಸಂಪದ' ಅಡಿಯಲ್ಲಿ 'ಯುಧಿಷ್ಠಿರ' ಹಾಗೂ 'ಕವಿ ರನ್ನ' ಪುಸ್ತಕಗಳನ್ನು ಸಹಜವಾಗಿ, ಸರಳವಾಗಿ ನಿರೂಪಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ರಚಿಸಿರುವ 'ಕನ್ನಡದ ಕತೆ' ಪುಸ್ತಕದಲ್ಲಿ ಮಕ್ಕಳಿಗೆ ನಾಡು-ನುಡಿಗಳ ಪರಿಚಯವನ್ನು ವಿವರವಾಗಿ ಮಾಡಿಕೊಟ್ಟಿರುವುದಲ್ಲದೆ ಅವರಲ್ಲಿ ಅಭಿಮಾನ ಮೂಡುವಂತೆ ವಿಷಯಗಳನ್ನು ಬಿಂಬಿಸಿದ್ದಾರೆ. ಅದೇ ರೀತಿ ಅವರೇ ಪ್ರಕಟಿಸಿರುವ 'ಈ ಕರುನಾಡಿದು ನನ್ನ ಮನೆ'ಯಲ್ಲಿ ಕನ್ನಡ ನಾಡಿನ ಹಾಗೂ ನುಡಿಯ ಸ್ಥಿತಿಗತಿಗಳನ್ನು ಮಾರ್ಮಿಕವಾಗಿ ಮುಂದಿರಿಸಿದ್ದಾರೆ. ಈ ಪುಸ್ತಕದ ಮಾರಾಟದಿಂದ ದೊರೆಯುವ ಉತ್ಪತ್ತಿಯನ್ನು ಕನ್ನಡ ಚಳವಳಿಯ ಬೆಳೆಗವ ನಿಧಿಗೆ ಅರ್ಪಿಸಿದ್ದು ಅವರ ಕನ್ನಡಾಭಿಮಾನಕ್ಕೆ ಪ್ರಾಯೋಗಿಕ ಸಾಕ್ಷಿಯಾಗಿದೆ.

ಐ.ಬಿ.ಹೆಚ್. ಪ್ರಕಾಶನದ 'ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ' ಮಾಲೆಗಾಗಿ ಎಂ.ವಿ.ಸೀ. ಅವರು ರಚಿಸಿರುವ 'ವೈಣಿಕ ವಿದ್ವಾನ್ ಎಲ್. ರಾಜಾರಾವ್' ಕನ್ನಡದ ಮಕ್ಕಳ ಮುಂದೆ ಒಬ್ಬ ಪ್ರತಿಭಾವಂತ ಕಲಾವಿದ ಬದುಕನ್ನು ಸಮಗ್ರವಾಗಿ ತೆರೆದಿಡುತ್ತದೆ. ಒಂದು ಜೀವನ ಚರಿತ್ರೆಯನ್ನು ರಚಿಸುವಾಗ ಎಷ್ಟೆಲ್ಲ ಅಂಶಗಳನ್ನು ಕಲೆಹಾಕಬೇಕೋ ಅಷ್ಟನ್ನೂ ಅವರು ಗಮನಿಸಿದ್ದಾರೆ; ಚಿತ್ರಿಸಿದ್ದಾರೆ. ರಾಜರತ್ನಂ ಅವರಂತೂ ಮಕ್ಕಳ ಗಾಂಧಿ ಕಥಾ ನಿರ್ಮಾಪಕರಲ್ಲಿ ಮುಂಚೂಣಿಯಲ್ಲಿದ್ದಾರೆ. 'ಗಿಣಿ ಮರಿಗಳ ಗಾಂಧಿ', 'ಗಾಂಧಿ ವಿದ್ಯೆ', 'ಮಕ್ಕಳ ಗಾಂಧಿ', 'ವಂದೇ ಗಾಂಧೀಜಿ', 'ಗಾಂಧೀ ಚರಿತ್ರೆ'ಗಳನ್ನು ಬರೆದು ಮಕ್ಕಳ ಕೈಗಿತ್ತಿದ್ದಾರೆ.

ನಾಟಕಗಳ ವಿಷಯದಲ್ಲಿ ರಾಜರತ್ನಂ ಮಕ್ಕಳಿಗೆ 'ಬೆಳೆಯುವ ಪಯಿರು' ಹಾಗೂ 'ಧ್ವಜ ವಂದನೆ' ಎರಡನ್ನು ಮಾತ್ರ ರಚಿಸಿದ್ದಾರೆ. 'ರಾಘವ' ಅವರು 'ಕೈಕೋಲು', 'ಕುಮಾರ ಗೌತಮ' ಹಾಗೂ 'ಕರುಣೆಯ ಕುಡಿ' ನಾಟಕಗಳನ್ನು ರೂಪಿಸಿದ್ದಾರೆ. 'ಕೈಕೋಲು' ನಾಟಕ ಕುರಿತು ಈಶ್ವರಚಂದ್ರ ಅವರು ಹೀಗೆ ಹೇಳಿದ್ದಾರೆ:

> 'ಕಾಮನ ಹಬ್ಬಕ್ಕೆ ಭಿಕ್ಷುಕಿಯೊಬ್ಬಳ ಕೈಕೋಲನ್ನೇ ಕಿತ್ತುಕೊಂಡು ಬರುವ ಹುಡುಗರ ತಂಡ ಒಂದು ಕಡೆ, ಅದೇ ತಂಡದವನಾಗಿದ್ದು ಮುದುಕಿಯ ಮೇಲಿನ ಅನುಕಂಪದಿಂದ ತನ್ನ ಅಜ್ಜನ ಕೈ ಕೋಲನ್ನೇ ತಂದುಕೊಡುವ ಸೋಮು ಇನ್ನೊಂದು ಕಡೆ. ಹೀಗೆ ರಾಘವರು ಮಕ್ಕಳ ಎದುರಿಗೆ ಗುಣಗಳನ್ನು ಕಡೆದು ನಿಲ್ಲಿಸುತ್ತಾರೆ. ಮುಪ್ಪಿನಲ್ಲಿ ಮಕ್ಕಳು ತಂದೆ ತಾಯಿಯರಿಗೆ ಕೈಕೋಲು ಆಗಬೇಕು ಎಂಬ ನೀತಿಯ ಮಾತನ್ನು ಕೊನೆಯಲ್ಲಿ ಇಟ್ಟಿದ್ದಾರೆ.'

'ಕುಮಾರ ಗೌತಮ' ಹಾಗೂ 'ಕರುಣೆಯ ಕುಡಿ' ಎರಡೂ ನಾಟಕಗಳಲ್ಲಿ ಭಗವಾನ್ ಬುದ್ಧ ಎಳೆಯ ಗೌತಮನಾಗಿದ್ದಾಗ ಎಂಥ ಕರುಣಾಮಯಿಯಾಗಿದ್ದ ಎನ್ನುವುದನ್ನು ಸಾರುವ ಸಂದರ್ಭಗಳ ನಿರೂಪಣೆ ಮಾಡಲಾಗಿದೆ. ಮೊದಲನೆಯದು ಗದ್ಯದಲ್ಲಿದ್ದರೆ, ಎರಡನೆಯದು ಸರಳ ರಗಳೆಯಲ್ಲಿ ಸೃಜಿಸಲಾಗಿದೆ.

ಒಟ್ಟಾರೆ ಜಿ.ಪಿ. ರಾಜರತ್ನಂ ಹಾಗೂ ಎಂ.ವಿ.ಸೀ. ಅವರಿಬ್ಬರ ಮನೋಧರ್ಮವೂ ಒಂದೇ ಆಗಿದೆ. ಅದೆಂದರೆ ಮಕ್ಕಳಲ್ಲಿ ಆದರ್ಶ, ಮೌಲ್ಯಗಳನ್ನು ಬಿತ್ತಿ ಅವರು ನಾಳಿನ ಭವ್ಯ ಭಾರತದ ಸತ್ಪ್ರಜೆಗಳಾಗಬೇಕು ಎನ್ನುವುದೇ ಆಗಿದೆ. ಇವರಿಬ್ಬರೂ ಮುಖ್ಯವಾಗಿ 'ಮಾರ್ಗದರ್ಶಕ'ರಾಗಿ ಕಂಡುಬರುತ್ತಾರೆ. ಇಬ್ಬರಲ್ಲೂ 'ಮಾನವೀಯತೆ'ಯ ಗುಣ ಮಿಡಿಯುತ್ತದೆ.

ನಿರ್ಮಲ ಪ್ರಕಾಶನ
೯೫೭, ೫ನೇ ಅಡ್ಡರಸ್ತೆ, ಗೋವಿನಪುರ ಬಡಾವಣೆ
ತಿಪಟೂರು – ೫೭೨ ೨೦೨
(ಸಂ.ದೂ.ವಾ: ೯೪೪೮೯ ೭೯೫೬೭)

ಗೋಪಾಲಕೃಷ್ಣ ಅಡಿಗರ ಕವನ:
ಕುರ್ಚಿಗಂಟಿದ ಕರ್ಚಿ

ಎಸ್.ಆರ್. ವಿಜಯಶಂಕರ



ಸ್ವಾತಂತ್ರ್ಯ ಹಾಗೂ ಸಮಾನತೆಯ ಹಂಬಲದಲ್ಲಿ ಭಾರತೀಯ ಸ್ವಾತಂತ್ರ್ಯ ಹೋರಾಟದ ಪ್ರಭಾವಗಳಿಗೆ ಒಳಗಾಗುತ್ತಾ ಕನ್ನಡ ಸಾಹಿತ್ಯ ಕಳೆದ ಶತಮಾನದ ಆದಿಯಿಂದಲೂ ಬೆಳೆದುಬಂದಿದೆ. ಈ ಚಿಂತನೆಯ ಬಹಿರಂಗ ಮುಖವಾದ 'ರಾಜಕೀಯ'ದ ಎಳೆ ಗೋಪಾಲಕೃಷ್ಣ ಅಡಿಗರ ಕಾವ್ಯದಲ್ಲಿ ಒಂದು ಪ್ರಮುಖ ವಾಹಿನಿ.

ವರಕವಿ ದ.ರಾ.ಬೇಂದ್ರೆಯವರು 'ನರಬಲಿ' ಕವನ ಬರೆದುದಕ್ಕಾಗಿ ಬ್ರಿಟಿಷರ ಕಾಲದಲ್ಲಿ ದೇಶದ್ರೋಹದ ಆಪಾದನೆ ಎದುರಿಸಿ ಜೈಲಿಗೆ ಹೋದರು. ಅದರಿಂದಾಗಿ ಸ್ವಾತಂತ್ರ್ಯ ಸಿಗುವವರೆಗೂ ಅವರು ಸರಿಯಾದ ನೌಕರಿ ಸಿಗದೆ, ಬವಣೆಗೊಳಗಾದರು. ಹಸಿವು ಹಾಗೂ ಸಾಮಾಜಿಕ ತಾರತಮ್ಯದ ಬಗ್ಗೆ ಅವರಿಗೆ ಆತಂಕವಿದ್ದರೂ ಅಂಬಿಕಾತನಯದತ್ತರ ಸೃಜನಶೀಲ ವ್ಯಕ್ತಿತ್ವದಲ್ಲಿ ರಾಜಕೀಯ ತಾತ್ವಿಕ ಚಿಂತನೆ ಪ್ರಧಾನ ಎಳೆಯಾಗಲಿಲ್ಲ. ರಾಜಕೀಯ ತತ್ವ, ಸಮಾನತೆಯ ಸಿದ್ಧಾಂತ ಹಾಗೂ ಸಾಮಾಜಿಕ ಸ್ಥಿತ್ಯಂತರಗಳ ವಿರೋಧಾಭಾಸಗಳು ಕುವೆಂಪು ಅವರ ಚಿಂತನೆ ಮೇಲೆ ಪ್ರಭಾವ ಬೀರಿತು. ಶಿವರಾಮಕಾರಂತರಿಗೆ ಜೀವನ ಮೌಲ್ಯ ಹಾಗೂ ಅನುಭವ ಶೋಧನೆಗೆ ರಾಜಕೀಯವೂ ಒಂದು ಪ್ರಮುಖ ಅಂಶವಾಯಿತು. ಇಷ್ಟಿದ್ದೂ ಈ ಮೂವರೂ ಸದ್ಯದ ರಾಜಕೀಯವನ್ನು ಅಡಿಗರಂತೆ ಪ್ರಧಾನ ಕಾಳಜಿಯಾಗಿ ಆವಾಹಿಸಿಕೊಂಡವರಲ್ಲ.

ಆ ಬಳಿಕ ಅನೇಕ ಪ್ರಗತಿಶೀಲ ಬರಹಗಾರರು ತಮ್ಮ ಸೃಜನಶೀಲ ಪ್ರಕ್ರಿಯೆಯಲ್ಲೇ ಎಡಪಂಥದ ತಾತ್ವಿಕತೆ ಹಾಗೂ ರಾಜಕೀಯ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದಾರೆ. ಸಮಾಜವಾದ ಹಾಗೂ ಲೋಹಿಯಾ ಚಿಂತನೆಗಳಿಂದ ಪ್ರಭಾವಿತರಾಗಿದ್ದ ನವ್ಯದ ಪ್ರಮುಖರಲ್ಲಿ ಅನಂತಮೂರ್ತಿ, ತೇಜಸ್ವಿ, ಲಂಕೇಶ್ ಇದ್ದಾರೆ. ಆ ಬಳಿಕದ ಬಂಡಾಯ ಹಾಗೂ ದಲಿತ ಸಾಹಿತ್ಯ ಚಳವಳಿಗಳ ಹಿಂದಿರುವ ಪ್ರಬಲ ತಾತ್ವಿಕ ಬದ್ಧತೆ ಹಾಗೂ ರಾಜಕೀಯ ವಿಚಾರಧಾರೆಗಳಲ್ಲಿ ಎಡ ಹಾಗೂ ದಲಿತ ವಿಚಾರಧಾರೆ ಮುಖ್ಯವಾದುದು.

ಈ ವೈಚಾರಿಕ ಹಿನ್ನೆಲೆ ಮಾತ್ರವಲ್ಲದೆ, ಕನ್ನಡದ ಅನೇಕ ಮುಖ್ಯ ಬರಹಗಾರರು ಸಕ್ರಿಯ ರಾಜಕೀಯದಲ್ಲಿ ತೊಡಗಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ. ಅವರಲ್ಲಿ ಶಿವರಾಮಕಾರಂತ, ಗೋಪಾಲಕೃಷ್ಣ ಅಡಿಗ, ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್, ಚಂದ್ರಶೇಖರ ಪಾಟೀಲ ಮುಂತಾದವರಿದ್ದಾರೆ. ಇವರಲ್ಲಿ ವಾಸ್ತವ ರಾಜಕೀಯವನ್ನು ಹಾಗೂ ಹಾಲಿ ರಾಜಕೀಯ ನೆಲೆಗಳನ್ನು ಸೃಜನಶೀಲವಾಗಿ ತನ್ನ ಪ್ರಜ್ಞೆಯ ಭಾಗವಾಗಿಯೇ ಪರಿಶೋಧಿಸಿದವರಲ್ಲಿ ಅಡಿಗರು ಎದ್ದು ಕಾಣುತ್ತಾರೆ. ಬೀಸು ಹೇಳಿಕೆ ಮಾಡಬಹುದಾದರೆ, ಅಡಿಗ ಹಾಗೂ ತೇಜಸ್ವಿಯವರ ಲೋಕಗ್ರಹಿಕೆ ಹಾಗೂ ಸೃಜನಚಿಂತನೆಯೇ ರಾಜಕೀಯ ಎನ್ನಬಹುದಾದ ನಾಯಕತ್ವದ ಮನೋಭೂಮಿಕೆ, ಆಡಳಿತ ವ್ಯವಸ್ಥೆ ಮುಂತಾದವುಗಳನ್ನು ಗ್ರಹಿಸುವ ಕ್ರಮಗಳಿಂದ ಪ್ರಭಾವಿತವಾಗಿವೆ. ರಾಜಕೀಯದ ದಿನನಿತ್ಯದ ಸರ್ಕಾರ ಹಾಗೂ ಸಮಾಜದ ಸಂಬಂಧಗಳು ತೇಜಸ್ವಿ ತೋರಿಸಿಕೊಡುವ ಒಂದಲ್ಲ ಒಂದು ಚಿತ್ರದಲ್ಲಿ ಸೇರಿರುತ್ತದೆ. ತಾತ್ವಿಕ ನೆಲೆಗಳಲ್ಲಿ ಅನಂತಮೂರ್ತಿಯವರ ವೈಚಾರಿಕ ಪ್ರತಿಭೆ ರಾಜಕೀಯ ವಿಚಾರಧಾರೆಗಳಿಂದಲೂ ಪ್ರಭಾವಿತವಾಗಿವೆ. ಆದರೆ ಅವರ ಸೃಜನಶೋಧನೆಯಲ್ಲಿ ದೈನಂದಿನ ರಾಜಕೀಯಕ್ಕೆ ಮಹತ್ವವಿಲ್ಲ.

ಅಡಿಗರಲ್ಲಿ 'ವ್ಯಕ್ತಿ' ಹಾಗೂ 'ಸಮಾಜ'ದ ಮುಖಾಮುಖಿಯಲ್ಲೇ ಸಮಾಜದ ಸಂಘಟಕ ಪಾತ್ರದ ಮೂಲಬಿಂದುವಾಗಿ ರಾಜಕೀಯ ಪ್ರತಿಷ್ಠಾಪಿತವಾಗಿದೆ. ಹೀಗಾಗಿ ಅಡಿಗರ ಸೃಜನಶೀಲ ಕರ್ಷಣದಲ್ಲೇ ರಾಜಕೀಯ ಅದರಲ್ಲೂ ಮುಖ್ಯವಾಗಿ ಪ್ರಜಾಪ್ರಭುತ್ವದಿಂದ ಪ್ರೇರಿತವಾದ ತಾತ್ವಿಕತೆ ಹಾಗೂ ವೈಯಕ್ತಿಕವಾಗಿ ಅವರಿಗೆ ಸಾಹಿತ್ಯದಲ್ಲಿದ್ದ ಶ್ರೇಷ್ಠತೆಯ ಕಲ್ಪನೆಯಿಂದ ಹುಟ್ಟಿದ ವಿಚಾರಗಳು ಎದುರು ಬದುರಾಗಿವೆ.

ಸಮಾನತೆಯ, ಸ್ವಾತಂತ್ರ್ಯದ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅವರು ಆಧುನಿಕತೆ ಸೃಷ್ಟಿಸಿದ ಮಾನವತ್ವದ ಆದರ್ಶಕಲ್ಪನೆಯಿಂದಾಗಿ ಒಪ್ಪಿಕೊಂಡವರು. ಹಾಗಾಗಿ ಅದನ್ನೆಂದೂ ಕೈ ಬಿಡಲಾರರು. ಶ್ರೇಷ್ಠತೆಯ ಗುರಿ ಹಾಗೂ ಸಾಕ್ಷಿ ಪ್ರಜ್ಞೆಯನ್ನು ಉತ್ತೇಜಿಸಬಲ್ಲ ನೈತಿಕ ನೆಲೆಗಳು ಅಡಿಗರಿಗೆ ವ್ಯಕ್ತಿಗತವಾಗಿ ಪರಮ ಮೌಲ್ಯಗಳು. ಪ್ರಜಾಪ್ರಭುತ್ವ ಎಲ್ಲಾ ಸಂದರ್ಭಗಳಲ್ಲೂ ಶ್ರೇಷ್ಠತೆಯನ್ನೇ ಮಾನದಂಡವಾಗಿ ಎತ್ತಿ ಹಿಡಿಯಬೇಕಾಗಿಲ್ಲ ಎಂಬುದನ್ನು ನಾವು ನೆನಪಿಸಿಕೊಂಡಾಗ, ಈ ಎರಡರ ನಿರಂತರ ದ್ವಂದ್ವದಲ್ಲಿ ಅದನ್ನು ಸಮತೂಗಿಸಿಕೊಳ್ಳಲು ನಿರಂತರವಾಗಿ ಅವರ ಪ್ರತಿಭೆ ಪ್ರಯತ್ನಿಸಿದೆ ಎಂಬುದು ಮೊದಲಿಗೇ ತೋರಿಬರುತ್ತದೆ.

ಅಡಿಗರು ಕಾವ್ಯದಲ್ಲಿ ಭಾಷೆಯ ಮಟ್ಟಿಗೆ 'ಅರ್ಥಾನುಸಾರಿ ಲಯ' ಎಂಬ ಪರಿಕಲ್ಪನೆ ನೀಡಿದರೂ ಸಾಹಿತ್ಯದಲ್ಲಿ ಅನುಭವದ ಸೃಷ್ಟಿ, ಸಂವಹನಗಳಿಗೇ ಮಹತ್ವ ನೀಡಿದರು. ಕಾವ್ಯ ನೀಡಬಲ್ಲ ಅನುಭವದ ಸೃಷ್ಟಿ ಅವರಿಗೆ ಅರ್ಥಕ್ಕಿಂತ ಮುಖ್ಯ. ಅವರ ಶ್ರೇಷ್ಠ ಸಾಹಿತ್ಯದ ಪರಿಕಲ್ಪನೆಯಲ್ಲಿ ಅನುಭವವೇ ಪ್ರಧಾನ. ಹೀಗಾಗಿ ಸಮಾನತೆ ಪರಿಕಲ್ಪನೆಯಲ್ಲಿ ಶ್ರೇಷ್ಠತೆಯೊಂದೇ ಪ್ರಧಾನ ಎಂದು ತಿಳಿಯದ ಪ್ರಜಾಪ್ರಭುತ್ವದ ರಾಜಕೀಯ ವಾಸ್ತವದ ಜೊತೆ ಅವರಿಗೆ ಸದಾ ಸೈದ್ಧಾಂತಿಕ, ನೈತಿಕ ತಿಕ್ಕಾಟವಿರುತ್ತಿತ್ತು.

ಪ್ರಜಾಪ್ರಭುತ್ವದ ಮೂಲ ಸತ್ವವಾಗಿ ಅಡಿಗರು ಚುನಾವಣಾ ರಾಜಕೀಯದಿಂದ ಆಚೆ ಇರಬಹುದಾದ ಮಾನವತೆಯ ಪರಿಕಲ್ಪನೆಯನ್ನೇ ಪರಿಗಣಿಸಿದರು. ಮಾನವತೆಯಲ್ಲಿ ಸಮಾನತೆ ಹಾಗೂ ಸ್ವಾತಂತ್ರ್ಯಗಳು, ಪ್ರಾಣಿ ಸಹಜ ಪ್ರವೃತ್ತಿಗಳಿಂದ ಬೇರೆಯಾಗಿ ಸಾಧಿಸಬೇಕಾದ ಸಂಸ್ಕಾರ. ಪ್ರಜಾಪ್ರಭುತ್ವದ ಮಾನವೀಯ ಮೂಲಸತ್ವಗಳನ್ನು ಕಳಕೊಂಡ, ನೈತಿಕವಾಗಿ ಕೆಳಮಟ್ಟಕ್ಕೆ ಇಳಿದ ರಾಜಕೀಯಕ್ಕೆ ಎದುರಾದಾಗ ಅಂತಹ ರಾಜಕಾರಣಿಗಳನ್ನು ಹಾಗೂ ರಾಜಕೀಯವನ್ನು ಅಡಿಗರ ಕಾವ್ಯ ಪ್ರತಿಭೆ ತೀವ್ರ ವ್ಯಂಗ್ಯಕ್ಕೆ ಒಳಪಡಿಸುತ್ತಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯವು ಯಾವುದೇ ರೀತಿಯ ಬಹುಮತ ಅಥವಾ ಬಹು ಜನಾಭಿಪ್ರಾಯ ಬಳಸಿ ಮಾನವತೆಯ ಮೂಲ ಮೌಲ್ಯಗಳಿಗೆ ವಿರುದ್ಧವಾಗಿ ಹೋಗುವುದನ್ನು ಒಪ್ಪದೆ ಅವರು ಕೋಪದಲ್ಲಿ ಕುದಿಯುತ್ತಿದ್ದರು. ಅದುವೇ ಅವರ ನೈತಿಕ ಸಿಟ್ಟಿನ ಮೂಲ ನೆಲೆ. ಅದನ್ನು ಅಡಿಗರು ತಮ್ಮ ಕಾವ್ಯದಲ್ಲಿ ಕಾಣಿಸುತ್ತಿದ್ದುದು ಪ್ರತಿಮಾತ್ಮಕ ವ್ಯಂಗ್ಯದರ್ಶನದ ಮೂಲಕ ಹೇಳುತ್ತಿದ್ದುದು ಭಾವಾಭಿನಯ ಸಹಿತವಾದ ಕಾವ್ಯಭಾಷೆಯಲ್ಲಿ.

'ನಾನು ಹಿಂದೂ ನಾನು ಬ್ರಾಹ್ಮಣ' ಎಂಬ ಅಡಿಗರ ಮುಖ್ಯವಾದೊಂದು ತಾತ್ವಿಕ ಕವನದಲ್ಲಿ (ಬತ್ತಲಾರದ ಗಂಗೆ ಸಂಕಲನ) ಸಮಾನತೆಯ ಶ್ರೇಣೀಕರಣಕ್ಕೆ ಮೌಲ್ಯ ಶಿಖರ ಒದಗಿಬರಬಹುದಾದ ಚಿಂತನೆ ಇದೆ. ಅದು ಜಾತಿ, ಧರ್ಮಗಳ ಹಿನ್ನೆಲೆಯಲ್ಲಿ ಸಮಾನತೆಯ ಆದರ್ಶವನ್ನು ಸೂಚಿಸುವ ಕ್ರಮ:

> ''ಭಿನ್ನ ಭಿನ್ನದ ತಾರತಮ್ಯದ ನೆಲೆಗೆ ಸಿಲುಕಿಸಿ ಹೊಂದಿಸಿ
> ಹಂತಹಂತವ ರಚಿಸಬೇಕಿದೆ ಮೌಲ್ಯ ಶಿಖರವ ಗುರುತಿಸಿ''

ತಾರತಮ್ಯಗಳನ್ನು ನೆಲೆಗೆ ಸಿಲುಕಿಸಿ ಹೊಂದಿಸಿಕೊಂಡು ಸಾಧಿಸಬೇಕಾದ ಸಮಾನತೆ ಮೌಲ್ಯರಹಿತ ಸಮಾನ ಸ್ಥಿತಿಯಲ್ಲ, ಕೆಳಮಟ್ಟದ ಸಮತಟ್ಟಿಗೆ ಹಂತಹಂತವಾದ ಮೌಲ್ಯ ಶಿಖರದ ಚಿತ್ರ ಎದುರಾಗಿದೆ. ಅಡಿಗರ ಶ್ರೇಷ್ಠತೆಯ ಕಲ್ಪನೆ ಜೊತೆ ಸದಾ ಮೌಲ್ಯ ನಿರ್ದೇಶನವೊಂದು ಇದೆ. ಅಂತಹ ಮೌಲ್ಯಗಳಿಗೆ ಘಾತವಾದಾಗ ಸಾತ್ವಿಕ ಸಿಟ್ಟಿನ ಜೊತೆ ಅಡಿಗರಲ್ಲಿ ವ್ಯಂಗ್ಯದ ಮೊನಚೂ ಭುಗಿಲೇಳುತ್ತದೆ.

ಮೇಲೆ ಸೂಚಿಸಿದ ಕವನದ ಎರಡು ಸಾಲುಗಳನ್ನು ಮಾತ್ರ ಗಮನಿಸಿದಾಗ ಇದು ಪ್ರಜಾಪ್ರಭುತ್ವದಲ್ಲಿ ಸಮಾನತೆಯನ್ನು ಸೂಚಿಸುವ ಕಾನೂನಿನ ಆಡಳಿತದ (Rule of law) ವಿಸ್ತರಣೆಯ ಭಿನ್ನತೆ ತಾತ್ವಿಕ ಆದರ್ಶದ ನೆಲೆಯಾಗಿಯೂ ಸೂಚಿಸಲಾಗಿದೆ. ಅಂತಹ ವಿಸ್ತರಣೆ ಮಾನವತ್ವಕ್ಕೆ ಗೌರವ ತರುವಂತಿರಬೇಕು. ಅದುವೇ 'ಆಧುನಿಕತೆ' ನೀಡುವ ದೊಡ್ಡ ಕೊಡುಗೆ. ಅದೇ ಕವನದಲ್ಲಿ ಅಡಿಗರು ಅದನ್ನು ಸ್ಪಷ್ಟವಾಗಿ 'ಮಾನವತ್ವಕ್ಕೆ ಗೌರವಾರ್ಪಣೆ ಆಧುನಿಕತೆಯ ಭಾರೀ ಸಾಧನ' ಎಂದು ಸಾರುತ್ತಾರೆ. ಹಿಂದಿನ ಪಾಳೇಗಾರಿ ವ್ಯವಸ್ಥೆಯಲ್ಲಿ ಮನುಷ್ಯತ್ವಕ್ಕೆ ಗೌರವವಿಲ್ಲ, ಸ್ಥಾನಮಾನದ ಮನುಷ್ಯರಿಗೆ ರಾಜ, ಯಜಮಾನ ಇತ್ಯಾದಿ – ಗೌರವ. ಸಾಮಾಜಿಕವಾಗಿದ್ದ ಪಂತ ಈಗ ಮೌಲ್ಯಗಳ ನೆಲೆಯಲ್ಲಿ ಪುನರ್ ರಚನೆಯಾಗಬೇಕಿದೆ.

ಆದರೆ ಈ ಆಧುನಿಕತೆಯ ಸಾಧನೆ 'ವ್ಯಕ್ತಿ'ಗಳ ಸಮೂಹದೊಳಗಿರುವ ನನ್ನ ಮೇಲೆ ಅತಿಕ್ರಮಣ ಮಾಡಬಹುದೆ? ಅಕಸ್ಮಾತ್ ಅದು ತನ್ನ ಸ್ವಾಭಿಮಾನದ ನೆಲೆಯನ್ನು ಪ್ರಶ್ನಿಸುವ ಅಥವಾ ತನ್ನ ಅನುಭವವನ್ನು ದುರ್ಬಲಗೊಳಿಸುವ/ ಮೊಟಕುಗೊಳಿಸುವ ರಾಜಕೀಯದಲ್ಲಿ ತೊಡಗಿದರೆ ಅದನ್ನು ಹೇಗೆ ಗ್ರಹಿಸಬೇಕು? ಇದನ್ನು ಲೌಕಿಕ ಹಾಗೂ ಪಾರಮಾರ್ಥಿಕ/ ಆಧ್ಯಾತ್ಮಿಕ ನೆಲೆಗಳಲ್ಲಿ ಕವಿಯಾಗಿ ಹಾಗೂ ತಾತ್ವಿಕ ದರ್ಶನದ ಗ್ರಹಿಕೆಯಾಗಿ ಒಂದು ಇನ್ನೊಂದಾಗುವಂತೆ ಅಡಿಗರು ಮತ್ತೆ ಅದೇ ಕವನದಲ್ಲಿ ಹೇಳುತ್ತಾರೆ:

'ಸ್ವಾಭಿಮಾನವೆ? ಈ ಅನಂತ ಅಪಾರ ವಿಶ್ವದ ಅಣುವಿಗೆ–
ಇತ್ಯರ್ಥವಾಗಲಿ ನಮ್ಮ ನಮ್ಮಂತಸ್ತು ಮೃತ್ಯುವಿನಾಚೆಗೆ'

ಈ ಸ್ವಾಭಿಮಾನವನ್ನು– ವ್ಯಕ್ತಿ ವಿಶಿಷ್ಟತೆಯ ವಿಶೇಷ ಶಕ್ತಿಯನ್ನು– ಗ್ರಹಿಸದೆ ಸಮಾನತೆಯ ಕಲ್ಪನೆಯಲ್ಲಿ ಬಹುಜನ ಅಥವಾ ಬಹುಮತ ಸರ್ವಾಧಿಕಾರದೆಡೆಗೆ ಯಾವುದೇ ರೀತಿಯಲ್ಲಿ ಚಲಿಸುವಂತಾದರೂ ಅದೊಂದು (ರಾಜಕೀಯ) ವ್ಯವಸ್ಥೆಯ ಅನ್ಯಾಯದಂತೆಯೇ ಅಡಿಗರಿಗೆ ತೋರುತ್ತಿತ್ತು. ವ್ಯವಸ್ಥೆ ಹಾಗೂ ರಾಜಕೀಯ ವ್ಯಕ್ತಿಯ ವಯುಕ್ತಿಕ ಅನುಭವಕ್ಕೆ ಅವಕಾಶ ಕೊಡದೆ ನ್ಯಾಯವನ್ನು ಅಧಿಕಾರ ಅಥವಾ ಇನ್ನಾವುದೋ ಲಾಭದ ಕಡೆ ಜಗ್ಗಿದರೂ ಅದು ಅಡಿಗರಿಗೆ ಅನ್ಯಾಯದಂತೆ ತೋರುತ್ತಿತ್ತು. ಅಂತಹ ವ್ಯವಸ್ಥೆಯ ಅನ್ಯಾಯದ ಬಗ್ಗೆ ಅವರ ನೈತಿಕ ಸಿಟ್ಟು ನಿರಂತರ ವಾಗಿತ್ತು. ಹೀಗೆ ರಾಜಕೀಯವನ್ನು ಮೈಮೇಲೆ ಎಳೆದು ಹಾಕಿಕೊಂಡು ಅವರು ಅನೇಕ ಕವನಗಳನ್ನು ಬರೆದಿದ್ದಾರೆ. ಈ ದೃಷ್ಟಿಯಲ್ಲೂ 'ರಾಜಕೀಯ' ಅವರ ಸೃಜನಸೃಷ್ಟಿಯ ಮೂಲ ಚೇತನದ ಭಾಗವಾಗಿದೆ.

ಇಂತಹ 'ರಾಜಕೀಯ' ವಿಷಯವುಳ್ಳ ಅನೇಕ ಕವನಗಳಲ್ಲಿ 'ಇಂದು ನಮ್ಮೀನಾಡು' ಕವನ ಗುಚ್ಛ (ಒಟ್ಟು ಮೂರು ಕವನಗಳು), 'ನೆಹರೂ ನಿವೃತ್ತರಾಗುವುದಿಲ್ಲ', 'ಬರುತ್ತಾರೆ', 'ಎಡ-ಬಲ', 'ದೆಹಲಿಯಲ್ಲಿ', 'ಅಸ್ಸಾಮಿನಲ್ಲಿ ನರಮೇಧ' ಇತ್ಯಾದಿ ಅನೇಕ ಕವನಗಳು ಸಾಕಷ್ಟು ಚರ್ಚಿತವಾಗಿವೆ. ಆದರೆ ಅಷ್ಟು ಚರ್ಚಿತವಾಗದ ಹಲವಾರು ರಾಜಕೀಯ ಕವನಗಳೂ ಇವೆ. ಕರ್ನಾಟಕದ ಇಂದಿನ ರಾಜಕೀಯ ವಿದ್ಯಮಾನಗಳು ಈ ಕವನವನ್ನು ನೆನಪಿಸಿತು. ಸುಮ್ಮನೆ ಗೋಪಾಲಕೃಷ್ಣ ಅಡಿಗರ ಆ ಕವನವನ್ನೊಮ್ಮೆ ಓದೋಣ:

ಕುರ್ಚಿಗಂಟಿದ ಕರ್ಚಿ

೧

ಈ ತರಳೆಯಂಡಿಗೆ ಕುರ್ಚಿ ಬಂದಂಟಿಕೊಂಡಿದ್ದು
ಅದೊಂದು ಭಾರೀ ಕಥೆ
ಕಾಳೀನ ಬೋಳೀ ಮಾಡಿ ಬೋಳೀನ ಕಾಳೀ ಮಾಡಿ
ಹಾಗೂ ಹೀಗೂ ತನ್ನ ಬೇಳೆ ಬೇಯಿಸಿಕೊಳ್ಳುತ್ತಿದ್ದ ಆಸಾಮಿ
ರಾಜವಂಶದ ಬಾಲ ಹಿಡಿದು ಅಂತೂ ಇಂತೂ
ಬಿರುಗಾಳಿಯೆದ್ದಾಗ್ಗೆ ಬಾಲಂಗೋಚಿಯ ಪುಕ್ಕವೊಂದಾಗಿ
ಹಾರಾಡುತ್ತಿದ್ದ. ಇದ್ದಕ್ಕಿದ್ದಂತೆ ಭಾರೀ ಕುರ್ಚಿ
ಪೀಠ ಅಂಟಿದ್ದು ಪೂರ್ವಜನ್ಮದ ಪುಣ್ಯ.
ಪರಿಪಾಕವೆಂದು ಬೀಗಿದ್ದ ಈ ಭೇಕ-ವರಾಕ.

೨

ನಗು ಬರುತ್ತಿದೆ ನನಗೆ ಈ ತಮಾಷೆಯ ಕಂಡು
ಈ ಗೃಧ್ರ ತನ್ನಂಡಿಗಂಟಿದ್ದ ಕುರ್ಚಿ ಸಮೇತ
ಅತ್ತಿತ್ತ ಸುತ್ತಾಡುವುದ ಕಂಡು.
ಎಲ್ಲಿಂದ ಈ ಅಂಟು? ಕೃತ ಅಥವಾ ತ್ರೇತಾದಲ್ಲಿ
ಕಂಡುಕೊಂಡದ್ದೆ ಇರಬೇಕು. ಏನೆ ಮಾಡಲಿ ಅದು
ಕಳಚಿಕೊಳ್ಳುವುದಲ್ಲ ಈ ಕುರ್ಚಿ,
ಒದರಿ ಒದರಿ ಸೊಂಟದ ಕೀಲು ಕಳಚುವಂತಿದೆ,
ಎಳೆದು ಎಳೆದು ತೋಳಿನ ಗಂಟು
ಸಡಿಲುವಂತಿದೆ. ಯಾವ ಪ್ರಾರಬ್ಧವೋ
ಈ ಸದಾಸನನ ಸದಾಶವದ ನಡಿಗೆಗೆ ನಾವು
ಶರಣು. ಏನಂತೀರಿ?
ಇದು ನಮ್ಮ ಪ್ರಾರಬ್ಧವೆ ಸರಿ.
ಈ ಪುಢಾರಿಯ ನಟನೆ ಎಷ್ಟು ಚಂದ;
ಮರಣಾನಂದವಲ್ಲವೇ ವೀಕ್ಷಕರಿಗೆ?

೩

ಈ ಕುರ್ಚಿ ಮನುಷ್ಯನ ಪಾಡು ನೋಡಿ:
ಏಳಲಾರ, ಸರಿಯಾಗಿ ಕೂರಲೂ ಆರ. ನೆಲದ ಕಡೆ
ದೃಷ್ಟಿ ಹರಿಸಲೂ ಆರ. ಮೇಲೆ ಸೂರಿನಲ್ಲಿ
ಬೆಳಗುವ ದೀಪ ನೋಡಲಾರ. ಪಕ್ಕದ ಕೋಣೆ
ಯಲ್ಲಿ ತಮ್ಮಟೆ ಸದ್ದು. ವಿಚಿತ್ರ ವಿಕಾರ ನಗು
ಕೈಯಲ್ಲಿ ಮಿಡಿಯುತ್ತಿದೆ ಪಾಶ.
ಈ ಯಾವುದೂ ಅನುಭವವಾಗದೀತನಿಗೆ.
ಒಂದಷ್ಟು ತಿಳಿದರೂ ಭಯದಿಂದ ತತ್ತರಿಸಿದರೂ ಶರೀರ
ಎದ್ದೇಳಲಾರ– ಅಹಹಾ ವಿಧಿ ವಿರಾಧನ ತೆಕ್ಕೆಯಲ್ಲಿ
ಸಿಕ್ಕಿದಿ ಸಮ್ಮು?
ಅಹಹಾ ಸರ್ವಾಧಿಕಾರದಾಭಾಸವೇ,
ಭಾರತದ ಅತ್ಯುಚ್ಚ ಆದರ್ಶ ಪರಿಹಾಸವೇ.

೪

ಆದರೂ ನೋಡಿ ಈ ಪೀಠ ಕೀಟದಾಟೋಪಗಳ
ಅವರಿವರು ಬಂದು ಬಂದು ಡೊಗ್ಗು ಸಲಾಮು ಹೊಡೆದು
ಮುಖಸ್ತುತಿಯ ದೇಶಾವರಿಯ ಸೂಸಿದರೆ
ಗಂಭೀರವಾಗಿ ಹಿಗ್ಗುತ್ತಾನೆ, ತಲೆದೂಗುತ್ತಾನೆ,

ಇಂದ್ರಪಟ್ಟಕ್ಕೆ ಬಂದ ನಹುಷನಂತೆ
ವಿಜೃಂಭಿಸುತ್ತಾನೆ ಈ ಗಮಾರ.
ಆತ್ಮತೃಪ್ತಿಯ ಮುಗುಳುನಗೆಗೆ ಹಲ್ಲನು ಕಿಸಿದು
ಸ್ವಗತ ಭಾಷಣದಲ್ಲಿ ಹಿಗ್ಗುತ್ತಾನೆ ತನಗೆ ತಾನೆ.
ಗೊತ್ತಿಲ್ಲ ಈ ಬೆಪ್ಪು ತಕ್ಕಡಿಗೆ ಡೊಗ್ಗು ಸಲಾಮು
ಹೊಡೆದವನೆ ಹೊರ ಹೋಗಿ ಮೂತಿ ಮಾಡುತ್ತಾನೆ
ನೂರು ತರಹ ಅಣಕವಾಡುತ್ತಾನೆ
ಬಿದ್ದು ಬಿದ್ದು ನಕ್ಕು.

೫

ಪೂರ್ವಜನ್ಮದ ಪುಣ್ಯ ತೀರಿ ಬೀಳುತ್ತಾನೆ ಹೇಗೆ ನೋಡಿ:
ಗಾಳಿಯೆಲ್ಲಾ ಹೋಗಿ ಚಪ್ಪಟೆಯಾಗಿ ಚರಂಡಿಯಲಿ
ಬೀಳುವ ಬೆಲೂನಿವನು.
ಭಾರೀ ತುರೂಫು ತಾನೆಂದು ತಿಳಿದಿದ್ದ. ಹೇಗಿದೆ ಈಗ
ಎರಡು ದಿನದ ಧಿಮಾಕಿನೀ ಪೋಕರಿ
ಕುರ್ಚಿಗಂಟಿದ ಕರ್ಚಿ ಏನೆಂಬಿರಿ?

(ಬರೆದದ್ದು ೧೯೭೯. ಮುದ್ರಣಕ್ಕೆ ಸಿದ್ಧಪಡಿಸಿದ್ದು ೨೫-೧೦-೧೯೮೯)

ಕವನ ಪ್ರತಿಮಾತ್ಮಕ ವ್ಯಂಗ್ಯದರ್ಶನವನ್ನು ತೀಕ್ಷ್ಣ ವಿಡಂಬನೆಯ ಮೂಲಕ ಸೃಜಿಸುತ್ತದೆ. ತರಳೆ ಒಬ್ಬನ ಅಂಡಿಗೆ ಕುರ್ಚಿ ಬಂದು ಅಂಟಿಕೊಂಡಿದೆ. ಅದು ಆರ್ಜಿಸಿ ಪಡೆದ ಕುರ್ಚಿ ಅಥವಾ ಅಧಿಕಾರವಲ್ಲ. ರಾಜಕೀಯ ಬಿರುಗಾಳಿಯಲ್ಲಿ ಹೇಗೋ ಬಂದು ಅಂಟಿಕೊಂಡದ್ದು. ಅದನ್ನು ಹೇಳುವುದೇ ಒಂದು ಭಾರೀ ಕಥೆ ಎಂದು ಕವನ ಪ್ರಾರಂಭವಾಗುತ್ತದೆ. ಅಂದರೆ ಕವನದ ಪ್ರಾರಂಭದಲ್ಲೆ ಪರಿಸ್ಥಿತಿಯ ಬಗೆಗೆ ಒಂದು ನಿರ್ಣಯವಿದೆ. ಹೀಗೆ ನಿರೂಪಕನ ಮನೋಭೂಮಿಕೆಯಲ್ಲಿ ಮೊದಲೇ ನಿಶ್ಚಿತವಾದದ್ದನ್ನು ಕವನ ವರದಿ ಮಾಡುತ್ತಾ ನಾನಾಚಿತ್ರಗಳ ಮೂಲಕ ತೋರಿಸುತ್ತಾ ಮತ್ತೊಂದು ನಿರ್ಣಾಯಕ ಘಟ್ಟವನ್ನೂ ಕೊನೆಯಲ್ಲಿ ತಲುಪುತ್ತದೆ. ಇಂತದ್ದರಿಂದ ಪ್ರಾರಂಭವಾಯಿತು ಎಂಬ ನಿರ್ಣಯದಿಂದ ಪ್ರಾರಂಭವಾದ ಕವನ ಇಂತದ್ದು ಆಗಲಿದೆ ಎಂಬ ಇನ್ನೊಂದು ನಿರ್ಣಯದಲ್ಲಿ ಕೊನೆಯಾಗುತ್ತದೆ. ನಿರೂಪಕ ವ್ಯಂಗ್ಯದಲ್ಲಿ ಕಾಣಿಸುವುದು ಕವನದ ಉದ್ದಕ್ಕೂ ಮೌಲ್ಯ ನಿರ್ದೇಶನಗಳನ್ನು ಸೂಚಿಸುತ್ತ ಇರುತ್ತದೆ.

ಕಪ್ಪು-ಬಿಳಿಗಳನ್ನು ಅದಲು-ಬದಲು ಮಾಡಬಲ್ಲಷ್ಟು ಶಕ್ತಿಯುಳ್ಳ ವ್ಯಕ್ತಿ ರಾಜಕೀಯದ ಬಿರುಗಾಳಿಯೊಂದು ಬೀಸಿದಾಗ ರಾಜವಂಶದ ಬಾಲ ಹಿಡಿದು ಬಾಲಂಗೋಚಿಯ ಪುಕ್ಕವಾಗಿದ್ದವನಿಗೆ ಕುರ್ಚಿಯೂ ಅದೇ ಗಾಳಿಯಲ್ಲಿ ಹಾರಿಬಂತೋ ಎಂಬಂತೆ ಅಂಟಿಕೊಂಡಿದೆ. ಇಲ್ಲಿ ನಾವು ಸಾಮಾನ್ಯ ಆಡುಮಾತಿನ ವಿಡಂಬನಾತ್ಮಕ ಹೋಲಿಕೆ ಉಪಮೆಗಳನ್ನು ಬಳಸಿದ ಭಾಷೆಯ ಮೊನಚನ್ನು ಗುರುತಿಸಬೇಕು. ರಸ್ತೆ ಪಕ್ಕದಲ್ಲಿ ರಾಜಕೀಯದ ಬಗ್ಗೆ ಮಾತನಾಡುವ ಧಾಟಿಗೆ ಬಂದು ಕಠಿಣ ನಿಲುವು ಸೇರಿಕೊಂಡಿದೆ.

ಈ ಕುರ್ಚಿಯಂಟಿದ ಬಳಿಕ ಅಧಿಕಾರದೊಂದು ಹೊಸ ಜನ್ಮವಾಗಿದೆ. ಅದು ಈಗಿನ ಜನ್ಮ.

ಅದರ ಹಿಂದಿನ ಜನ್ಮವಾದ 'ಪೂರ್ವಜನ್ಮ'ದ ಪುಣ್ಯವೂ ಆ ವ್ಯಕ್ತಿಗಿದೆ. ಆದ್ದರಿಂದ ಇಲ್ಲಿ ಪೂರ್ವಜನ್ಮ ಎಂಬುದು ಧಾರ್ಮಿಕ ನಂಬುಗೆಯ ಹಿಂದಿನ ಜನ್ಮ ಮಾತ್ರವಲ್ಲ. ಈ ರಾಜಕೀಯದ ಅಧಿಕಾರ ಅಂಟುವ ಮೊದಲಿನ ಜೀವನವೂ ಹೌದು. ಅಲ್ಲಿ ಅವನು ಜನರ ನಡುವೆ ಓಡಾಡಿದ್ದಾನೆ. ಅವರ ನಡುವೆಯೇ ಇದ್ದುದಾಗಿರಲೂಬಹುದು. ಆಗ ಮಾಡಿರಬಹುದಾದ ಕೆಲಸಗಳ ಪುಣ್ಯವೂ ಸೇರಿ ಅದು ಪೂರ್ವಜನ್ಮ. ಅಷ್ಟರಮಟ್ಟಿಗೆ ಪ್ರಜಾಪ್ರಭುತ್ವದ ವಾಸ್ತವ ಕಲ್ಪನೆ ಇದೆ. ಅಲ್ಲಿ 'ಕಾಳೀನ ಜೋಳಿ' ಹಾಗೂ ಜೋಳೀನ ಕಾಳೀ' ಮಾಡಬಲ್ಲ ಪ್ರಜಾಪ್ರಭುತ್ವದ ಕಣ್‌ಕಟ್ಟು ವಿದ್ಯೆ(ಜಾದೂ ಅಥವಾ ಮ್ಯಾಜಿಕ್) ಅವನಿಗೆ ಫಲ ನೀಡಿದೆ. ಆದರೆ ನಿರೂಪಕರ ನೈತಿಕ ಕಲ್ಪನೆ/ನಿಲುವು ಅದರಿಂದಾದ ವ್ಯಕ್ತಿಯ ಅವಸ್ಥಾಂತರವನ್ನು ಒಂದು ರೀತಿ ಕುತಂತ್ರ ಹಾಗೂ ಮೋಸದ ಕಣ್‌ಕಟ್ಟು ಎಂದು ಗ್ರಹಿಸಿದೆ.

ಆ ಪರಿಪಾಕ ಅವನ ಪುಣ್ಯವೆಂದು ಬೀಗಿದ್ದವನು ಈ ಭೇಕ-ವರಾಕ. 'ಪಾಕ', 'ಭೇಕ', 'ವರಾಕ' ಪದಗಳ ಅನುರಣನದಲ್ಲಿರುವ ಶಬ್ದ ಹಿತವನ್ನು ಗಮನಿಸಬೇಕು. ಅಧಿಕಾರಕ್ಕೆ ಬಂದವನು ಈ ಶಬ್ದ ಹಿತಕ್ಕೆ ಕಾರಣನಾದವನು. ಹಿತವಾದ ಮಾತುಗಳಿಂದ ಮರುಳುಗೊಳಿಸಿರಬಹುದಾದವನು. ಆದರೆ ವ್ಯಂಗ್ಯ ಇರುವುದು ಅದರ ಅರ್ಥ ವೈಪರೀತ್ಯದಲ್ಲಿ. 'ಭೇಕ' ಎಂದರೆ ಕಪ್ಪೆ ಮಂಡೂಕ, ಪುಕ್ಕಲ, ಭೀರು ಇತ್ಯಾದಿ ಅರ್ಥಗಳಿವೆ. 'ವರಾಕ' ಪದಕ್ಕೆ ಹೀನವ್ಯಕ್ತಿ, ನೀಚ, ಕರುಣಾಜನಕವಾದ, ಅಧಮನಾದ ಎಂಬಿತ್ಯಾದಿ ಅರ್ಥಗಳು ನಿಘಂಟಿನಲ್ಲಿ ನೀಡಲ್ಪಟ್ಟಿದೆ. ಶಬ್ದಹಿತ ನೀಡುವ ಅವನ ವ್ಯಕ್ತಿತ್ವ ಅರ್ಥದ ವ್ಯಂಗ್ಯದಲ್ಲಿ ಅಡಗಿದೆ.

ಮುಂದಿನ ಭಾಗದ 'ನಗು ಬರುತ್ತಿದೆ ನನಗೆ ಈ ತಮಾಷೆಯ ಕಂಡು' ಎಂಬ ವಾಕ್ಯ ನಮಗೆ ತಕ್ಷಣ ದಾಸರ 'ನಗೆಯು ಬರುತಿಗೆ ಎನಗೆ ನಗೆಯು ಬರುತಿದೆ/ ಜಗದೊಳಿರುವ ಮನುಜರೆಲ್ಲ ಹಗರಣ ಮಾಡುವುದನು ಕಂಡು' ಎಂಬ ಸಾಲುಗಳನ್ನು ನೆನಪಿಸುತ್ತದೆ. ಕುರ್ಚಿಗಂಟಿಕೊಂಡಿರುವುದರ ಹಿನ್ನೆಲೆಯಲ್ಲಿ ನಿತ್ಯ ರಾಜಕೀಯದಲ್ಲಿ ಇರಬಹುದಾದ 'ಹಗರಣ'ವನ್ನು ಅದು ನೆನಪಿಸೀತು. ಲೌಕಿಕದ ರಾಜಕೀಯದ ಆಚೆಗಿನ ನೈತಿಕ/ಅಲೌಕಿಕ/ಪಾರಮಾರ್ಥಿಕ ಚಿಂತನೆಗಳ ಅಸ್ತಿತ್ವವನ್ನು ನೆನಪಿಸಿ ಅಧಿಕಾರದ ನಶ್ವರತೆಯ ಅರಿವನ್ನು ಓದುಗನಲ್ಲಿ ಜಾಗೃತಗೊಳಿಸಲು ಈ ದಾಸರ ಸಾಲಿನ ನೆನಪು ಸಹಕಾರಿ.(ಈ ಮುನ್ನ ಶತಕೋಟಿ ರಾಯರುಗಳಾಳಿದ ನೆಲವ ತನ್ನದೆಂದೆಣಿಸಿ/ಶಾಸನವ ಬರೆಸಿ- ವಾಕ್ಯವನ್ನು ನೆನಪಿಸಿಕೊಳ್ಳಬಹುದು. ಆದರೆ ಅಡಿಗರ ಕವನದಲ್ಲಿ ಅಧಿಕಾರದ ನಶ್ವರತೆ ಲೌಕಿಕ ರಾಜಕೀಯದಲ್ಲೆ ಸಾಧಿತವಾಗುತ್ತದೆ. ಈ ವ್ಯತ್ಯಾಸ ಮುಖ್ಯವಾದ್ದು. ದಾಸರ ಸಾಲಿನ ನೆನಪಿನಿಂದ ದಕ್ಕಬಹುದಾದ್ದಕ್ಕಿಂತ ಹೆಚ್ಚಿನದೇನೂ ಇಲ್ಲಿ ದತ್ತವಾಗುವುದಿಲ್ಲ ಎಂಬುದನ್ನು ಮರೆಯಬಾರದು.) ಜೊತೆಗೆ ಮೊದಲ ಭಾಗದಲ್ಲಿ ಸೂಚಿಸಿದ ಗಾಳಿಗೆ ಪೂರಕವಾಗಿರುವ ಕಲ್ಪನೇ ಪದ 'ಗೃಧ್ರ' ಗಾಳಿಯಲ್ಲಿ ಹಾರಾಡುವ ನೆಲದ ಲಾಭಕ್ಕೆ ಕಣ್ಣು ಕೀಲಿಸಿರುವ ಪಕ್ಷಿ.

ಕುಳಿತಲ್ಲೆ ಕುರ್ಚಿಯನ್ನು ಅಂಟಿಸಿಕೊಂಡು ಸುತ್ತಾಡುವುದೆ ಒಂದು ತಮಾಷೆಯ ಕಲ್ಪನೆ. 'ಅಂಟು' ಕುರ್ಚಿಯನ್ನು ದೇಹಕ್ಕೆ ಅಂಟಿಸಿದ 'ಅಂಟು' ಮಾತ್ರವಲ್ಲ ಅದೊಂದು ಬಿಡಲಾರದ ನಂಟು ಹಾಗೂ ಬಂಧನವಾಗುತ್ತದೆ. ಅಂಟಿಕೊಂಡ ಕುರ್ಚಿಯೊಂದಿಗಿನ ನಂಟು ಹಾಗೂ ಬಂಧನ ಎರಡೂ ಶಾಶ್ವತವೆಂದು ತಿಳಿದ ವ್ಯಕ್ತಿ ಮಾಡುವ ಮೊದಲ ಕೆಲಸ ಒದರುವುದು. ಈತನ ಒದರುವಿಕೆ ಗಂಟಲು ಹರಿಯುವಷ್ಟು ಮಾತ್ರವಲ್ಲ. ಅದು ಸೊಂಟದ ಕೀಲು ಕಳಚುವಷ್ಟಾಗಿದೆ. ಅಡಿಗರ ಈ ಅತ್ಯುಕ್ತಿಯನ್ನು ಶರೀರ ಶಾಸ್ತ್ರದ ಹಿನ್ನೆಲೆಯಲ್ಲಿ ಗಮನಿಸಬೇಕು. ಒದರಲು ಬೇಕಾದ ಶ್ವಾಸಕೋಶದ ಕೆಳಗೆ ವಪೆ. ಅದರಿಂದ ಕೆಳಗೆ ಸೊಂಟ. ಅಂದರೆ ಸಂಗೀತಶಾಸ್ತ್ರದಲ್ಲಿ ಹೇಳುವ ನಾಭಿಯಿಂದ ಕೆಳಗಿನ ಸೊಂಟದ ಕೀಲು ಕಳಚುವಷ್ಟು ಈತನ ಶಬ್ದ ಶಕ್ತಿ. ಆ ಸೊಂಟದ ಕೆಳಗಿನ ಅಂಡಿಗೆ ಅಂಟಿದ ಕುರ್ಚಿಯ ಪ್ರಭಾವ

ಅಷ್ಟಿದೆ. ಅಂಟು ಬಂದ ಬಳಿಕ 'ಟ'ಕಾರ ಪ್ರಯೋಗವೂ(ಅಂಟು, ಸೊಂಟ, ಗಂಟು) ಉದ್ದೇಶಪೂರ್ವಕ. 'ಗಂಟು' ಸೂಕ್ಷ್ಮವಾಗಿ ಅನೇಕ ಅರ್ಥಸಾಧ್ಯತೆಗಳಿಗೆ ಅಪರೋಕ್ಷವಾಗಿ ತೆರೆದುಕೊಳ್ಳಲು ಸಹಾಯಕ. ಸಾಂದರ್ಭಿಕವಾಗಿ 'ಗಂಟುಕರಗುವ' ಎಂಬ ಭಾವಾರ್ಥವನ್ನು ಧ್ವನಿಸಲು ಸಹಕಾರಿಯಾಗಿದೆ.

ಸರಳವಾಗಿ ಹೇಳುವುದರಲ್ಲಿ ಹೊಸ ಶಬ್ದದ ಸೃಷ್ಟಿ ಸೃಜನಶೀಲ ಕವಿಯೊಬ್ಬ ಸಾಧಿಸಬಲ್ಲ ಸೂಕ್ಷ್ಮ ಕೆಲಸ. ಭಾಷೆಯ ಮೂಲಕವೇ ದೊಡ್ಡ ಕವಿಯೊಬ್ಬ ಲೋಕಸ್ಮೃತಿಯನ್ನು ಸ್ಪರ್ಶಿಸುತ್ತಾನೆ. ನಮಗೆ 'ಸದಾನಂದ' ಹಾಗೂ 'ಸದಾಶಿವ' ಪದಕಲ್ಪನೆ ಪರಿಚಿತ. ಕವಿ ಇಲ್ಲಿ 'ಸದಾಸನ' ಹಾಗೂ 'ಸದಾಶವ' ಪದಗಳನ್ನು ಈ ಸಂದರ್ಭಕ್ಕಾಗಿಯೇ ಸೃಷ್ಟಿಸುತ್ತಾನೆ.

ಈ ಪದಗಳ ಸೃಷ್ಟಿಯನ್ನು ಕೇವಲ ವ್ಯಂಗ್ಯದ ಹಿನ್ನೆಲೆಯಲ್ಲಿ ಮಾತ್ರ ಗ್ರಹಿಸದೆ ಅವನ್ನೊಂದು ಸಾಂಸ್ಕೃತಿಕ ಸಂದರ್ಭದಲ್ಲಿಯೂ ಗ್ರಹಿಸಬೇಕು. ಸೌಖ್ಯವನ್ನು ಸೂಚಿಸುವ 'ಸದಾನಂದ' ಹಾಗೂ ಪಾವಿತ್ರ್ಯಸೂಚಿ 'ಸದಾಶಿವ' ಕಲ್ಪನೆ ಹಿನ್ನೆಲೆಯಲ್ಲಿ ಈ ಎರಡು ಪದಗಳು (ಸದಾಸನ, ಸದಾಶವ) ಅವನು ತಲ್ಲೀನನಾಗಿರುವ ವಿವರಗಳನ್ನು ಗ್ರಹಿಸಲೂ ಸಹಕಾರಿ. ಶಾಶ್ವತವಾದ ಅಗತ್ಯದಲ್ಲಿ ಅನುರಕ್ತನಾಗದೆ ತತ್ಕಾಲದ ಅಂಟಲ್ಲಿ ಬಂಧಿತನಾಗಿದ್ದಾನೆ. ತೂಕವಿಲ್ಲದೆ ಜೀಕಿದ ಗಾಳಿಗೆ ಹಾರಿದವ ತೂಕ ಪಡೆದವನಂತೆ ಕೆಳಗೆ ಕುರ್ಚಿಗೆ ಅಂಟಿ ಸದಾ ಆಸನ ಚಿಂತಿತನಾಗಿರುವುದರಿಂದಲೆ ಸದಾಸನ. ಯಾವ ಜೀವಂತಿಕೆಯೆ ಇಲ್ಲದ, ಕುರ್ಚಿಗೆ ಸದಾ ಅಂಟಿ ಕೂತು ಚಲನೆಯೂ ಇಲ್ಲದ ಸದಾಶವ. ಹಾಗಾಗಿ ಅಲ್ಲಿ ಕುರ್ಚಿಗೆ ಅಂಟಿಕೊಂಡ ನಡಿಗೆ(ಚಲನೆ) ಏನಿದ್ದರೂ ಅದು ಸದಾಶವದ ನಡಿಗೆ. ಅದಕ್ಕೆ ನಾವು ಶರಣ. ಮರಣಾನಂದ 'ಶವ'ದ ಅರ್ಥವನ್ನು ಸಾಂಕ್ರಾಮಿಕಗೊಳಿಸುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆ ಸದಾಶವದ ಕುರ್ಚಿಯೇ ನಮ್ಮನ್ನು ಆಳುವುದರಿಂದ ಮರಣಾನಂದದಲ್ಲಿ ನಾವೆಲ್ಲರೂ ಆ ಸದಾಶವದ ಪಾಲುದಾರರು. ನಮ್ಮ ವ್ಯಕ್ತಿತ್ವದಲ್ಲಾದ ಮರಣವೂ ಆ ಶವದ ಸಾಂಕೇತಿಕತೆಯಲ್ಲಿ ಭಾಗಿ. 'ಶವ' ಪದದ ಬಳಿಕ ಆನಂದಸೂಚಿಯಾಗಿ ವ್ಯಂಗ್ಯದಲ್ಲಿ ಬಳಕೆಯಾದ 'ಮರಣ' ಪದದಿಂದ ಭಾಷೆಯ ಬಳಕೆಯಲ್ಲಿರುವ ಅರ್ಥವನ್ನು ಅನುಸರಿಸುವ ಸೂಕ್ಷ್ಮ ಲಯಗಾರಿಕೆಯನ್ನು (ಅಂದರೆ ಅರ್ಥಾನುಸಾರಿ ಲಯವನ್ನು) ಗಮನಿಸಬೇಕು.

ಈಗ ಆತನೊಬ್ಬ ಕುರ್ಚಿ ಮನುಷ್ಯನಾಗಿದ್ದಾನೆ. ಒಂದು ರೀತಿಯಲ್ಲಿ ಮ್ಯಾಜಿಕ್ ರಿಯಲಿಸಂ ಕಲ್ಪನೆ. ಶಬ್ದಹಿತದಿಂದ ಕಣ್‌ಕಟ್ ಮಾಡುವಾಗ ಹಿಂದೆ ಜನತೆಗೆ ತಿಳಿಯಲಿಲ್ಲ. ಹಿಂದೆ ಗಾಳಿಯಲ್ಲಿ ಹಾರಾಡಿದವ ಈಗ ಸ್ವತಃ ಕುರ್ಚಿ ಮನುಷ್ಯನಾಗಿ ಪರಿವರ್ತಿತವಾಗಿರುವುದು ಸ್ವತಃ ಅವನಿಗೇ ತಿಳಿಯುತ್ತಿಲ್ಲ. ಆದರೆ ಈ ಬದಲಾವಣೆಯಿಂದಾದ ಪರಿಣಾಮದ ಚಿತ್ರ ಸ್ಪಷ್ಟವಿದೆ: ಏಳಲಾರ, ಕೂರಲಾರ, ನೆಲದ ಕಡೆ ದೃಷ್ಟಿಹರಿಸಲಾರ. ಸೂರಿನಲ್ಲಿ ಬೆಳಗುವ ದೀಪವನ್ನೂ ನೋಡಲಾರ. ಅವುಗಳ ಸಾಂಕೇತಿಕ ಅರ್ಥ ಒಂದು ಕಡೆ. ಇನ್ನೊಂದು ದೃಷ್ಟಿಯಿಂದ ಸ್ವಯಂ ಆತ ಒಂದು ಅಸಹಾಯಕತೆಯಲ್ಲೂ ಇದ್ದಾನೆ. ಹಿಂದೆ ಸೂಚಿಸಿದ 'ಶವ' (ಸದಾಶವ) ಸಂಬಂಧಿತ ಚಿತ್ರಗಳು ಅರ್ಥಾನುಸಾರಿಯಾಗಿ ಇಲ್ಲಿ ತಮ್ಮಟೆ ಸದ್ದು ಹಾಗೂ 'ಪಾಶ'ಗಳ ನಿರೂಪಣೆಯಲ್ಲಿ ಮುಂದುವರಿಯುತ್ತದೆ.

ತಮ್ಮಟೆ ಸದ್ದು, ವಿಕಾರ ನಗು, ಕೈಯಲ್ಲಿ ಹಿಡಿಯುತ್ತಿರುವ ಪಾಶ ಯಾವುದೂ ಈ ಕುರ್ಚಿಯ ಮನುಷ್ಯನಿಗೆ ಅನುಭವವಾಗದು. ಕವನದಲ್ಲಿ ಈ ಮರಣ ಸೂಚಿಯಿಂದಾಗಿ ಕುರ್ಚಿ ಮನುಷ್ಯ ಅಲ್ಲಿ ಶಾಶ್ವತವಲ್ಲ ಎಂಬುದು ಸ್ಪಷ್ಟವಿದೆ. ಆದರೆ ಮುಂದಿನ ಅಂತ್ಯದ ಅನುಭವವಾಗದೇ ಇರುವುದು ಕುರ್ಚಿ

ಮನುಷ್ಯನಿಗೆ. ಇಲ್ಲಿ ಕವಿ ಬಹು ಸೂಕ್ಷ್ಮವಾಗಿ 'ಪಾಶ' ಎಂಬ ಪದದಲ್ಲಿ ಶ್ಲೇಷೆಯನ್ನಿಟ್ಟು ಕುರ್ಚಿ ಮನುಷ್ಯನ ಮನಸ್ಥಿತಿಗೂ ಕನ್ನಡಿ ಹಿಡಿಯುತ್ತಾನೆ. 'ಪಾಶ' ಯಮನ ಕೈಯಲ್ಲಿ ಇರುವ ಜೀವ ಹೀರುವ ಅಸ್ತ್ರ. ಅದೇ ರೀತಿ 'ಪಾಶ' ಪದಕ್ಕೆ ಮೋಹ, ಬಂಧನ, ಅತಿಯಾದ ಪ್ರೀತಿ ಇತ್ಯಾದಿ ಅರ್ಥಗಳೂ ಇವೆ. ಅರ್ಥಾನುಸಾರಿ ಲಯದ ಜೊತೆ ಸೂಕ್ಷ್ಮವಾಗಿ ಪರಸ್ಪರ ಮರಣ ಸಂಬಂಧಿತ ಚಿತ್ರಗಳೊಳಗೆ (ಪ್ರತಿಮೆಗಳಲ್ಲಿ) ಇರುವ ಸಾವಯವ ಸಂಬಂಧವನ್ನೂ ಗಮನಿಸಬಹುದು. ಒಂದು ವೇಳೆ ಈ ತಮಟೆ, ಪಾಶಗಳು ಕುರ್ಚಿ ಮನುಷ್ಯನ ಅರಿವಿಗೆ ಅಕಸ್ಮಾತ್ ದಕ್ಕಿದರೂ ಆಗುವುದೇನು? ಆತ ಅಲ್ಲಿಂದ ಎದ್ದೇಳಲಾರ. ಹಾಗೆ ಕುರ್ಚಿಗೆ ಅಂಟಿದ್ದಾನೆ. ಈಗ ಅದು ಅವನ ವಿಧಿ. ಪೂರ್ವಜನ್ಮದ ಪುಣ್ಯ ಈಗ ವಿಧಿಯಾಗಿದೆ. 'ವಿಧಿ' ಪದದ ಅರ್ಥ-ವೈಶಾಲ್ಯಗಳನ್ನು ಭಾವ ಸಂದಿಗ್ಧಗಳನ್ನು ಗಮನಿಸಬೇಕು. ರಾಕ್ಷಸ ವಿರಾಧನಿಗೆ(ರಾಮಾಯಣದ ಕತೆ ನೆನಪಿಸಿಕೊಳ್ಳಿ) ವಿಸ್ತರಿಸಿ, ಬಾಚಿ, ತಬ್ಬಿಕೊಳ್ಳಬಲ್ಲ ಕೈ. ನಾಯಕತ್ವಕ್ಕೆ ರಾಜಕೀಯ ಗಾಳಿಯಲ್ಲಿ ಬಂದವನು ಈಗ ವಿಧಿವಿರಾಧನ ತೆಕ್ಕೆಯಲ್ಲಿ ಸಿಕ್ಕಿದಿಸಮ್ಮ? 'ಸಿಕ್ಕಿದಿಸಮ್ಮು' ಜೊತೆ ಇರುವ ಪ್ರಶ್ನಾರ್ಥಕ ಚಿಹ್ನೆಯನ್ನೂ ನಾವಿಲ್ಲಿ ಗಮನಿಸಬೇಕು.

'ಸಿಕ್ಕಿದಿಸಮ್ಮು' (ಇಸಂ) ಹೌದೆ, ಅಲ್ಲವೆ ಎಂಬ ಅನುಮಾನ ಇದೆ. ಈ ಅನುಮಾನ ನಿರೂಪಕನ ಏಕಮುಖಿ ಅಭಿಪ್ರಾಯ ಪ್ರವಾಹವನ್ನು ನಿಯಂತ್ರಿಸಿ ತುಸುವಾದರೂ ಪ್ರಶ್ನೆಗೆ ಅವಕಾಶ ನೀಡುತ್ತದೆ. ಹಾಗೆಯೇ ಮುಂದಿನ 'ಅತ್ಯುಚ್ಚ ಭಾರತದ ಆದರ್ಶದ ಪರಿಹಾರವೇ' ಎಂಬಲ್ಲಿ ಖಚಿತತನವನ್ನು ತೋರಿಸುವುದಿಲ್ಲ. ಆದರ್ಶ ಮುಗಿಯಿತು ಎಂಬ ಭಾವಾರ್ಥ ಸ್ಥಾಪಿಸಲು ಬಿಡುವುದಿಲ್ಲ. ಆದರ್ಶದ ಉನ್ನತ ಮೌಲ್ಯಕ್ಕಾಗುವ ಅವಮಾನವನ್ನು ಗುರುತಿಸಿಯೂ ಅದು ಅಂತ್ಯವೆಂದು ಸಾರುವುದಿಲ್ಲ.

ಸಿಕ್ಕಿದಿಸಮ್ಮು ಎಂಬಲ್ಲಿ ಇರುವ 'ಇಸಂ' ಕೂಡ ಗ್ರಹಿಸಬೇಕು. (ಕಮ್ಯೂನಿಸಂ, ಸೋಶಿಯಲಿಸಂ, ಫ್ಯಾಸಿಸಂ, ಹಿಂದೂ ಇಸಂ) ಯಾವುದೇ ಇಸಮ್ ಇರಲಿ. ಅದು ಸಿಕ್ಕಿದಿಸಮ್ಮು. ವಿಧಿವಿರಾಧನ ತೆಕ್ಕೆಯಲ್ಲಿ ಅದರ ದಾರುಣ ಅಂತ್ಯ ಒಂದು ಕಡೆ. ಇನ್ನೊಂದು ದೃಷ್ಟಿಯಲ್ಲಿ 'ಸಿಕ್ಕಿ'ದಿಸಮ್ಮು. ಯಾವುದು ಸಿಕ್ಕಿತೋ ಆ ಇಸಮ್ಮು. ದ.ಕ. ಜಿಲ್ಲೆಯ ಗ್ರಾಮ್ಯ ಕನ್ನಡ ಆಡು ಮಾತಿನಲ್ಲಿ 'ಅವ ದೊಡ್ಡ ಇಸಮ್ಮು' ಎಂದರೆ ಹಮ್ಮಿನ, ತೇಂಕಾರದ, ಅಹಂಕಾರದ ಮನುಷ್ಯ ಎಂದರ್ಥ. ಇದು ಇನ್ನೊಂದು ಮಟ್ಟದ 'ವ್ಯಕ್ತಿ' ನೆಲೆಯ ಅರ್ಥಾನುರಣನಕ್ಕೂ ಕಾರಣವಾಗುತ್ತದೆ. ಸಮಷ್ಟಿ ಹಾಗೂ ವ್ಯಷ್ಟಿ ಎರಡೂ ನೆಲೆಯ ಇದು ಸರ್ವಾಧಿಕಾರದ ಆಭಾಸ. ಪ್ರಜಾಪ್ರಭುತ್ವದಲ್ಲಿ ಬೆಳೆಯಬೇಕಾದ ಭಾರತದ ಅತ್ಯುಚ್ಚ ಆದರ್ಶ ಪರಿಹಾರಕ್ಕೊಳಗಾಗಿದೆ. ಅದರ ಟೀಕೆ 'ಅಹಹಾ' ಉದ್ಗಾರದ ವ್ಯಂಗ್ಯ ಭಾವಾಭಿನಯದಲ್ಲಿ ವ್ಯಕ್ತಗೊಂಡಿದೆ.

ಮುಂದಿನ ಭಾಗದಲ್ಲಿ 'ಪೀಠಕೀಟ'ಗಳ ಕ್ರಿಯಾವಳಿಗಳ ವಿವರಣೆ. ಅದಕ್ಕೆ ಪೀಠಕ್ಕಂಟಿದವನ ಪ್ರತಿಕ್ರಿಯೆಗಳ ವಿವರಣೆ. ವಾಚ್ಯಾರ್ಥದಲ್ಲಿ ತಿಗಣೆ ಮೊದಲಾದ ರಕ್ತಹೀರುವ ಜಾತಿಗೆ ಸೇರಿದವು ಪೀಠಕೀಟಗಳು. ಹಾಗೆಯೇ ಪೀಠವನ್ನು ಕೊರೆದು ಹಾಳು ಮಾಡುವ ಮರದ ಹುಳುಗಳೂ ಪೀಠಕೀಟಗಳೆ ಅವುಗಳ ಡೊಗ್ಗು ಸಲಾಮು ಇತ್ಯಾದಿ ಆಟೋಪಗಳಿಗೆ ಈತ ತಲೆದೂಗುತ್ತಾನೆ. ಹಿಗ್ಗುತ್ತಾನೆ.

ಅವನ ನಗು ಇಂದ್ರಪಟ್ಟಕ್ಕೆ ಬಂದ ನಹುಷನಂತೆ. ತಾತ್ಕಾಲಿಕ. ಅಧಿಕಾರದ ಆಸೆಗಳಲ್ಲಿ ಮುಳುಗಿ ಸರ್ಪವಾಗಿ ಭೂಮಿಗೆ ಉರುಳಲಿರುವವನು. ಆದರೆ ಪೆದ್ದ 'ಗಮಾರ'ನಿಗದು ತಿಳಿದಿಲ್ಲ. ಈ ಡೊಗ್ಗು ಸಲಾಮು ಹೊಡೆದವರೆ ಹೊರಹೋಗಿ ಮೂತಿ ಮಾಡಿ ಬಿದ್ದು ಬಿದ್ದು ನಗುವುದು ತಿಳಿಯುವಷ್ಟು ಜಾಣನಲ್ಲ ಅವನು.

ಕವನದ ಕೊನೆಭಾಗಕ್ಕೆ ಬರುವಾಗ ಪೂರ್ವಜನ್ಮದ ಅವನ ಪುಣ್ಯ ತೀರಿದೆ. ಮುಂದೆ ಶಾಪ ವಿಮೋಚನೆ ಹೊಂದಬಲ್ಲ ನಹುಷನಂತೆ ಬೀಳುವವನೂ ಅವನಲ್ಲ. ಕವನದ ಮೊದಲಿಗೆ ಹೇಳಿದ


ರಾಜಕೀಯ(ಬಿರು)ಗಾಳಿ ತುಂಬಿದ ಬೆಲೂನು ಇವನು. ಹಿಂದಿನ ಭಾಗದಲ್ಲಿದ್ದ 'ಹಿಗ್ಗುತ್ತಾನೆ' ಪದ ಪ್ರಯೋಗವೂ ಬೆಲೂನು ಕಲ್ಪನೆಗೆ ಪೂರಕ ಆ ಮೊದಲು ಗೃಧ್ರ ಪದ ಗಾಳಿಯಲ್ಲಿ ಹಾರಾಡುವ ಪಕ್ಷಿಯನ್ನು ಸೂಚಿಸಿದೆ. ಆದರೆ ಈತ ನಿಜದ ಸೂಜಿಮೊನೆ ತಾಗಿ (ನೋಡಿ 'ಪ್ರಾರ್ಥನೆ' ಕವನ) ಬೀಳುವವನಲ್ಲ. ಹಿಗ್ಗಿ ಹಾರಾಡುತ್ತಿದ್ದವ. ಗಾಳಿಯೆಲ್ಲಾ ಹೋಗಿ ಚರಂಡಿಯಲ್ಲಿ ಬೀಳುವ ಬೆಲೂನಿವನು. (ಪ್ರತಿಮಾತ್ಮಕ ಬೆಳವಣಿಗೆಯಲ್ಲಿ ಕವನದ ಮೊದಲಿಗಿರುವ ರಾಜಕೀಯ ಗಾಳಿ ಆ ಬಳಿಕ ಗಾಳಿಯಲ್ಲಿ ಹಾರಾಡುವ ಪಕ್ಷಿ ಗೃಧ್ರ-ಬಳಿಕ ಹಿಗ್ಗುವಿಕೆ ಹಾಗೂ ಬೆಲೂನಿನೊಳಗಿನ ಗಾಳಿಗಿರುವ ಸಂಬಂಧ ಗ್ರಹಿಸಿದರೆ ಅಡಿಗರು ಹೇಳಿದ ಸಾವಯುವ ಶಿಲ್ಪದ ಸಮಗ್ರೀಕರಣ ಎಂಬ ಕಲ್ಪನೆ ಅರಿಯಲು ಸಹಕಾರಿ. ಮೊದಲು ಸೂಚಿಸಿದ 'ಬಿರುಗಾಳಿ', 'ಪಕ್ಷಿ' ಪದಗಳಿಗೆ ಪೂರಕವಾಗಿ 'ಗೃಧ್ರ' ಕಲ್ಪನೆಯಿದೆ. ಹಾಗೆಯೇ ಸ್ವಗತ ಭಾಷಣದಲ್ಲಿ ಹಿಗ್ಗುವ ಮನುಷ್ಯನ 'ಹಿಗ್ಗುವಿಕೆ' ಹಾಗೂ ಗಾಳಿ ತುಂಬಿ ಹಾರಾಡುತ್ತಿದ್ದ ಬೆಲೂನಿನ 'ಹಿಗ್ಗುವಿಕೆ' ನಡುವಿನ ಅರ್ಥ ಸಂಬಂಧಗಳನ್ನು ಗ್ರಹಿಸಿದರೆ ಅಡಿಗರು 'ಸೂಚಿಸಿದ' 'ಅರ್ಥಾನುಸಾರಿ ಲಯ'ದ ಕಲ್ಪನೆ ಅರಿಯಲು ಸಹಕಾರಿ. ಸರಳ, ವ್ಯಂಗ್ಯ, ವಿಡಂಬನಾತ್ಮಕವೆಂಬಂತೆ ತೋರುವ ಈ ಕವನ ಇಲ್ಲಿ ಅಡಿಗರ ಶೈಲಿ ಹಾಗೂ ಚಿಂತನಾಕ್ರಮಗಳನ್ನು ಸರಳವೆಂಬಂತೆ ತೋರಿಸಿದರೂ, ಪ್ರಜಾಪ್ರಭುತ್ವದಲ್ಲಿ ಕವನದ ನಿರೂಪಕನ ಅನುಭವದ ಸಂಕೀರ್ಣ ಮಗ್ಗಲುಗಳನ್ನು ವ್ಯಂಗ್ಯದರ್ಶನದಲ್ಲಿ ಕಾಣಿಸಬಯಸುವ ಉದ್ದೇಶಪೂರ್ವಕ ಪ್ರಯತ್ನವೊಂದೂ ಇಲ್ಲಿದೆ.)

ತಾನೇನೋ ಭಾರೀ ತುರೂಪು ಎಂದು ತಿಳಿದಿದ್ದ ರಾಜಕೀಯದ ಗಾಳಿ ಬೀಸಿದ್ದಾಗ ಈ ಪೋಕರಿಯ ಧಿಮಾಕು ಎರಡು ದಿನ. ಅಂದರೆ ಕ್ಷಣಿಕ. ಇದು 'ಕುರ್ಚಿಗಂಟಿದ ಕರ್ಚಿ' ('ಕಚ್ಚಿರಿ' ಪದಕ್ಕೆ ಜೊತೆ ಸೇರಿಸುವ ಎಂಬ ಅರ್ಥವೂ ಇದೆ.) ಅದೊಂದು ರೀತಿಯ ಬೆಸುಗೆ ಹಾಕುವಿಕೆ. ಇದನ್ನು 'ಏನೆಂಬಿರಿ?' ಎಂಬ ಪ್ರಶ್ನೆ ಕೇಳುವುದರ ಮೂಲಕ ಆ ಸ್ಥಿತಿ ವ್ಯಂಗ್ಯಕ್ಕೆ ಒಳಗಾಗಿದೆ. ಪ್ರಹಸನಗಳಲ್ಲಿ ನಾಟಕೀಯ ಭಾವಾಭಿನಯದಲ್ಲಿ ಹೇಳಿ ಪ್ರಶ್ನೆಯ ಮೂಲಕ ತೆರೆ ಎಳೆಯುವುದೂ ಒಂದು ಕ್ರಮ. ಹೇಳುವ ಧಾಟಿಯಲ್ಲಿ 'ಇದನ್ನು ಏನೆನ್ನಬೇಕು?' ಎಂಬ ಇನ್ನೊಂದು ಪ್ರಶ್ನೆಯ ಮೂಲಕ ಆ ಸ್ಥಿತಿಯ ಬಗ್ಗೆ ಹಾಗೂ ಅಂತಹ ಸಂದರ್ಭಗಳು ಸೃಷ್ಟಿಯಾಗದ ಹಾಗೆ ಪ್ರಜಾಪ್ರಭುತ್ವ ನಡೆಯಬೇಕಾದ ಬಗ್ಗೆ ಹೊಸ ಚಿಂತನೆಗೆ ಓದುಗನನ್ನು ಪ್ರೇರೇಪಿಸುತ್ತದೆ.

೧೯೭೪ರಲ್ಲಿ ಬರೆದ ಈ ಕವನವನ್ನು ಮುದ್ರಣಕ್ಕೆ ಸಿದ್ಧಪಡಿಸಿದ್ದು ೧೯೮೯ರಲ್ಲಿ ಎಂದು ಕವನದ ಕೊನೆಯ ಟಿಪ್ಪಣಿ ಹೇಳುತ್ತದೆ. ಪ್ರತಿಮೆ, ಪ್ರತೀಕಗಳ ಸಾಂಕೇತಿಕ ವ್ಯಂಗ್ಯಾರ್ಥಗಳಿಂದಾಗಿ ೨೦೧೯ರ ನಮ್ಮ ಇಂದಿನ ರಾಜಕೀಯ ಸಂದರ್ಭದಲ್ಲೂ ಈ ಕವನ ಓದುಗರನ್ನು ಪುನಃ ಚಿಂತನೆಗೆ ತೊಡಗಿಸಬಲ್ಲದು. ಸಮಕಾಲೀನ ರಾಜಕೀಯ ಗುಣದಲ್ಲಿ ಮನುಷ್ಯನ ಸಾರ್ವಕಾಲಿಕ ದೌರ್ಬಲ್ಯದ ಒಂದು ಎಳೆಯನ್ನು ಈ ಕವನ ಕಾಣಿಸಿಕೊಡುತ್ತದೆ.

■

ಸಿ-೨/೧೦೩, ಓಂಕಾರ್ ಅಪಾರ್ಟ್‌ಮೆಂಟ್ಸ್
೮ನೇ ಮುಖ್ಯರಸ್ತೆ ೧೨ನೇ ಅಡ್ಡರಸ್ತೆ ಮಲ್ಲೇಶ್ವರ
ಬೆಂಗಳೂರು - ೫೬೦ ೦೦೩
ಮೊಬೈಲ್ : ೯೮೮೦೩ ೦೨೪೫೦
e-mail: srvshankar@yahoo.com



ಮಾತೃಭಾಷೆ ಹಾಗಂದರೇನು?

ಮೇಟಿ ಮಲ್ಲಿಕಾರ್ಜುನ

...Why not let me speak in
Any language I like? The language I speak
Becomes mine, its distortions, its queernesses
All mine, mine alone. It is half-English, half
Indian, funny perhaps, but it is honest,
It is as human as I am human, don't
You see?...

– Kamala Das

Language is the key to the heart of culture. (Edwards 1985:36)

Language embodies the world view of a culture and is unique to the culture that created it. It reflects values and concepts that are deemed to be the most important by culture. A language describes the culture it comes from. (Noam Chomsky, www.anacleta.homestead.com)

Globally, language is the dynamite of thought. If you kill or render impotent a people's language, you can as well kill the people, but if you effectively plan and develop a people's language, you are laying treasures that affect eternity and providing the people with tools of self identity, self actualization and self promotion. (Adegbija 1993:9)

★

ಮಾತೃಭಾಷೆ ಅಂದರೇನು ಎಂಬುದರ ವ್ಯಾಖ್ಯೆಗಳನ್ನು ಕೊಡುವುದು ನನ್ನ ಉದ್ದೇಶವಲ್ಲ. ಬದಲಿಗೆ, ಇಂತಹ ಪದಗಳು 'ಪರಿಕಲ್ಪನೆ' ಹುಟ್ಟಿಸುವ ಸಾಂಸ್ಕೃತಿಕ ಬಿಕ್ಕಟ್ಟುಗಳ ಬಗ್ಗೆ ತಮ್ಮ ಗಮನ ಸೆಳೆಯಲು ಯತ್ನಿಸುತ್ತೇನೆ. ಜನಮಾನಸದಲ್ಲಿ 'ತಾಯ್ನುಡಿ'ಗೆ ಬದಲಾಗಿ 'ಮಾತೃಭಾಷೆ' ಎಂಬ ಪದವೇ ಹೆಚ್ಚು ಬಳಕೆಗೆ ಬಂದಿದೆ. ಆದಾಗ್ಯೂ ನಾನು ಈ ಟಿಪ್ಪಣಿಯಲ್ಲಿ ಇನ್ನೂ ಮುಂದೆ ಮಾತೃಭಾಷೆಗೆ ಬದಲಾಗಿ 'ತಾಯ್ನುಡಿ' ಎಂಬ ಪದವನ್ನು ಬಳಸುತ್ತೇನೆ. ಕಾರಣವೇನೆಂದರೆ ಕನ್ನಡದ ನುಡಿಗಟ್ಟುಗಳನ್ನೇ ಸಹಜವಾಗಿ ಬಳಕೆಗೆ ತರುವ ಹೆಬ್ಬಯಕೆ. ಈ ನಡೆ ಈಗಾಗಲೇ ಬಳಕೆಗೆ ಬಂದಿದೆ. ಈ ಲೇಖನವು ತನ್ನ ಚರ್ಚೆಯ ಮುಖ್ಯ ಭಿತ್ತಿಯನ್ನಾಗಿ ನಾಡು-ನುಡಿ-ಸಂಸ್ಕೃತಿಗಳ ನಡುವಣ ತಿಕ್ಕಾಟ ಹಾಗೂ ಸ್ವನುಡಿ-ಪರನುಡಿಗಳ ನಡುವಣ ಯಾಜಮಾನ್ಯ-ಅಧೀನ ಸಂಬಂಧಗಳನ್ನು ಆಯ್ದುಕೊಂಡಿದೆ. ನಾಗರೀಕತೆಯ ವಿಕಾಸ ಹಾಗೂ ಚರಿತ್ರೆಯ ಚಲನಶೀಲತೆ ಒದಗಿಸುವ ಕುರುಹುಗಳ ಆಧಾರದ ಮೇಲೆ, ತಾಯ್ನುಡಿ ಎನ್ನುವುದೇ ಒಂದು ಹುಸಿಕಲ್ಪನೆ 'ಮಿಸ್‌ನಾಮರ್' ಎನ್ನುವ ತಿಳುವಳಿಕೆಯೂ ಮುಂಚೂಣಿಗೆ ಬಂದಿದೆ. ಬೇರೆ ಬೇರೆ ಸಂಸ್ಕೃತಿಗಳು ವಾಸಿಸುವ ಒಂದು ಸಮುದಾಯದಲ್ಲಿ 'ತಾಯ್ನುಡಿ'ಯನ್ನು ಗುರುತಿಸುವ ತಾತ್ವಿಕ ನೆಲೆಗಳಾವವು? ಅಂತಹದೊಂದು ಸನ್ನಿವೇಶವನ್ನು ಖಚಿತವಾಗಿ ವ್ಯಾಖ್ಯಾನಿಸಬಹುದಾ? ಹೌದಾದರೆ ಹೇಗೆ? ಸಾಹಿತ್ಯಿಕ-ಭಾಷಿಕ ಚರಿತ್ರೆಗಳನ್ನು ಪರಿಶೀಲಿಸಿ ನೋಡಿದರೆ, ಎಲ್ಲಿಯೂ ಕೂಡ ತಾಯ್ನುಡಿಯನ್ನು ಖಚಿತ ಹಾಗೂ ನಿರ್ದಿಷ್ಟವಾಗಿ ವ್ಯಾಖ್ಯಾನಿಸಿದ್ದು ಕಂಡುಬಂದಿಲ್ಲ. ಹಾಗಾದರೆ, ಇಂತಹ ಒಂದು ಸಾಂಸ್ಕೃತಿಕ-ಭಾಷಿಕ ಸನ್ನಿವೇಶವನ್ನು ವಿವರಿಸುವದು ಹೇಗೆ? ಇದಕ್ಕಿರುವ ತಾತ್ವಿಕ ಸಮರ್ಥನೆಗಳೇನು? ತಾಯ್ನುಡಿಗೆ ಬದಲಾಗಿ ನಾಡುನುಡಿ, ಪರಿಸರನುಡಿ, ಮೊದಲನುಡಿ ಮುಂತಾದ ಪರಿಕಲ್ಪನೆಗಳು ಬಳಕೆಯಲ್ಲಿವೆ. ಇಂತಹ ರೂಢಿಗಳನ್ನು ಗಮನಿಸಿದಾಗ ಸ್ಪಷ್ಟವಾಗುವುದೇನೆಂದರೆ, ಈ ಪರಿಕಲ್ಪನೆ ಆಕಸ್ಮಿಕವಾಗಿ ಜಾರಿಗೆ ಬಂದಿದೆ ಎಂದು ಅನ್ನಿಸುತ್ತದೆ. ಇತ್ತೀಚಿನ ರಾಷ್ಟ್ರ-ರಾಷ್ಟ್ರೀಯತೆಯ ಕಲ್ಪನೆಯೊಂದಿಗೆ ತಾಯ್ನುಡಿ ಹಾಗೂ ತಾಯ್ನಾಡು ಎನ್ನುವಂತಹ ಮೌಲ್ಯಗಳು ಪ್ರಾಮುಖ್ಯತೆಯನ್ನು ಪಡಕೊಂಡಿರುವುದು ಗಮನಾರ್ಹ.

ರಾಷ್ಟ್ರೀಯತೆಯನ್ನು ಬೆಳಸುವ ಪ್ರಕ್ರಿಯೆಯಲ್ಲಿ ಭಾಷೆಯು ತನ್ನ ಮೂಲಭೂತ ಸ್ವರೂಪಕ್ಕಿಂತ ಬೇರೆಯೇ ರೂಪವನ್ನು ಪಡಕೊಂಡಿದೆ. ಧರ್ಮ, ಜಾತಿಗಳು ಸ್ವರೂಪವನ್ನೇ ಭಾಷೆಯೂ ಪಡಕೊಂಡಿದೆ 'ಆರೋಪಿಸಲಾಗಿದೆ'. ಧರ್ಮ ಹಾಗೂ ಜಾತಿಯೊಂದಿಗಿನ ನಂಟು ಯಾವಾಗಲೂ ಅಂಧಾನುಕರುಣೆಯಿಂದ ಕೂಡಿರುತ್ತದೆ ಎನ್ನುವ ವಾದಗಳಿವೆ. ಭಾಷೆಗೂ ಇದೇ ಸ್ಥಿತಿ ಒದಗಿದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಇದು ಹುಟ್ಟಿಸುವ ಸಾಂಸ್ಕೃತಿಕ ಅಪಾಯ ಯಾರನ್ನಾದರೂ ಘಾಸಿಗೊಳಿಸುತ್ತದೆ. ಹಾಗಾದರೆ ಭಾಷೆಯ ಮೂಲ ಸ್ವರೂಪವೇನು? ಅದು ಯಾಕೆ ಧರ್ಮ, ಜಾತಿ ಹಾಗೂ ಪ್ರಾದೇಶಿಕತೆಯಂತಹ ಮೌಲ್ಯಗಳೊಂದಿಗೆ ಸಮೀಕರಣಗೊಂಡಿದೆ. ಇಂತಹ ಸನ್ನಿವೇಶದ ಹಿಂದಿನ ತಾತ್ವಿಕ ಒತ್ತಡಗಳೇನು? ಇಂತಹ ಹಲವು ಪ್ರಶ್ನೆಗಳು ಸೂಕ್ಷ್ಮಮತಿಗಳನ್ನು ಕಾಡದೆ ಇರಲಾರವು. 'ತಾಯ್ನುಡಿ' ಹಾಗೂ 'ತಾಯ್ನಾಡು' ಮುಂತಾದ ಮೌಲ್ಯಗಳ ಹೊರಚಾಚು ಏನು? ನಾಡು-ನುಡಿಗಳ ನಡುವೆ ನಂಟು ಬೆಸೆಯುವ ನೆಲೆಗಳಾವವು? ನಾವು ಭಾರತೀಯರು ಅನ್ನುವ ಭಾವನೆ ಹಿಂದಿನ ಪ್ರೇರಣೆಗಳೇನು? ಅದೇ ನಾವು ಕನ್ನಡಿಗರು ಅನ್ನುವ ಭಾವನೆಗಳ ನೆಲೆಗಳಾವವು? ನಾಡು-ನುಡಿ ಎರಡನ್ನೂ 'ತಾಯಿ'ಗೆ ಸಮೀಕರಿಸಿಕೊಂಡು ಆರಾಧಿಸುವ ಬಗೆಯೇ ಒಂದು ರಾಜಕೀಯ ಹುನ್ನಾರದಂತೆ ಕಾಣುತ್ತದೆ. ನಾವು ಭಾರತೀಯರು ಎನ್ನುವುದು ಕೇವಲ ರಾಜಕೀಯ ಒಗ್ಗಟ್ಟಿನ ನಂಬಿಕೆಯಾದರೆ, ಅದನ್ನು 'ತಾಯ್ನಾಡು' ಎಂದು ಕರೆಯುವ ಜರೂರು ಏನಿತ್ತು? ಇದು ಕೇವಲ ರಾಜಕೀಯ ಪ್ರೇರಿತ ಮೌಲ್ಯವಾದರೆ, ಇದಕ್ಕೆ ಜನಸಾಮಾನ್ಯರು ಇಷ್ಟೊಂದು ಗೌರವ ತೋರಿಸುವ ಅಗತ್ಯವಿರಲಿಲ್ಲ ಎಂದು ಕಾಣುತ್ತದೆ.

ನಾಡು-ನುಡಿಗಳ ನಡುವೆ ಸಾಂಸ್ಕೃತಿಕ ಹೊಂದಾಣಿಕೆಯ ಕೊರತೆ ಇದ್ದೇ ಇರುತ್ತದೆ. ಇದಕ್ಕೆ ಸಾಕಷ್ಟು ನಿದರ್ಶನಗಳು ನಮ್ಮ ಚರಿತ್ರೆಯಲ್ಲಿಯೇ ಸಿಗುತ್ತವೆ. ಕುತೂಹಲದ ಸಂಗತಿ ಏನೆಂದರೆ ನಾಡು ಬಹುತ್ವತೆಯ ಸಂಕೇತವಾದರೆ ನುಡಿ ಏಕತೆಯ ಸಂಕೇತವಾಗಿರುತ್ತದೆ. ವಾಸ್ತವದಲ್ಲಿ ನಾಡು-ನುಡಿಗಳ ನಡುವೆ ನಿರಂತರ ಗುದ್ದಾಟವಿರುತ್ತದೆ. ಇದು ದಿನವೂ ನಮ್ಮ ಕಣ್ಣಿಗೆ ರಾಚುವ ಸತ್ಯ ಉದಾಹರಣೆಗೆ ಮಹಾರಾಷ್ಟ್ರ, ಕರ್ನಾಟಕ, ಗೋವಾ ಮುಂತಾದ ರಾಜ್ಯಗಳಲ್ಲಿ ನಡೆಯುವ ಬೆಳವಣಿಗೆಗಳನ್ನು ನೆನಪಿಸಿಕೊಳ್ಳಬಹುದು. ಈ ನಾಡು-ನುಡಿಗಳ ನಡುವೆ ಏಕತೆ ಬೆಸೆಯುವ ಕ್ರಮಗಳಲ್ಲೇ ದ್ವಂದ್ವವಿದೆ ಎಂದು ತೋರುತ್ತದೆ. ಕರ್ನಾಟಕ ಅಥವಾ ಮಹಾರಾಷ್ಟ್ರಗಳು ಒಂದೊಂದು ನಾಡಾದರೆ, ಆ ನಾಡುಗಳಲ್ಲಿ ವಾಸಿಸುವ ಎಲ್ಲ ಜನಸಮೂಹದ ತಾಯ್ನುಡಿ ಕನ್ನಡ/ಮರಾಠಿ ಮಾತ್ರವೇ ಅಲ್ಲ ಅನ್ನುವುದು ಗಮನಾರ್ಹ. ಅಂದರೆ ಕನ್ನಡಿಗ-ಕರ್ನಾಟಕ ಹಾಗೂ ಮರಾಠಿಗ- ಮಹಾರಾಷ್ಟ್ರ ಇವರ ನಡುವೆ ಸಾಮರಸ್ಯಕ್ಕಿಂತ ಸಂಘರ್ಷದ ಪ್ರಮಾಣವೇ ಜಾಸ್ತಿ ಇದೆ.

ತಾಯ್ನುಡಿ ಕುರಿತು ಸಾಕಷ್ಟು ನಂಬಿಕೆಗಳು ಹುಟ್ಟಿಕೊಂಡಿವೆ. ಅವುಗಳಂದರೆ, ತಾಯ್ನುಡಿ ಅದು ಜನಾಂಗಗಳ ಸ್ಮೃತಿಕೋಶವಾಗಿದೆ. ಅವರ ಲೋಕಗ್ರಹಿಕೆಯನ್ನು ರೂಪಿಸಿಕೊಳ್ಳುವ ಹಾಗೂ ಅವರ ಸಂವೇದನಾ ಪ್ರಕ್ರಿಯೆಯನ್ನು ಕಟ್ಟಿಕೊಳ್ಳುವ ಕ್ರಮ ಆ ತಾಯ್ನುಡಿಯಿಂದಲೇ ಸಾಧ್ಯ. ಜಗತ್ತಿನ ಎಲ್ಲ ಬಗೆಯ ತಿಳುವಳಿಕೆಯನ್ನು ಪಡೆಯುವ ಪ್ರಕ್ರಿಯೆಯಲ್ಲಿ ತಾಯ್ನುಡಿ ಬೆಳಕಿಂಡಿಯಾಗಿದೆ. 'ಇಂಗ್ಲಿಶ್ ಹಾಗೂ ಸಂಸ್ಕೃತದಂತಹ ಅಧಿಕಾರಸ್ಥ ಭಾಷೆಗಳು ಮಾತ್ರ ಜ್ಞಾನದ ಬೆಳಕಿಂಡಿಗಳು ಎನ್ನುವ ನಂಬಿಕೆಗಳೇ ನೆಲೆಯೂರಿದ್ದವು. ಅಂತಹ ಸನ್ನಿವೇಶದಲ್ಲಿ ಕನ್ನಡದಂತಹ ದೇಶೀ ಭಾಷೆಗಳು ಗೋಡೆಯಾಗಿ ಪರಿಣಮಿಸಿದ್ದೇ ಹೆಚ್ಚು' ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇದು ಸಮುದಾಯದ ಅನುಭವವನ್ನು ಚಾರಿತ್ರಿಕವಾಗಿ, ಪಾರಂಪರಿಕವಾಗಿ ತನ್ನ ಸ್ಮೃತಿಕೋಶಗಳಲ್ಲಿ ಅಂತಸ್ಥಗೊಳಿಸಿರುತ್ತದೆ. ಆಯಾ ಸಂಸ್ಕೃತಿಯ ರಚನೆಗಳು ಆಯಾ ತಾಯ್ನುಡಿಯೊಂದಿಗೆ ಬೆಸೆದುಕೊಂಡಿರುತ್ತವೆ. ಸಾಂಸ್ಕೃತಿಕ ಹಾಗೂ ಸಂವಹನ ರಚನೆಗಳು ಏಕತ್ರಗೊಂಡಿರುತ್ತವೆ. ಭಾಷೆ ಪ್ರತಿಯೊಂದು ಸಮುದಾಯದ 'ಅನುಭವ'ವನ್ನು ಚಲನಶೀಲಗೊಳಿಸುತ್ತದೆ ಎನ್ನುವ ತಿಳುವಳಿಕೆ ಬಲವಾಗಿರುವುದೇ ಈ ಎಲ್ಲ ನಂಬಿಕೆಗಳಿಗೆ ಕಾರಣ. ಇದೊಂದು ಹುಸಿ ನಂಬಿಕೆ ಎಂದು ನನ್ನ ವಾದವಲ್ಲ. ಏನೆಂದರೆ ಭಾಷೆ ಹಾಗೂ ಸಂಸ್ಕೃತಿಗಳ ನಡುವಣ ನಂಟು ಆಕಸ್ಮಿಕ ಮತ್ತು ಅನುಕೂಲಾತ್ಮಕವಾದದ್ದು ಎನ್ನುವುದು ಕೂಡ ಸತ್ಯ. ಪ್ರತಿಯೊಂದು ಭಾಷೆಯು ಯಾವುದೇ ಆಶಯವನ್ನು ಕಟ್ಟಿಕೊಡುವ ಶಕ್ತಿಯನ್ನು ಹೊಂದಿರುತ್ತದೆ. ಯಾವುದು ಮನುಷ್ಯನ ಅನುಭವಕ್ಕೆ ಅಥವಾ ಗ್ರಹಿಕೆಗೆ ದಕ್ಕಲಾರದೋ ಅದು ಭಾಷೆಯಲ್ಲಿ ಪ್ರಕಟಗೊಳ್ಳಲಾರದು. ಇದು ಭಾಷೆಗಿರುವ ಮಿತಿಯಲ್ಲ. ಮನುಷ್ಯನ ಗ್ರಹಿಕೆಗಿರುವ ಮಿತಿಯೆನ್ನುವುದು ಗಮನಾರ್ಹ. ಸಾಮಾನ್ಯವಾಗಿ ಮನುಷ್ಯನ ಅಭಿವ್ಯಕ್ತಿಗೆ ದಕ್ಕದ ಅನುಭವವನ್ನು ಅವನಾಡುವ ಭಾಷೆಗಿರುವ ಮಿತಿಯೆಂದು ಆರೋಪಿಸಲಾಗಿದೆ. ಅದೇನೆಂದರೆ ಭಾಷೆ ಮನುಷ್ಯನ ಪ್ರತಿ ಅನುಭವವನ್ನು ವ್ಯಕ್ತಪಡಿಸಲಾರದು ಎಂಬ ಸರಳ ನಂಬಿಕೆಯೊಂದು ಜಾರಿಯಲ್ಲಿದೆ. ಮನುಷ್ಯ ತಾನು ಏನನ್ನು ತನ್ನ ಅನುಭವದ ಭಾಗವನ್ನಾಗಿ ಪಡೆದುಕೊಳ್ಳುತ್ತಾನೋ, ಅದು ಭಾಷೆಯ ಮುಖಾಂತರ ಅನುವಾದಗೊಂಡು ವ್ಯಕ್ತವಾಗುತ್ತದೆ. ಅಮೂರ್ತತೆ ಹಾಗೂ ಮೂರ್ತತೆ ಅನ್ನುವುದು ಭಾಷೆಗೆ ಇರುವ ಸಹಜ ಹಾಗೂ ಅಂತಸ್ಥ ಗುಣವಲ್ಲ. ಇದೊಂದು ಆರೋಪಿತ ಗುಣಮಾತ್ರ. ಒಂದು ಸಾಮಾಜಿಕ ಸನ್ನಿವೇಶದಲ್ಲಿ ಯಾವ ಭಾಷೆಯೊಂದಿಗೆ ಮಗು/ಮನುಷ್ಯ ತನ್ನ ಅನುಭವವನ್ನು ಒಗ್ಗಿಕೊಳ್ಳುತ್ತಾನೋ ಅದು ಅವಳ/ನ ಅನುಭವದ ಪ್ರತಿ ಆಶಯವನ್ನು ವ್ಯಕ್ತಪಡಿಸುವ ಅಭಿವ್ಯಕ್ತಿ ಮಾಧ್ಯಮವಾಗುತ್ತದೆ. ಇದೆಲ್ಲದಕ್ಕಿಂತಲೂ ಹೆಚ್ಚಾಗಿ ತಾಯ್ನುಡಿಯು ಅವಳ/ನ ಸಾಂಸ್ಕೃತಿಕ ಹಾಗೂ

ಸೃಜನಶೀಲ ಸಂವೇದನೆಯನ್ನು ಪ್ರತಿನಿಧಿಸುವ ಮಾಧ್ಯಮವೂ ಆಗಿ ದಕ್ಕುತ್ತದೆ. ಹಾಗಾಗಿ ಭಾಷೆ ಮತ್ತು ಮಾನವ ಸಮುದಾಯಗಳ ನಡುವೆ ಒಂದು ಅವಿನಾಭಾವದ ನಂಟು ಏರ್ಪಡುವುದೆಂದು ಅನ್ನಿಸುತ್ತದೆ. ಈ ಅನುಭವವು ಭಾಷೆ ಮತ್ತು ಸಮುದಾಯದ ನಿರಂತರ ಸಾತತ್ಯದ ಫಲವೂ ಆಗಿದೆ ಅನ್ನುವುದು ದಿಟ. ಇಂತಹ ವಾದಗಳು ಮಂಡಿಸುವ ಚಿಂತನೆಗಳಿಂದ ಯಾವ ಪ್ರಯೋಜನವು ಇಲ್ಲವೆಂದರೆ, ಇದು ಸಾಂಸ್ಕೃತಿಕ ಗಾಭರಿತನಕ್ಕೆ ಸಾಕಷ್ಟು ಅವಕಾಶ ನೀಡುತ್ತದೆ ಎನ್ನುವುದರಲ್ಲಿ ಸಂದೇಹವೇ ಇಲ್ಲ.

ಲಿಂಗಭೇದ, ವರ್ಗ-ವರ್ಣಭೇದ ಮುಂತಾದ ತರತಮ ಭೇದಗಳು ಸಾಮಾಜಿಕ ಕಾರಣಗಳಿಂದ ಭಾಷೆಯಲ್ಲಿ ಮಿಳಿತಗೊಂಡಿವೆ. ಭಾಷೆ ಇವೆಲ್ಲವನ್ನೂ ಪ್ರತಿನಿಧಿಸುವ ಕಾರಣ, ಭಾಷೆಗೆ ಇಂತಹದೊಂದು ಗುಣ ಇರುತ್ತದೆ ಎಂಬ ನಂಬಿಕೆ. ಈ ಕಾರಣಗಳಿಂದಲೇ ಸಪೀರ್-ವೂರ್ಫ್ ಅವರು ಮಂಡಿಸುವ ''ಭಾಷೆ 'ಶಾಯ್ನುತಿ' ಮತ್ತು ಸಂಸ್ಕೃತಿಗಳ ನಡುವೆ ಲೋಕಗ್ರಹಿಕೆ''ಯನ್ನು ರೂಪಿಸುವ ನಂಟಿರುತ್ತದೆ ಎನ್ನುವ ವಾದದಲ್ಲಿ ಮಿತಿಗಳಿವೆ ಎನ್ನುವುದು ದೃಢಪಟ್ಟಿದೆ. ಅನುಭವ ರೂಪುಗೊಳ್ಳುವ ನೆಲೆಗಳು ಕೇವಲ ಭಾಷಿಕ ಸಂವೇದನೆಯಿಂದ ಕೂಡಿದವುಗಳಲ್ಲ. ಅವು ಸಾಮಾಜಿಕ-ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಅಂತಸ್ಥವಾಗಿರುತ್ತವೆ. ಅದಕ್ಕಾಗಿ ಯಾವುದೇ ಭಾಷೆಯ ಸಾಹಿತ್ಯವು ಏಕೀಕೃತ ಅನುಭವದ ಮೊತ್ತವಾಗಿರಲಾರದು. ಅದು ಯಾವಾಗಲೂ ಬಹುತ್ವತೆಯ ಆಗರವಾಗಿರುತ್ತದೆ. ಅದಕ್ಕಾಗಿಯೇ ಕನ್ನಡ ಸಾಹಿತ್ಯದಲ್ಲಿ ಜೈನ, ವೈದಿಕ, ಶೂದ್ರ-ದಲಿತ, ಮುಸ್ಲಿಮ್ ಮುಂತಾದ ಬಗೆಯಲ್ಲಿ ಸಂವೇದನೆಯನ್ನು ವಿಭಜಿಸಲಾಗಿದೆ ಎಂದು ತೋರುತ್ತದೆ. ಇದು ಕೇವಲ ಅಧ್ಯಯನದ ಅನುಕೂಲಕ್ಕಾಗಿ ಮಾತ್ರವಲ್ಲ ಅದುವೇ ವಾಸ್ತವವೆಂದು ನಂಬಲಾಗಿದೆ. ಆದರೆ ಈ ಎಲ್ಲ ಬಗೆಯ ಸಂವೇದನೆಯನ್ನು ಅಭಿವ್ಯಕ್ತಿಪಡಿಸುವ ಮಾಧ್ಯಮ ಮಾತ್ರ ಕನ್ನಡವಾಗಿದೆ. ಇಂಗ್ಲಿಶ್ ಭಾಷೆಯಲ್ಲಿ ಬೇರೆ ಸಂಸ್ಕೃತಿಗಳ ಮೂಲದಿಂದ ಬಂದಿರುವ ಸಾಹಿತ್ಯವನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಈ ಕಾರಣಗಳ ಪರಿಣಾಮವಾಗಿ, ಪ್ರತಿಯೊಂದು ಭಾಷೆಯಲ್ಲಿ ಭಿನ್ನತೆ, ವೈವಿಧ್ಯತೆ ಹಾಗೂ ಸಾಂಸ್ಕೃತಿಕನಿಷ್ಠ ಪ್ರಜ್ಞೆ ರೂಪಗೊಂಡಿರುತ್ತದೆ. ಒಂದು ಸಮುದಾಯದ ಎಲ್ಲ ಜನ, ಜನಾಂಗ, ವರ್ಗಗಳ ನಡುವೆ ಸಂವಹನದ ತೊಡಕು ಉಂಟಾಗಬಾರದು ಎನ್ನುವ ಕಾರಣಕ್ಕೆ ಭಾಷೆಗೆ ಒಂದು ಸಾರ್ವತ್ರಿಕತೆಯನ್ನು ರೂಪಿಸಲಾಗಿದೆ. ಇದನ್ನೂ ಮೀರಿ ಭಾಷೆಯಲ್ಲಿ ತೊಡಕುಗಳು ಉಳಿದುಕೊಂಡಿರುತ್ತವೆ ಎನ್ನುವುದು ಕುತೂಹಲವನ್ನು ಹುಟ್ಟಿಸುತ್ತದೆ. ಭಾಷೆ ತನ್ನ ವೈವಿಧ್ಯತೆ-ಭಿನ್ನತೆಗಳ ನಡುವೆಯೂ ಸಾರ್ವತ್ರಿಕತೆಯನ್ನು ಕಾಪಾಡುವ ಹಾಗೂ ಸಮನ್ವಯಗೊಳಿಸುವ ಗುದ್ದಾಟಗಳು ನಿರಂತರವಾಗಿರುತ್ತವೆ. ಇಂತಹದೊಂದು ಬೆಳವಣಿಗೆಯೇ ವಿಚಿತ್ರವಾದದ್ದು. ಮತ-ಧರ್ಮಗಳ ಕುರಿತ ಅಂಧಾನುಕರಣೆ ಸಮಾಜದ ಐಕ್ಯತೆಗೆ ಧಕ್ಕೆ ಉಂಟುಮಾಡಿದಂತೆ, ಭಾಷೆಯೂ ಸಮುದಾಯದ ಒಗ್ಗಟ್ಟಿಗೆ ತೊಡಕಾಗಿದೆ. ಇದಕ್ಕೆ ಸಾಕಷ್ಟು ಪುರಾವೆಗಳು ನಮ್ಮ ಚರಿತ್ರೆಯಲ್ಲಿಯೇ ಸಿಗುತ್ತವೆ. ಮನುಷ್ಯನ ಸಾಮಾಜಿಕ ಅಸ್ತಿತ್ವದ ಆಧಾರದ ಮೇಲೆ ಭಾಷೆಯ ಅಸ್ತಿತ್ವ ನಿರ್ಧಾರವಾಗುತ್ತದೆ. ಇಂತಹ ಭಾಷಿಕ-ಸಾಮಾಜಿಕ ಆಕೃತಿಗಳು ಸಮುದಾಯದ ಪ್ರಜ್ಞೆಗೆ ಇಂಬು ಕೊಡದೇ, ಸಮುದಾಯವನ್ನು ವಿಭಜಿಸುವುದಕ್ಕೆ ಪ್ರೇರಣೆಯನ್ನು ನೀಡಿವೆ. ಈ ಬೆಳವಣಿಗೆಗಳು ಕನ್ನಡದಂತಹ ಭಾಷೆಯ ಚಹರೆಗಳೂ ಕೂಡ ಅಂಚಿಗೆ ಸರಿಯುತ್ತವೆ ಎಂಬ ಆತಂಕಕ್ಕೆ ಎಡೆಮಾಡಿ ಕೊಟ್ಟಿವೆ. ಇಂತಹ ಆತಂಕಗಳಿಗೆ ಯಾವುದೇ ವೈಜ್ಞಾನಿಕ ಕಾರಣಗಳಿಲ್ಲ ಎನ್ನುವುದು ದಿಟ. ಆದರೆ, ಇದು ಕೇವಲ ರಾಜಕೀಯ ಪ್ರೇರಿತ ಸಂಘಟನೆಗಳು ಹುಟ್ಟು ಹಾಕುವ ಹುನ್ನಾರ ಮಾತ್ರ. ಇಂತಹ ಭಾಷಾ ರಾಜಕಾರಣದ ಹಿಂದಿನ ಒತ್ತಡ, ಪ್ರೇರಣೆಗಳನ್ನು ತಾತ್ವಿಕವಾಗಿ ವಿಶ್ಲೇಷಿಸಬೇಕಿದೆ. ಜನಸಾಮಾನ್ಯರು ಭಾಷೆಯನ್ನು ಒಂದು ಸಾಂಸ್ಕೃತಿ-ಸಾಮಾಜಿಕ ಮೌಲ್ಯವಾಗಿ ಪರಿಗಣಿಸಿದ್ದೇ ಇಂತಹ ಭಾಷಿಕ ಬಿಕ್ಕಟ್ಟುಗಳಿಗೆ ಕಾರಣ. ಭಾಷಿಕ ಅಗತ್ಯಗಳು ಕಾಲ-ದೇಶಕ್ಕೆ

ಅನುಗುಣವಾಗಿ ಬೇರೆಯಾಗಿರುವುದರಿಂದ, ಕೆಲವು ಆಸಕ್ತ ವರ್ಗಗಳು ತಮಗೆ ಪೂರಕವಾಗುವ ಆಶಯಗಳನ್ನು ತಾಯ್ನುಡಿ, ದೇವನುಡಿ, ರಾಷ್ಟ್ರನುಡಿ ಎಂಬ ಅಭಿಮಾನವನ್ನು ಪ್ರಚೋದಿಸಲು ಹವಣಿಸುತ್ತವೆ. ಇಂತಹ ಪ್ರಯತ್ನಗಳಿಗೆ ಸಾಂಸ್ಥಿಕ ಬೆಂಬಲ ದೊರೆಯುವುದರಿಂದ, ನಾಡು-ನುಡಿಯ ಕುರಿತ ಅತಿರೇಕದ ಧೋರಣೆಗಳು ಕೂಡ ಸಮುದಾಯ ಹಾಗೂ ಸಂವಿಧಾನದ ಮನ್ನಣೆಯನ್ನು ಪಡೆದುಕೊಳ್ಳುತ್ತವೆ. ಈ ಬಗೆಯ ಭಾಷಿಕ ಆಕೃತಿಗಳು ಪಟ್ಟಭದ್ರ ಹಿತಾಸಕ್ತಿ ಹಾಗೂ ಶಕ್ತಿ ರಾಜಕಾರಣದ ಗುಂಪುಗಳನ್ನು ಕೂಡ ಮೌಲ್ಯೀಕರಣಗೊಳಿಸುತ್ತವೆ. ವಿಪರ್ಯಾಸ ಏನೆಂದರೆ ಇಂತಹ ರಾಜಕೀಯ ಪ್ರೇರಿತ ಧೋರಣೆಗಳು ಅನುಭಾವದ ನೆಲೆಗಳನ್ನೂ ಪಡೆದುಕೊಳ್ಳುತ್ತವೆ. ಮುಂದೊಂದು ದಿನ ಇವೇ ಚಿಂತನೆಗಳು ಭಾಷಿಕ ಕ್ರಾಂತಿ ಅಥವಾ ರಾಷ್ಟ್ರೀಯತೆಯ ಚಿಂತನೆಗಳ ಸ್ವರೂಪವನ್ನು ಪಡೆಯುತ್ತವೆ. ನಾಡು-ನುಡಿ ಕುರಿತ ಚಿಂತನೆಗಳು ತೋರಿಕೆಯ ರಾಷ್ಟ್ರೀಯತೆಯನ್ನು ನಟಿಸುತ್ತವೆ ಎಂದು ಕಾಣುತ್ತದೆ. ಈ ತೋರಿಕೆಯ ಭಾಷಾಭಿಮಾನವು ಬೇರೆ ಭಾಷೆಗಳನ್ನು ಅಸಡ್ಡೆಯಿಂದ ಹಾಗೂ ಉಪೇಕ್ಷೆಯಿಂದ ಕಾಣುತ್ತವೆ. ಇದು ಭಾಷಿಕ-ಸಾಂಸ್ಕೃತಿಕ ಅಸಹನೆಗೆ ಕಾರಣವಾಗುತ್ತದೆ. ಇದು ಎಂತಹ ಸಾಂಸ್ಕೃತಿಕ ಅಪಾಯವನ್ನು ಹುಟ್ಟು ಹಾಕಬಹುದೆಂದು ಯಾರಿಗಾದರೂ ಅಚ್ಚರಿಯಾಗುತ್ತದೆ.

ದ್ರಾವಿಡ ನುಡಿಗಳು ಒಂದೇ ಕುಲಕ್ಕೆ ಸೇರಿದವುಗಳಾದರೂ ಈ ಕುಲದ ಬೇರೆ ಬೇರೆ ನುಡಿಗಳ ನಡುವೆ ಯಾಕೆ ತರತಮ ಭಾವನೆಯನ್ನು ಹುಟ್ಟಿಸಿಕೊಂಡು, ದಾಯಾದಿ ಮತ್ಸರವನ್ನು ಬೆಳೆಸುತ್ತಾರೆ. ದಾಯಾದಿ ಮತ್ಸರ ಕೇವಲ ಆಸ್ತಿ ಹಂಚಿಕೆಯ ಕುರಿತದ್ದು ಮಾತ್ರವಲ್ಲ. ಅದು ಅಸ್ತಿತ್ವದ ಪ್ರಶ್ನೆಯೂ ಆಗಿರುತ್ತದೆ. ತಮ್ಮ ತಮ್ಮ ಗುರುತುಗಳನ್ನು ಹೆಚ್ಚು ಹೆಚ್ಚು ಗಟ್ಟಿಗೊಳಿಸುವ ಹಂಬಲದಲ್ಲಿರುತ್ತವೆ ಎನ್ನುವುದು ವಿಶೇಷ. ಇಂತಹ ಸ್ಪರ್ಧಾತ್ಮಕ ಧೋರಣೆಯು ಸಂಘರ್ಷಕ್ಕೆ ಎಡೆಮಾಡಿಕೊಡುತ್ತದೆ. ಈ ಬೆಳವಣಿಗೆಗಳು ತಮ್ಮ ತಮ್ಮ ಕುಲ ಸಂಬಂಧದ ನೆನಪುಗಳನ್ನು ಕೂಡ ಕಮರಿಸುತ್ತವೆ. ಈ ಬಗೆಯ ಭಾಷಿಕ ಹುನ್ನಾರ ನಿರಂತರವಾಗಿ ದ್ರಾವಿಡ ನುಡಿ ಸಮುದಾಯದಲ್ಲಿ ನಡದಿವೆ. ಇದು ಹೆಚ್ಚು ಕನ್ನಡ ಮತ್ತು ತಮಿಳು ನುಡಿಗಳ ನಡುವೆ ನಡೆದಿದೆ ಎಂದು ಹೇಳಬಹುದು. ಇವು ಕಲ್ಪಿತ ಗಡಿಗಳ ನಿರ್ಮಾಣಕ್ಕೂ ಕುಮ್ಮಕ್ಕು ನೀಡುತ್ತವೆ. ವಿಚಿತ್ರವೇನೆಂದರೆ, ಬೇರೆ ಕುಲಕ್ಕೆ ಸೇರಿದ ಭಾಷೆಯನ್ನು ಕನ್ನಡ ತನ್ನ ತಲೆಯ ಮೇಲೆ ಹೊತ್ತುಕೊಂಡು ಪೂಜಿಸಿದ ನಿದರ್ಶನಗಳಿಗೇನು ಕೊರತೆಯಿಲ್ಲ. ಇದಕ್ಕೆ ಕುಮ್ಮಕ್ಕು ನೀಡಿದ ಶಕ್ತಿಗಳು, ತಮ್ಮ ಭಾಷೆಯನ್ನು ದೈವಭಾಷೆ, ಧರ್ಮಭಾಷೆ ಎಂಬ ಮುಂತಾದ ಭ್ರಮೆಗಳನ್ನು ಹುಟ್ಟಿಸಿ ತಮ್ಮ ಪ್ರಾಬಲ್ಯವನ್ನು ಮೆರೆದಿವೆ. ಹಾಗಾಗಿ ದ್ರಾವಿಡ ಕುಲದ ನುಡಿಗಳು ತಮ್ಮ ದಾಯಾದಿ ಮತ್ಸರದಿಂದ ಸಂಸ್ಕೃತದಂತಹ ಭಾಷೆಗಳನ್ನು ಪೂಜ್ಯಭಾವದಿಂದ ಕಾಣುವ ದಾಸ್ಯಕ್ಕೆ ಶರಣಾಗಿರುವುದು ಚಾರಿತ್ರಿಕ ವಿಪರ್ಯಾಸವೇ ಸರಿ. ಮುಖ್ಯವಾಗಿ ಅಂದಿನ ಅಗತ್ಯದ ಪ್ರಶ್ನೆ ಸಂಸ್ಕೃತವನ್ನು ಜನಪ್ರಿಯಗೊಳಿಸುವುದಾಗಿತ್ತು. ಸಂಸ್ಕೃತ ಅದನ್ನು ಆಡುವ ಜನಾಂಗವಿಲ್ಲದ್ದರಿಂದ, ಇದೊಂದು 'ಮೃತ ಭಾಷೆ' ಎಂದೆನಿಸಿಕೊಂಡಿದೆ. ಆದಾಗ್ಯೂ ಸಂಸ್ಕೃತ ಭಾಷೆಯನ್ನು ಎಂದೆಂದಿಗೂ ನಮ್ಮ ದೇಶೀ ಭಾಷೆ ಸಂಸ್ಕೃತಿಗಳಿಗೆ ಉಪಯುಕ್ತವಾದ ಉಪಕಾರಿಯಾದ ಭಾಷೆಯನ್ನಾಗಿ ಬಿಂಬಿಸುವ ಹುನ್ನಾರ ನಡೆಯುತ್ತಲೇ ಬಂದಿದೆ.

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಉದ್ಧಾರಕ್ಕೆ ಶ್ರಮಿಸಿದ ಕೆಲ ಧರ್ಮಗಳು ಈಗ ಚರಿತ್ರೆಯ ನೆನಪು ಮಾತ್ರ. ಸಂಸ್ಕೃತ ಭಾಷೆಯು ಕನ್ನಡದಂತಹ ಪ್ರಾದೇಶಿಕ ಭಾಷೆಗಳಿಗೆ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಾಮರ್ಥ್ಯವನ್ನು ಸಿದ್ಧಿಸಿದೆ ಎನ್ನುವ ದೃಢ ನಂಬಿಕೆಗಳು ಬೇರು ಬಿಟ್ಟಿವೆ. ಇಂತಹ ನಂಬಿಕೆಗಳನ್ನು ಸಾಬೀತುಪಡಿಸುವ ಅಧ್ಯಯನಗಳು ಶೆಲ್ಡನ್ ಪೊಲಾಕ್‌ರಂತಹ 'ಪರದೇಶಿ' ವಿದ್ವಾಂಸರಿಂದ ನಡದಿವೆ.

ವಿಶೇಷವೇನೆಂದರೆ, ಈ ಅಧ್ಯಯನಗಳು ಸಂಸ್ಕೃತ ಭಾಷೆಯು ''ಕನ್ನಡ ನುಡಿಗೆ ವಿಶ್ವಾತ್ಮಕ ಚಹರೆಯನ್ನು ತಂದುಕೊಟ್ಟಿದೆ'' ಇದಕ್ಕಾಗಿಯೇ ಸಂಸ್ಕೃತವು ಸ್ವೀಕರಣಗೊಂಡಿದೆ ಎಂಬ ವಾದಗಳನ್ನು ಮಂಡಿಸುತ್ತವೆ. ಇಂತಹ ವಿಧೇಯಕ ಮಾತುಗಳ ಹಿಂದಿನ ಮರ್ಮವೇನೆಂದರೆ ಸಂಸ್ಕೃತ ತಾನೊಂದು ಪರೋಪಕಾರಿ ಭಾಷೆಯೆಂದು ಗುರುತಿಸಿಕೊಳ್ಳುವ ಭಾಷಾ ರಾಜಕಾರಣವೆಂದೇ ಹೇಳಬೇಕು. ಜಾಗತೀಕರಣ ಸಂದರ್ಭದಲ್ಲಿ ಸಂಸ್ಕೃತವು ಹೇಗೆ ದಕ್ಷಿಣ ಏಶಿಯಾ ದೇಶಗಳಲ್ಲಿ ಹರಡಿಕೊಂಡಿತ್ತು ಅನ್ನುವುದನ್ನು ವಿವರಿಸುವುದಕ್ಕೆ ಈ ಅಧ್ಯಯನಗಳು ಬೆಳಕಿಗೆ ಬಂದಿವೆ. ಇದೊಂದು ತೋರಿಕೆಯ ನಂಬಿಕೆಯಾಗಿತ್ತು. ಆದರೆ ಅವುಗಳ ಒಳಉದ್ದೇಶ ಮಾತ್ರ ಈ ಭಾಷೆಯು ತನ್ನ ಯಾಜಮಾನ್ಯ ಹಾಗೂ ಪ್ರಾಬಲ್ಯದ ನೆಲೆಗಳನ್ನು ಗುರುತಿಸುವ ಹುನ್ನಾರವೇ ಆಗಿತ್ತು ಅನ್ನುವುದು ಸ್ಪಷ್ಟ. ಈ ಒಳ ಉದ್ದೇಶಗಳು ಸಂಸ್ಕೃತ ಮತ್ತು ಕನ್ನಡದ ನಡುವೆ ಯಾಜಮಾನ್ಯ-ಅಧೀನ ನೆಲೆಯ ಸಂಬಂಧವಿದೆ ಎಂದು ಜಗತ್ತಿಗೆ ಸಾರಿ ಹೇಳಬೇಕಾಗಿತ್ತು. ಇದು ವೈದಿಕಧರ್ಮದ ನಾಜೂಕಿನ ಸಾಂಸ್ಕೃತಿಕ ರಾಜಕಾರಣದ ಮತ್ತೊಂದು ಮುಖವೆಂದೇ ಹೇಳಬೇಕು. ಕನ್ನಡವು ಪ್ರಾಕೃತ, ಪರ್ಷಿಯನ್ ಮುಂತಾದ ಭಾಷೆಗಳ ಪದಸಂಪನ್ಮೂಲವನ್ನು ತನ್ನ ಒಡಲಲ್ಲಿಯೇ ಅಡಗಿಸಿಕೊಂಡಿದೆ. ಇಂತಹ ಭಾಷಿಕ-ಪ್ರಕ್ರಿಯೆಯನ್ನು ಮರೆಮಾಚಿ, ಯಾವುದೇ ಒಂದು ಪ್ರತಿಷ್ಠಿತ ಧರ್ಮದ ಕಪಿಮುಷ್ಠಿಯಲ್ಲಿರುವ ಸಂಸ್ಕೃತ ಭಾಷೆ ತನ್ನ ಪ್ರಾಮುಖ್ಯತೆ ಪಡೆದಿದೆ. ಇದು ಭಾಷಿಕ-ಸಾಂಸ್ಕೃತಿಕ ಬಹುತ್ವತೆಯ ಚರಿತ್ರೆಗೆ ಮಾಡಿದ ಅಪಚಾರವೆಂದೇ ಹೇಳಬೇಕು. ಇಂತಹ ನಿದರ್ಶನಗಳು ಭಾರತದ ಚರಿತ್ರೆ ಏಕಪಕ್ಷವಾಗಿದೆ ಅನ್ನುವುದನ್ನು ವಿಜಿತಪಡಿಸುತ್ತವೆ. ಇದರಿಂದ ಯಾರಿಗೆ ಹಾನಿಯಾಗುತ್ತದೆ ಎನ್ನುವ ಪ್ರಶ್ನೆ ಎದುರಾದಾಗ, ಉತ್ತರಿಸುವ ಮನಸ್ಸುಗಳು ಹಲವು ಮೂಲಗಳಲ್ಲಿ ಹರಡಿಕೊಳ್ಳುತ್ತವೆ. ಏಕೆಂದರೆ, ಚರಿತ್ರೆಯ ಹುನ್ನಾರಗಳನ್ನು ವಿವರಿಸುವ ಆಕೃತಿಗಳು ಬೇರೆ ಬೇರೆ ನೆಲೆಯಿಂದ ಕೂಡಿರುವುದೇ ಇದಕ್ಕೆ ಕಾರಣ.

ಒಂದು ಸಮುದಾಯದ ಬೇಡಿಕೆಗಳನ್ನು ಈಡೇರಿಸುವ ಹೊಣೆ ಅವರಾಡುವ ಭಾಷೆಯ ಮೇಲೆ ಇರುತ್ತದೆ ಅನ್ನುವುದು ರುಜುವಾತುಪಟ್ಟಿದೆ. ಇದಕ್ಕೆ ಅನುಕೂಲ ಮಾಡಬೇಕಾದ ಪ್ರಭುತ್ವ ಅಥವಾ ಅಧಿಕಾರ ವರ್ಗ ಎಷ್ಟರ ಮಟ್ಟಿಗೆ ಜನಪರ ಕಾಳಜಿ ವಹಿಸುತ್ತವೆ ಅನ್ನುವುದು ಮುಖ್ಯ. ಪ್ರಭುತ್ವವು ಸಂಸ್ಕೃತ ಭಾಷೆಯ ಪರವಾಗಿ ತಳೆಯುವ ನಿಲುವುಗಳನ್ನು, ಕೊಂಕಣಿ, ತುಳು, ಕೊಡವ ಹಾಗೂ ಉರ್ದುದಂತಹ ಸಾಮಾನ್ಯ ಜನರ ಭಾಷೆಗಳ ಪರವಾಗಿ ಯಾಕೆ ತಾಳುವುದಿಲ್ಲ ಅನ್ನುವ ಪ್ರಶ್ನೆಗಳು ಸಹಜವಾಗಿಯೇ ಸಂಸ್ಕೃತ ವಿಶ್ವವಿದ್ಯಾನಿಲಯ ಸ್ಥಾಪಿಸುವ ಈ ಹೊತ್ತಲ್ಲಿ ಹುಟ್ಟುತ್ತವೆ. ಯಾರು ಯಾವ ಭಾಷೆಯನ್ನು ಪ್ರತಿನಿಧಿಸುತ್ತಾರೆ ಅನ್ನುವುದು ಗಮನಾರ್ಹ. ಈ ಸಂಸ್ಕೃತ ಭಾಷೆ ಪ್ರತಿನಿಧಿಸುವ ಸಮುದಾಯವು, ಚರಿತ್ರೆಯ ಉದ್ದಕ್ಕೂ ಶೋಷಣೆ, ದೌರ್ಜನ್ಯ, ಸಾಮಾಜಿಕ ಅಸಮಾನತೆಯಂತಹ ಜೀವ ವಿರೋಧಿ ರೂಢಿಗಳನ್ನು ಬಲಪಡಿಸುತ್ತಾ ಬಂದಿದೆ. ಇಂತಹ ಧೋರಣೆಗಳು ಖಾಯಂ ಆಗಿ ಸಂಸ್ಕೃತ ಭಾಷೆಯಲ್ಲಿ ನೆಲೆಯೂರಿವೆ. ಈ ವಾದವನ್ನು ಯಾರು ಕೂಡ ತಳ್ಳಿ ಹಾಕಲಾರರು, ಸಂಸ್ಕೃತ ಭಾಷೆ ಸಾಹಿತ್ಯಿಕ, ಭಾಷಿಕ ಒಟ್ಟಾರೆ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ ಎಂಬಿತ್ಯಾದಿ ವಾದಗಳು ಜನಸಾಮಾನ್ಯರಲ್ಲಿ ರೂಢಿಯಲ್ಲಿವೆ. ಇಂತಹ ವಾದಗಳಿಗೆ ಹೆಚ್ಚು ಹೆಚ್ಚು ಕಸಿ ನೀಡುವ ಅಧ್ಯಯನಗಳನ್ನು ಸಂಸ್ಕೃತ ಪರವಾಗಿರುವ ಪಂಡಿತರು ಮಂಡಿಸುತ್ತಿರುವುದು ಗಮನಾರ್ಹ. ಆದರೆ ಈ ಭಾಷೆ ಯಾರ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ ಅನ್ನುವುದೇ ಮುಖ್ಯ. ಶೂದ್ರ ಸಮುದಾಯಗಳ ಸಂವೇದನೆ ಮತ್ತು ವಿವೇಕವನ್ನು ಹೊರಗಿಟ್ಟು ಸಂಸ್ಕೃತ ಸಾಹಿತ್ಯ ರೂಪಗೊಂಡಿದೆ. ಅಂದರೆ ಶೂದ್ರರ ಯಾವ ಸಾಂಸ್ಕೃತಿಕ ಶ್ರೀಮಂತಿಕೆಯನ್ನೂ ಅದು ಒಳಗೊಂಡಿಲ್ಲ ಎಂದರ್ಥ. ಇವರು ಇದೇ

ಧೋರಣೆಯನ್ನು ಕನ್ನಡ ಸಾಹಿತ್ಯದಲ್ಲಿಯೂ ಪಡಿಮೂಡಿಸಿರುವರು. ಇಂತಹ ಕಣ್ಣಿಗೆ ರಾಚುವ ವಾಸ್ತವಗಳನ್ನು ಮರೆಮಾಚಿ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ರೂಪಿಸಿರುವ/ಪೊರೆಟರುವ ಸಂಸ್ಕೃತ ಮೋಹಿಗಳು ಅದನ್ನೇ ಕನ್ನಡದ ಅನನ್ಯತೆ ಎಂದು ವಾದಿಸುತ್ತಾರೆ. ಅಶೂದ್ರ 'ವೈದಿಕ' ಚಿಂತಕರು ಮಂಡಿಸಿರುವ ವಾದಗಳಿಗೆ ಅತಿಯಾದ ಪ್ರಾಮುಖ್ಯತೆ ಸಿಕ್ಕಿರುವುದೇ ಇವಕ್ಕೆ ಕಾರಣ. ಈ ಬಗೆಯ ತಿಳವಳಿಕೆಯು ತಳಸಮುದಾಯ ಹಾಗೂ ಹಿಂದುಳಿದವರ ಸಾಂಸ್ಕೃತಿಕ ಅರಿವು ಮತ್ತು ಅವರ ಹೆಚ್ಚುಗಾರಿಕೆಯನ್ನು ಅಮಾನ್ಯಗೊಳಿಸಿದೆ. ಇಂತಹ ಒಲುಮೆಗಳೇ ಕನ್ನಡದ ಗುರುತುಗಳಾಗಿ ಮೈದಾಳಿರುವುದು ಚಾರಿತ್ರಿಕ ವಿಪರ್ಯಾಸ. ಕರ್ನಾಟಕದ ಬಹುಜನರ ಸಂಸ್ಕೃತಿ ಹಾಗೂ ಸಂವೇದನೆ ಒಳಗೊಳ್ಳದ ಕನ್ನಡ ಅದುಹೇಗೆ ಕನ್ನಡಿಗರ ತಾಯ್ನುಡಿ ಅಥವಾ ಪರಿಸರ ನುಡಿಯಾಗಿರುವುದಕ್ಕೆ ಸಾಧ್ಯ. ಇಂತಹ ಪ್ರಶ್ನೆಗಳಿಂದಲೇ ನಿಜವಾದ ಕನ್ನಡತನ ಅಂದರೇನು ಅನ್ನುವುದನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಬಹುದು. ಶತ-ಶತಮಾನಗಳಿಂದಲೂ ಸಂಸ್ಕೃತವು ವೈದಿಕ-ಅವೈದಿಕ, ಶುದ್ಧ-ಅಶುದ್ಧ, ಮೇಲು-ಕೀಳು ಎಂಜಿತ್ಯಾದಿ ವೈರುಧ್ಯಗಳನ್ನು ಹುಟ್ಟುಹಾಕಿ ಕುಲಗೆಡಿಸುವ ಬೀಜವಾಪ್ತಿಯನ್ನು ಮೆರೆದಿದ್ದೆ ಹೆಚ್ಚು. ಯಾವುದೇ ಭಾಷೆಗೆ ವರ್ಗ, ಜಾತಿ, ಪ್ರದೇಶ ಮುಂತಾದ ಗುಣಗಳು ರಕ್ತಗತವಾಗಿ ಬಂದಿರುವುದಿಲ್ಲ. ಆದರೆ, ಸಮುದಾಯದೊಡನೆ ಭಾಷೆಗೆ ಇರುವ ನಂಟು ಇಂತಹ ಎಲ್ಲ ಗುಣಗಳನ್ನು ಒಗ್ಗಿಸಿಕೊಡುತ್ತದೆ ಅಥವಾ ಅಂತರ್ಗತಗೊಳಿಸುತ್ತೆ. ಇವಕ್ಕಾಗಿಯೇ ಮೂಲಭೂತವಾದ, ಕೋಮುವಾದದಂತಹ ಜೀವವಿರೋಧಿ ಗುಣಗಳು ಯಾಕೆ ಸಂಸ್ಕೃತ ಭಾಷೆಗೆ ಅಂಟಿಕೊಂಡಿವೆ ಅಂದರೆ, ಆ ಭಾಷೆಗಿರುವ ಅಂತಹ ಒಂದು ಸಮುದಾಯದ ನಿರಂತರ ಸಹಯೋಗವೇ ಕಾರಣವಾಗಿದೆ. ಭಾಷೆ ಹಾಗೂ ಸಮುದಾಯದ ನಡುವಣ ನಂಟಸ್ತಿಕೆ ರೂಪಗೊಳ್ಳುವ ಬಗೆ ಹೀಗೆ. ಈ ಕಾರಣಗಳಿಂದಲೇ ಸಂಸ್ಕೃತ ವೈದಿಕರ, ಉರ್ದು ಮುಸ್ಲಿಮರ, ಪಾಲಿ ಬೌದ್ಧರ ಹಾಗೂ ಪ್ರಾಕೃತ ಜೈನರ ಸ್ವೊತ್ತಾಗಿ ಬಿಂಬಿತವಾಗಿದೆ. ಯಾವಾಗ ಒಂದು ಭಾಷೆ ಯಾವುದೇ ಧರ್ಮ ಅಥವಾ ಜಾತಿಯ ಭಾಷೆಯಾಗಿ ಗುರುತಿಸಲ್ಪಡುತ್ತದೆಯೋ ಆಗ ಅದಕ್ಕೆ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಹುಟ್ಟಿಸುವ ಗುಣವು ಮೈಗೂಡುತ್ತದೆ. ಪರಿಣಾಮವಾಗಿ, ಸಂಸ್ಕೃತವು ವೈದಿಕ ಧರ್ಮ ಹುಟ್ಟು ಹಾಕಿದ ಎಲ್ಲ ಬಗೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಯಜಮಾನಿಕೆ, ಪ್ರಾಬಲ್ಯ, ಸಾಮಾಜಿಕ ನಿರಾಕರಣೆ, ಅಸಮಾನತೆ ಮತ್ತು ಕೀಳರಿಮೆ ಅಂತಹ ಅಪಮೌಲ್ಯಗಳನ್ನು ಅಂತರ್ಗತಮಾಡಿಕೊಂಡಿದೆ. ಅದಕ್ಕಾಗಿ ಸಂಸ್ಕೃತ ಇವತ್ತಿಗೂ ಸಾಂಸ್ಕೃತಿಕ ಅಪಾಯದ ರೂಪಕವಾಗಿಯೇ ಗೋಚರಿಸುತ್ತದೆ. ಈ ಭಾಷೆ ತನ್ನಷ್ಟಕ್ಕೆ 'ಸ್ವಯಂಭೂ' ಎನ್ನುವ ಅಹಂನಲ್ಲೇ ತನ್ನ ಹೆಚ್ಚುಗಾರಿಕೆಯನ್ನು ಮೆರೆದಿದೆ. ಇಂತಹ ಭಾಷೆಯ ವಾರಸುದಾರರು ಯಾವುದನ್ನು ತಮ್ಮ ತಾಯ್ನುಡಿ ಎಂದು ಹೇಳಿಕೊಳ್ಳುತಾರೆ ಅನ್ನುವುದು ಕೂಡ ವಿಶೇಷ. ಸಂಸ್ಕೃತ ಯಾವತ್ತು ಕೂಡ ವ್ಯಾವಹಾರಿಕ ಹಾಗೂ ಸಾರ್ವಜನಿಕ ಅಗತ್ಯಗಳಿಗೆ ಪ್ರಯೋಜನವೇ ಆಗಿಲ್ಲ. ಆದರೂ ಈ ಭಾಷಿಕರು ಕನ್ನಡದಂತಹ ಭಾಷೆಗಳನ್ನೇ ಅಸಡ್ಡೆಯಿಂದ ನೋಡುವ ಪ್ರವೃತ್ತಿಯನ್ನು ಬೆಳಸಿದ್ದಾರೆ. ಪ್ರಾದೇಶಿಕ ಭಾಷೆಗಳು ತಮ್ಮ ಒಡಲಲ್ಲಿ ಕಾಪಿಟ್ಟುಕೊಂಡ ಸೃಜನಶೀಲ ಪ್ರತಿಭೆ ಹಾಗೂ ಅದರ ವೈವಿಧ್ಯತೆಯನ್ನು ನಾಶಮಾಡಿ, ಸಂಸ್ಕೃತ ತನ್ನ ಸೃಜನಶೀಲತೆಯ ಪ್ರಾಮುಖ್ಯತೆಯನ್ನು ಮೆರೆದಿದೆ. ಇಷ್ಟೆಲ್ಲ ಅವಾಂತರಗಳನ್ನು ಹುಟ್ಟು ಹಾಕಿದ ಸಂಸ್ಕೃತಕ್ಕೆ ಪಾಪಪ್ರಜ್ಞೆಯೇ ಇಲ್ಲವಲ್ಲ ಅನ್ನುವುದು ಆಶ್ಚರ್ಯ. ಇಂತಹ ಕೀಳರಿಮೆಯ ನರಕದಿಂದ ಪ್ರಾದೇಶಿಕ ಭಾಷೆಗಳು ಎಚ್ಚೆತ್ತುಕೊಳ್ಳುವ ಈ ಹೊತ್ತಿನಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯ ತಲೆ ಎತ್ತಿದೆ. ಸಂಸ್ಕೃತ ತನ್ನ ಅಸ್ತಿತ್ವವನ್ನು ಹೆಚ್ಚು ಹೆಚ್ಚು ಗಟ್ಟಿಪಡಿಸಿಕೊಳ್ಳಲು ಸಾಕಷ್ಟು ಸಮೂಹ ಭಾಷೆಗಳನ್ನು ಬಲಿ ತೆಗೆದುಕೊಂಡಿದೆ. ಸಂಸ್ಕೃತ ಭಾಷೆಯ ವಾರಸುದಾರರು ಇವತ್ತು ತಾವು ವೈಜ್ಞಾನಿಕ ಹಾಗೂ ಆಧುನಿಕತೆಯ

ಲಾಭವನ್ನು ಪಡೆಯಲು, ತಮ್ಮ ಸನಾತನ ಧರ್ಮದ ಅಸ್ಮಿತೆಯ ರೂಪಕ ಆಗಿದ್ದ ಸಂಸ್ಕೃತವನ್ನು ಶೂದ್ರ ಸಮುದಾಯಗಳಿಗೆ ಕಲಿಸುವ ಮೂಲಕ ಅದನ್ನು ಸಂಗೋಪಿಸುವ ಜವಾಬ್ದಾರಿಯನ್ನು ಇವರಿಗೆ ವರ್ಗಾಯಿಸಿದ್ದಾರೆ. ಒಂದು ಕಾಲದಲ್ಲಿ ಸಂಸ್ಕೃತಕ್ಕೆ ಅಸ್ಪೃಶ್ಯರಾಗಿದ್ದ ಶೂದ್ರ ಸಮುದಾಯಗಳಿಗೆ ಸಂಸ್ಕೃತ ಕಲಿಸಬೇಕು ಎನ್ನುವ ಈ ಅವಸ್ಥಾಂತರ ಹಿಂದಿನ ಹುನ್ನಾರ ಸ್ಪಷ್ಟವಾಗಿದೆ. ವೈದಿಕ ಧರ್ಮ ಪಾಲಿಸುತ್ತಾ ಬಂದ ಎಲ್ಲ ಕಂದಾಚರಗಳನ್ನು ಮರುಸ್ಥಾಪಿಸುವದೇ ಹೊರತು ಬೇರೆನೂ ಅಲ್ಲ. ಕನ್ನಡ ಹಾಗೂ ಕನ್ನಡಿಗರನ್ನೂ ಯಾವುದೇ ರೀತಿಯಲ್ಲಿ ಬಾಧಿಸದ ಶಾಸ್ತ್ರೀಯ ಭಾಷಾ ಸ್ಥಾನಮಾನ ತಮಿಳಿಗೆ ಸಿಕ್ಕಾಗ, ಅದನ್ನು ವಿರೋಧಿಸಿ ಕನ್ನಡಕ್ಕೂ ಬೇಕೆಂದು ಹೋರಾಟ ಮಾಡಿದ ಚಳವಳಿಗಾರರರಿಗೆ ಏನಾಗಿದೆ? ಇವರೇಕೆ ಸಂಸ್ಕೃತ ವಿಶ್ವವಿದ್ಯಾನಿಲಯ ಸ್ಥಾಪನೆಯನ್ನು ವಿರೋಧಿಸುತ್ತಿಲ್ಲ. ದೂರದರ್ಶನದಲ್ಲಿ ಪ್ರಸಾರ ಆಗುವ ಉರ್ದು ಕಾರ್ಯಕ್ರಮ/ನ್ಯೂಸ್‌ನ್ನು ವಿರೋಧಿಸಿದ ಮನಸ್ಸುಗಳು ಯಾಕೆ ಈಗ ತೆಪ್ಪಗಿವೆ. ದಲಿತ-ಹಿಂದುಳಿದ ವರ್ಗಗಳ ಏಳ್ಗೆಗೆ ಅನುವಾಗಲೆಂದು ಜಾರಿಗೊಳಿಸಿದ್ದ ಒಂದನೇ ತರಗತಿಯಿಂದ ಇಂಗ್ಲಿಶ್ ಭಾಷಾ ಕಲಿಕೆಯನ್ನು ವಿರೋಧಿಸಿದ ಅಪ್ಪಟ ಕನ್ನಡ ಅಭಿಮಾನಿಗಳಿಗೆ ಏನಾಗಿದೆ? ಇದೆಲ್ಲವುಕ್ಕಿಂತ ಹೆಚ್ಚಾಗಿ ಸಂಸ್ಕೃತವು ಭಾಷಿಕ-ಸಾಂಸ್ಕೃತಿಕ-ಸಾಮಾಜಿಕ ಅಸಹನೆಯನ್ನು ಹುಟ್ಟು ಹಾಕಿದೆ. ಈ ಎಲ್ಲ ಮನಸ್ಸುಗಳ ಹಿಂದಿನ ಶಕ್ತಿ ಯಾವುದೆಂದು ಕೇಳಿದರೆ, ಅದು ಸಂಸ್ಕೃತವೆಂದೇ ಹೇಳಬಹುದು. ಸಂಸ್ಕೃತಕ್ಕೂ ಇಂತಹ ಜನವಿರೋಧಿ ಬೆಳವಣಿಗೆಗಳ ನಡುವೆ ಏನಾದರೂ ತಳುಕು ಇದೆಯೇ ಎಂದೂ ಕೇಳಿದರೆ, ಸಂಸ್ಕೃತವನ್ನು ಕೇವಲ ಒಂದು ಭಾಷೆಯಾಗಿ ನೋಡಿದರೆ ಅದಕ್ಕೆ ಯಾವುದೇ ಜೀವವಿರೋಧಿ ಗುಣವಿಲ್ಲ. ಆದರೆ, ಸಂಸ್ಕೃತವನ್ನು ಒಂದು ಸಮೂಹದ ಭಾಷೆಯಾಗಿ ನೋಡಿದರೆ, ಅದಕ್ಕೆ ಎಲ್ಲಾ ಬಗೆಯ ಗುಣಗಳನ್ನು ರೂಢಿಸಿಕೊಳ್ಳಲು ಸಾಧ್ಯ. ಹಾಗಾಗಿ ಸಂಸ್ಕೃತ ಭಾಷೆಯ ಕಲಿಕೆಯ ಮುಖ್ಯ ಉದ್ದೇಶ ವೈದಿಕಕರಣ ಅಥವಾ ಕೇಸರೀಕರಣವನ್ನು ಮತ್ತೇ ನೆಲೆಯೂರಿಸುವ ಹುನ್ನಾರ ಎಂದು ಯಾಕೆ ಕನ್ನಡಪರ ಹೋರಾಟಗಾರರಿಗೆ ಇನ್ನೂ ಅರ್ಥವಾಗಿಲ್ಲ.

ವೈದಿಕ-ಸಂಸ್ಕೃತದ ಗೀಳು ಅಂಟಿಸಿಕೊಂಡ ಬೈರಪ್ಪನಂಥವರು ಕರ್ನಾಟಕ ಸಂಸ್ಕೃತಿ ಪಾಠವನ್ನು ಹೇಳುವ ಹುಂಬತನಕ್ಕೆ ಏನನ್ನಬೇಕು? ಸಂಸ್ಕೃತ ವಿವಿ ಬೇಕು ಬೇಡ ಎನ್ನುವ ಚರ್ಚೆಯನ್ನು ವಿಜಯ ಕರ್ನಾಟಕ ಪತ್ರಿಕೆಯವರು ಆರಂಭಿಸಿದರು ಅದಕ್ಕೆ 'ನಿಷ್ಪಕ್ಷಪಾತ ಚರ್ಚೆ' ಎಂಬ ಹಣೆಪಟ್ಟಿಯನ್ನು ಅಂಟಿಸಿದ್ದರೂ. ಈ ಚರ್ಚೆಯ ಉದ್ಘಾಟನೆಯನ್ನು ಬೈರಪ್ಪನವರೇ ಮಾಡಿದರು. ಇದರಲ್ಲಿ ಪಾಲ್ಗೊಂಡ ಹೆಚ್ಚಿನ ವಿದ್ವಾಂಸರು ನಿಲಯದ ಕಲಾವಿದರೇ ಆಗಿದ್ದರು ಅನ್ನುವುದು ವಿಶೇಷ. ಈ ಚರ್ಚೆಯಲ್ಲಿ ಪಾಲ್ಗೊಂಡು ಸಂಸ್ಕೃತ ವಿವಿ ಏಕೆ ಬೇಡ ಎಂದೂ ಸಮರ್ಥನೆ ನೀಡಿದ ಪ್ರೊ. ಕೆ.ವಿ. ನಾರಾಯಣ ಮತ್ತು ಪ್ರೊ. ಎಮ್.ಎಮ್. ಕಲಬುರ್ಗಿಯಂತಹ ಚಿಂತಕರನ್ನು ಭಿನ್ನಮತಿಯರೆಂದೂ ಬೀಗಿ ಅದೇ ಬೈರಪ್ಪನವರು ಆ ಚರ್ಚೆಗೆ ಮುಕ್ತಾಯ ಹಾಡಿದ್ದು ಇನ್ನೂ ವಿಶೇಷವಾಗಿತ್ತು. ರಾಜ್ಯದ ಇನ್ನಿತರ ಪತ್ರಿಕೆಗಳಾದ 'ಸಂವಾದ' 'ಲಂಕೇಶ್' ಈ ಪತ್ರಿಕೆಯಲ್ಲಿಯೂ ಕೂಡ ಪ್ರೊ.ಲಿಂಗದೇವರು ಹಳೆಮನೆಯವರ ಹೊರತಾಗಿ ಬೇರೆ ಯಾರು ಸಂಸ್ಕೃತ ವಿವಿಗೆ ಪ್ರತಿಕ್ರಿಯಿಸಿದ್ದು ನನಗೆ ಗೊತ್ತಿಲ್ಲ 'ವಾರ್ತಭಾರತಿ' ಹಾಗೂ 'ಹೊಸತು' ಇವುಗಳು ತಕ್ಕಮಟ್ಟಿಗೆ ಸಂಸ್ಕೃತ ವಿವಿಯನ್ನು ವಿರೋಧಿಸುವುದಕ್ಕೆ ವೇದಿಕೆ ಆಗಿದ್ದು ಗಮನಾರ್ಹ. ಕನ್ನಡ ಸಾರಸತ್ವಕ್ಕೆ ತಮ್ಮನ್ನು ಮುಡುಪಾಗಿಟ್ಟಂತಹ ಎಷ್ಟೋ ಪತ್ರಿಕೆಗಳು ಸಂಸ್ಕೃತ ವಿವಿ ಸ್ಥಾಪನೆ ಕುರಿತು ಚರ್ಚೆಗೆ ಒಂದು ವೇದಿಕೆ ಒದಗಿಸದಿರುವುದು ನೋವಿನ ಸಂಗತಿ.

ಕನ್ನಡ ಮಾತನಾಡುವ ಮತ್ತು ಕನ್ನಡ ನುಡಿಯನ್ನೇ ನೆಚ್ಚಿರುವ ಸಮುದಾಯಗಳ ಆಶೋತ್ತರಗಳನ್ನು ಕಾಪಾಡುವ ಜವಾಬ್ದಾರಿ ಈ ನಾಡಿನ ಎಲ್ಲ ಬಗೆಯ ಸಮೂಹ ಮಾಧ್ಯಮಕ್ಕೆ ಇದೆ ಎಂದು ನನ್ನ ಬಲವಾದ

ನಂಬಿಕೆ. ಯಾಕಂದರೆ, ಕರ್ನಾಟಕದ ಹೆಚ್ಚಿನ ಸಮುದಾಯಗಳ ಭಾಷೆ ಕನ್ನಡ. ಕನ್ನಡದ ಏಳ್ಗೆಗೆ ಅಗತ್ಯವಿರುವ ಎಲ್ಲ ಬಗೆಯ ನುಡಿಹಮ್ಮುಗೆ 'ಭಾಷಾಯೋಜನೆ' ಅನುಷ್ಠಾನಗೊಳ್ಳಬೇಕು. ಇಂತಹ ಭಾಷಾಯೋಜನೆಗಳು ತಾರತಮ್ಯದ ಧೋರಣೆಗಳನ್ನು ಬಿಟ್ಟು ಮುನ್ನಡೆಯಬೇಕು. ಕಾರಣ ಹಲವಾರು ಬೇರೆ ಬೇರೆ ಸಮೂಹ ಭಾಷೆಗಳು ಕರ್ನಾಟಕದಲ್ಲಿವೆ. ಈ ಭಾಷೆಗಳಿಗೂ ಕನ್ನಡದಷ್ಟೇ ಪ್ರಾಮುಖ್ಯತೆ ಸಿಗಬೇಕು. ಇಂತಹ ಒಂದು ಔದಾರ್ಯದ ಮನಸ್ಸು ಪ್ರಭುತ್ವ ಹಾಗೂ ಅದನ್ನು ನಿಭಾಯಿಸುವ ವರ್ಗಕ್ಕೂ ಇರಲೇಬೇಕು. ಇಲ್ಲವಾದರೆ, ಸಂಸ್ಕೃತದಿಂದ ಕನ್ನಡದ ಮೇಲೆ ನಡೆದಿರುವ ಭಾಷಿಕ ಯಾಜಮಾನ್ಯ ಕನ್ನಡದಿಂದ ಕರ್ನಾಟಕದ ಇತರ ಭಾಷೆಗಳ ಮೇಲೂ ನಡೆಯುತ್ತದೆ. ಈಗ ಇಂತಹ ಯಾವುದೇ ಯಾಜಮಾನ್ಯ ಪ್ರಭಾವವು ಕನ್ನಡದಿಂದ ಕರ್ನಾಟಕದ ಇತರ ಭಾಷೆಗಳ ಮೇಲೆ ಆಗಿಲ್ಲವೆಂದೂ ನನ್ನ ವಾದವಲ್ಲ. ಆದರೆ ಸಂಸ್ಕೃತ ಕನ್ನಡಕ್ಕೆ ಹೋಲಿಸಿ ನೋಡಿದರೆ, ಕನ್ನಡದಿಂದ ಬೇರೆ ಭಾಷೆಗಳ ಮೇಲೆ ನಡದಿರುವ ಶೋಷಣೆಯ ಪ್ರಮಾಣ ಕಮ್ಮಿಯೆಂದೇ ಹೇಳಬಹುದು. ನೀರು ಕೆಲವರಿಗೆ ಮಾತ್ರ ತೀರ್ಥವಲ್ಲ. ನೀರು ತೀರ್ಥವಾಗಿ ಮಾರ್ಪಡುವ ದ್ರವವಾದರೇ ಅದು ಎಲ್ಲರಿಗೂ ತೀರ್ಥವೇ. ಹಾಗೇ, ಆಯಾ ಸಮುದಾಯದ ತಾಯ್ನುಡಿ ಅವರವರ ಅನುಭವವನ್ನು ಕಟ್ಟಿಕೊಡುವ ಮಾಧ್ಯಮವಾಗಬೇಕು. ಇದರಲ್ಲಿ ಯಾವುದೇ ಬಗೆಯ ತರತಮ ಮಾಡುವ ಹುನ್ನಾರಕ್ಕೆ ಅವಕಾಶ ಇರಕೂಡದು. ಪ್ರಭುತ್ವ ಹಾಗೂ ನುಡಿಹಮ್ಮುಗೆ 'ಭಾಷಾಯೋಜನೆ' ಹುಡಿನಡೆ 'ಭಾಷಾನೀತಿ'ಯನ್ನು ರೂಪಿಸುವವರು ತಾಯ್ನುಡಿಯಂತಹ ಪರಿಕಲ್ಪನೆಗೆ ಇರುವ ಮೌಲ್ಯವನ್ನು ಮನಗಾಣಬೇಕಿದೆ. ಬಹುಭಾಷಿಕ-ಸಾಂಸ್ಕೃತಿಕ ಸನ್ನಿವೇಶಗಳ ಹೆಚ್ಚುಗಾರಿಕೆ ಏನು ಹಾಗೂ ಅವುಗಳನ್ನು ಯಾಕೆ ಕಾಪಾಡಬೇಕು ಎಂಬುದನ್ನು ಇನ್ನಾದರೂ ಮನವರಿಕೆ ಮಾಡಿಕೊಳ್ಳುವ ಜರೂರು ಇದೆ.

ಸಹ್ಯಾದ್ರಿ ಕಲಾ ಕಾಲೇಜು
ವಿದ್ಯಾನಗರ -೫೭೭೨೦೩, ಶಿವಮೊಗ್ಗ
meti.mallikarjun@gmail.com
metimallikarjun@yahoo.com
೯೪೪೮೮೭೧೪೪೧
೯೯೮೭೭೦೯೭೪೧



ಕಾವ್ಯ ಸಂಕ್ರಮಣ

ಬೆಳಗತ್ತಲ ಪದ್ಯಗಳು

ಜಿ.ಕೆ. ರವೀಂದ್ರಕುಮಾರ್

ಜಗದ ಒಗಟು



ಇದೇ ಇದ್ದು ಬಿಡುವುದೇನೋ ಎಂಬ ಚಿರಂತನದ ಚಿಂತೆಯಲ್ಲಿ
ಹೊಡೆಯುವಂತೆ ಬರುವ ಕತ್ತಲೆ ಮತ್ತು ಬೆಳಕು
ಪ್ರಮತ್ತರ ಸತ್ಯಕ್ಕೆ ಸುಳ್ಳಿನಂತೆ ಸುಳ್ಳಿಗೆ ಸತ್ಯದಂತೆ

ಇಲ್ಲವೆಂದು ತೋರುತ್ತಲೇ ತಂದು ಒಪ್ಪಿಸಿ ಹೋಗುವ ಅವಳಿ
ಒಬ್ಬರು ತಿಳಿಯಾಗುತ್ತ ಇನ್ನೊಬ್ಬರನ್ನು ತಿಳಿಸುವ ಪರಿ
ದಿನವೂ ಒಬ್ಬರ ಎದೆಯೊಳಗೆ ಇನ್ನೊಬ್ಬರು ಕರಗಿ
ಅದೇ ಇದಾಗಿ ಇದೇ ಅದಾಯಿತೋ?

ಕರಗುವ ಪ್ರಶ್ನೆಯಿಲ್ಲದ ಎದೆಗಾರಿಕೆಗೆ ತಿಳಿವುದೆಂತು?
ಅವಳು ಅವನು ಕರಗಿಕೊಳ್ಳಲು ಸೂಕ್ತ ಮಾತಿಗೆ ಕಾಯುತ್ತಿರಲು
ತಿಳಿಯಾಗದವೆಲ್ಲ ಕಲಸಿ ಕಲಸಿ
ಕಸುವ ಗಮ್ಮತ್ತಲ್ಲಿ ಇಂದನ್ನು ದಾಟುವ ಆತುರ
ಬಂದು ಹೋಯಿತೇ ಕತ್ತಲು
ಏನು ಹೇಳಿತು ಬೆಳಕು?
ಪರಿವಳಿದ ಅರಿವಿಗೆ ಕನಸಿನಡರು

ನೀಗುವಂತೆ ಬಂದವರು
ನೀಗಿಸಿಕೊಂಡಂತೆ ಹೋಗುವಲ್ಲಿ
ನಿಂದ ಒಗಟು ನಿಲದ ಜಗತ್ತು

ಯಾರಲ್ಲಿ ಒಗಟು ಒಡೆಯಿತು
ಯಾರಲ್ಲಿ ಜಗವು ಬೆಳೆಯಿತು?

ಅವರವರ ಪದ
ಸದಾ ಮುಂದೊಂದು ಪರಮಪದ

ಮತ್ತೂ ಮತ್ತೂ ಆಗುವಲ್ಲಿ

ಬೆಳಗು ಮತ್ತೂ ಬೆಳಗುವ ಛಲದಲ್ಲಿ
ಕತ್ತಲೆ ಮತ್ತೂ ಕಪ್ಪಗಾಗುವ ಗುರಿಯಲ್ಲಿ
ಯಾವುದನ್ನು ನಂಬಿ ಉತ್ತರಿಸಲಿ ನನ್ನ ನೆರಳಿಗೆ

ಮತ್ತೂ ಮತ್ತೂ ಆಗುವ ಸಾರ್ಥಕ ಸುಳಿಯಲ್ಲಿ
ಎಲ್ಲವೂ ನಿಚ್ಚಳ ಸಮಾಧಾನಿಯಾಗಿರಲು
ದುಗುಡಗೊಳ್ಳುವ ನೆರಳು ಅಪ್ರಮಾಣು

ಅದು ಅದೇ ಆಗುವ ಹಟಕ್ಕೆ ಬಿದ್ದು
ಮುನಿಸಿಕೊಂಡಂತೆ ದೂರ ಒಲಿಸಿಕೊಂಡಂತೆ ಸನಿಹ
ಹೋಗಿ ಬರುವ ಮುಚ್ಚಾಲೆಯಾಡುತ್ತ ದಿಗಿಲು ಹುಟ್ಟಿಸುವಲ್ಲಿ

ಈ ಜೀವಕ್ಕೆ ಮತ್ತೂ ಜೀವಗೊಳ್ಳುವ ಉಮೇದು
ನೆರಳಿಗೇ ಜೀವ ಕೊಡುವ ಕಾಮಿ ಹುರುಪು

ಮತ್ತೂ ಮತ್ತೂ ದೇವರೇ ಆಗುವ ದೈವಕ್ಕೆ ಬಿದ್ದವನು
ಜಗದ ಕತ್ತಲೆಯಲ್ಲಿ ತನ್ನ ಹುಡುಕುಕೊಳ್ಳುತ್ತಿರಲು
ಯಾರು ಯಾರ ಊರುಗೋಲು?

ಹಕ್ಕಿ-ಧ್ವನಿ

ಬೆಳಕನ್ನು ಮೊದಲೇ ನೋಡುವ ಹಕ್ಕಿಗಳು
ಸಂತಸ ಹಂಚಿಕೊಳ್ಳುವಾಗ
ಬೆಳಕೂ ಬಂದು ನಗುವುದು
ಬೆಳಕನ್ನು ಹಕ್ಕಿಯು ಬೆಳಗು ಹಕ್ಕಿಯನ್ನೂ ಸಂಭ್ರಮಿಸುವಾಗ
ಊರು ಆಕಳಿಸುವುದು

ಕತ್ತಲನ್ನು ಮೊದಲೇ ಕಾಣುವ ಹಕ್ಕಿಗಳು
ಕಕ್ಕುಲತೆಯಿಂದ ಹೇಳಿಕೊಳ್ಳುವಾಗ
ಕತ್ತಲೂ ಬಂದು ನಗುವುದು
ಕತ್ತಲನ್ನು ಹಕ್ಕಿಯು ಕತ್ತಲು ಹಕ್ಕಿಯನ್ನು ಗೌರವಿಸುವಾಗ
ಊರು ಬೆಳಗಿ ಅಣಕಿಸುವುದು

ದಿನವ ಮೀರಿದ ಲೋಕಾಚಾರಕ್ಕೆ
ಜೀತಗೊಂಡ ಅಕ್ಷರಗಳು ಎಲ್ಲೆಂದರಲ್ಲಿ
ಅಕ್ಷರವನ್ನೇ ಮೀರಿದ ಹಕ್ಕಿಗಳಿಗೆ
ಅರಳಿಕೊಳ್ಳುವ ಧ್ವನಿ ಪ್ರತಿ ಗಳಿಗೆಯಲ್ಲಿ

ಪ್ರತಿಬಿಂಬ

ಅಗಾಧ ದೀಪದಲ್ಲಿ ಏನೂ ಕಾಣದಾಗುವ ಬೆಳಗತ್ತಲೆ
ದಟ್ಟ ಕಪ್ಪಿನಲ್ಲಿ ಜಗವೇ ಬೆಳಗಿಕೊಳ್ಳುವ ಒಲೆ

ಯಾವುದು ಕಾಣದಾಯಿತು
ಯಾಕೆಂದು ಬೆಳಗಿಕೊಂಡಿತು

ಎರಡೂ ಅಲ್ಲದ ಕೂಡಲದಲ್ಲಿ ಕಂಡ
ಸಂಗಮವೇನು ಸಂಭವವೇನು

ಬೆಳಗಿನ ಪರಮಕ್ಕೆ
ಕತ್ತಲೆಯ ಅಸೀಮಕ್ಕೆ
ಶಬ್ದದ ಐಕ್ಯ
ಚಿಮ್ಮಿದ ಅರ್ಥಗಳಿಗೆ ಸಾವಿರ ಬಿಂಬ
ತಾನೆಂಬ ಪ್ರತಿ
ಬಿಂಬ



ಬಣ್ಣ ಬೆರಗು

ಕತ್ತಲೆಯ ಒಳಗನ್ನು ಬೆಳಕು ಭಾವಿಸುತ್ತ
ಬೆಳಕ ಒಳಗನ್ನು ಕತ್ತಲೆಯು ಧೇನಿಸುತ್ತ
ಆಕಾರಗೆಡದಂತೆ ಇರುವ ನಿತ್ಯ ನಿಮಿತ್ತದ ಬಾಳಿನಲ್ಲಿ
ಒಬ್ಬರಿಗೊಬ್ಬರು ಆಗುವ ಅಚ್ಚರಿಗೆ

ಏನು ಹೇಳಿಕೊಂಡವೋ ಬೆಳಗತ್ತಲ ಒಳ ಬಣ್ಣಗಳು
ತೋರುವಂತೆ ಬಂದ ತೋರದಂತೆ ನಿಂದ
ಕಪ್ಪು ಬಿಳುಪ ಕವಲಲ್ಲಿ ಧರಿಸಿಕೊಳ್ಳದ ಮೇಲೆ

ಯಾರದೋ ಹಂಗಿನ ಮುಂದೆ
ಯಾರಿಗೋ ಮಳೆಬಿಲ್ಲು ಆಗೀಗ
ನೇತು ಹಾಕಿದ ಕನಸು
ಮುಗಿದು ಹೋಗುವ ಬಣ್ಣ ಬೆರಗು

ದಾರಿಯಿಲ್ಲದ ಮೇಲೆ
ಒಳಗೊಳಗೆ ಚೆಲ್ಲಿಕೊಂಡು ತನುವೊಳಗೆ ತಾಳಿಕೊಂಡು
ಊರೊಳಗೆ ಬಾಳಿಕೊಳ್ಳುವ ಪ್ರತಿಕ್ಷಣವೂ
ಇದೆ ಇಲ್ಲದ ಇರವು

ಒಂದು ಇನ್ನೊಂದನ್ನು ಭಾವಿಸುವಲ್ಲಿ ಕಳೆದೂ ಹೋಗಿರಬಹುದು
ಒಮ್ಮೆ ಬೆಳಕು ಇನ್ನೊಮ್ಮೆ ಕತ್ತಲು
ಸದಾ ಹುಡುಕಿಕೊಳ್ಳುವ ಜಗತ್ತಿನ ಹಾಗೆ

ಯಾರೋ ಬೆಳಕಿನೊಳಗೆ ಇಳಿದು
ಕತ್ತಲಲ್ಲಿ ನನ್ನ ತಡವುತ್ತಿದ್ದಾರೆ
ನನ್ನ ಜಗತ್ತನ್ನು ಅವರು ಭಾವಿಸುತ್ತಿರಬೇಕು
ನನ್ನ ದೇವರ ನಿತ್ಯ ಕಾಯಕದಂತೆ

ಅವರು ತಂದ ಕಂದೀಲು

ಚಾಚೂ ತಪ್ಪದೆ ಬರುವವಲ್ಲಾ ಒಂದರ ಒಂದೊಂದು
ಯಾವುದೋ ತಂತುವಿಗೆ ಅಂಟಿದ ಜೀವಧಾತುಗಳಂತೆ

ಆ ಸೆಳೆತದ ಸುಳಿಯ ಯಾವುದೋ ಒಂದು ಬದಿ ನಾನು
ತಂತು ಕಾಣದೆಯೂ ಅದರೊಳಗೆ ಅರಳಿದ ಹೂವಿನಂತೆ
ಬದುಕಲೊಂದು ಬೆಳಕು ಬಾಳಲೊಂದು ಕತ್ತಲು
ಒಂದು ಆಸರೆಯ ಹಿಂದೆ ಇನ್ನೊಂದು ಆಸರೆ

ಈ ನಿಯತಿಯ ಹಿಂದೆಯೂ ಅವರೇಕೆ ತಂದರು ಕಂದೀಲು?
ಅಕ್ಷರ ಬೆಳಗಿಸುವ ಸಾಲಿನಲ್ಲಿ
ಅರ್ಥ ಹೊಳೆಯಿಸುವ ಸಾಧನೆಯಲ್ಲಿ
ಬೆಳಕು ಸಾಲದೆಂದೇ ಬೆಳಕು ಬೆಳಗಲೆಂದೇ
ದೀಪ ಹಚ್ಚಿಟ್ಟು ತೀರಿ ತೆರಳಿದರೇಕೆ

ಬಿಟ್ಟು ಹೋದ ಕಂದೀಲಿನ ಬತ್ತಿ ಎತ್ತುವಲ್ಲಿ
ಎಣ್ಣೆ ಊಡುವಲ್ಲಿ ಗಾಜು ಒರೆಸುವಲ್ಲಿ ಗೀರಿ ಹೊತ್ತಿಸುವಲ್ಲಿ
ಅನವರತ ಎಳೆದಾಟ ತಲೆಮಾರ ಸೆಣೆಸಾಟ

ತದೇಕ ಉರಿಯುತ್ತಿವೆ ಕಂದೀಲು ಹೊತ್ತಿಟ್ಟ ಋಷಿಯಲ್ಲಿ
ಈ ಕಣ್ಣು ಮುಚ್ಚಾಲೆಯ ಅರಿವಂತೆ
ನಮ್ಮ ಮಿಥ್ಯೆಯ ಸತ್ಯದಂತೆ


ಕಾರ್ಯಕ್ರಮ ನಿರ್ವಾಹಕರು,
'ಆಕಾಶವಾಣಿ' ಮಡಿಕೇರಿ,
ಮೊಬೈಲ್: ೯೪೪೮೪೬೪೨೦೧

‘ಬಹುವಚನ’ ಒಂದು ಕೃತಿಯ ಬಗ್ಗೆ ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡುವ ಪ್ರಯತ್ನ. ಪ್ರಸನ್ನ ಅವರ ‘ಯಂತ್ರಗಳನ್ನು ಕಳಚೋಣ ಬನ್ನಿ’ ಕೃತಿಯ ಬಗ್ಗೆ ಒದು ‘ಬಹುವಚನ’ದ ಈ ಬಾರಿಯ ಪ್ರಯೋಗ.

ಬಹುವಚನ

ಯಂತ್ರಗಳೇ ಶಸ್ತ್ರಾಸ್ತ್ರಗಳಾಗಿರುವ ಈ ಹೊತ್ತಲ್ಲಿ...

ಕೃಷ್ಣಮೂರ್ತಿ ಬಿಳಿಗೆರೆ



ಪ್ರಸನ್ನ ಅದ್ಭುತ ಯೋಚನೆ ಮಾಡಿದ್ದಾರೆ. ಯಂತ್ರಗಳನ್ನು ಕಳಚುವ ಕಲ್ಪನೆ ಒಳ್ಳೆಯದೆ.

ಯಂತ್ರಗಳನ್ನು ಕಳಚುವುದು ಕೇವಲ ಕಲ್ಪನೆಯೇನಲ್ಲ. ಯಾವ ಮನುಷ್ಯರು ಯಂತ್ರ ಮಾನವರಾಗಿ ಪರಿವರ್ತನೆಗೊಂಡಿದ್ದಾರೋ ಅವರು ಯಂತ್ರಗಳನ್ನು ಕಳಚಲು ಮುಂದಾಗಬೇಕು. ಆದರೆ, ಅವರು ಯಂತ್ರಗಳನ್ನು ಕಳಚುವುದು ಕಷ್ಟವಾಗಿದೆ. ಏಕೆಂದರೆ ಯಂತ್ರಗಳು ಅವರ ಚರ್ಮಕ್ಕೆ ಅಂಟಿಕೊಂಡಿವೆ. ಅಷ್ಟೇ ಅಲ್ಲ ಅವರ ಮನಸ್ಸುಗಳನ್ನು ಮುಚ್ಚಿಕೊಂಡಿವೆ. ಅವರ ಯಂತ್ರಗಳನ್ನು ಇತರರು ಕಳಚಲು ಸಾಧ್ಯವೇ ಇಲ್ಲ. ಅವರೇ ಮನಸ್ಸು ಮಾಡಬೇಕು. ಇದು ಅಷ್ಟು ಸುಲಭವಲ್ಲ. ಏಕೆಂದರೆ ಯಂತ್ರ ಮಾನವರು ಯಂತ್ರಗಳಿಂದ ಬೇರ್ಪಟ್ಟರೆ ಸತ್ತು ಹೋಗುತ್ತಾರೆ. ಆದರೆ ಯಂತ್ರಗಳ ಜೊತೆಗೇ ಅವರು ಬದುಕ ತೊಡಗಿದರೆ, ಇನ್ನಿತರ ಯಂತ್ರಗಳ ಹಂಗಿಲ್ಲದ ನೆಲ ಮಾನವರು ನೆಲ ಕಚ್ಚುತ್ತಾರೆ. ಇದಕ್ಕೆ ಇರುವ ಏಕೈಕ ಮಾರ್ಗ ಬಹುಸಂಖ್ಯಾತ ಯಂತ್ರಗಳ ಹಂಗಿಲ್ಲದ ನೆಲ ಮಾನವರು ಸಾರಾಸಗಟಾಗಿ ಯಂತ್ರಗಳನ್ನು ತಿರಸ್ಕರಿಸುವುದು ಅಥವಾ ಯಂತ್ರಗಳಿಂದ ಕಳಚಿಕೊಳ್ಳುವುದು. ಯಂತ್ರಗಳಿಂದ ಕಳಚಿಕೊಳ್ಳುವುದರಿಂದ ಇವರಿಗಾಗುವ ನಷ್ಟ ಏನೂ ಇಲ್ಲ. ಹೀಗೆ ಬಹು ಸಂಖ್ಯಾತ ಭಾರತೀಯರು ಯಂತ್ರಗಳಿಂದ

ಕಳಚಿಕೊಂಡರೆ, ಅಲ್ಲಿ ಸಂಖ್ಯಾತ ಯಂತ್ರ ಮಾನವರು ದೇಹ ತ್ಯಾಗಕ್ಕೋ ದೇಶ ತ್ಯಾಗಕ್ಕೊ ಸಿದ್ಧರಾದಾರು. ಆಗ ಯಂತ್ರಗಳ ಸಾವು ಆದರೂ ಆದೀತು. ದೇಶದ ತುಂಬಾ ಹಬ್ಬಿರುವ ಯಂತ್ರಗಳು ಇಡೀ ದೇಶಕ್ಕೆ ಬೆಳಕು ನೀಡುತ್ತಿರುವಂತವೇನಲ್ಲ. ನಗರಗಳನ್ನು ಕೊಬ್ಬಿಸಿ, ಹಳ್ಳಿಗಳ ನಾಶಕ್ಕೆ ನಾಂದಿ ಹಾಡಿದಂತವೇ. ಆದ್ದರಿಂದ ಯಂತ್ರಗಳ ಸಾವಿನಿಂದ ಯಾರಿಗೂ ದುಃಖವೆಂಬುದಿಲ್ಲ.

ಇಷ್ಟಕ್ಕೂ ಯಂತ್ರ ಎಂದರೆ ಏನು? ಯಂತ್ರವೆಂಬುದು ಕೋಟಿ ಮಂತ್ರಗಳ ಮೊತ್ತ. ಸಾವಿರಾರು ವರ್ಷಗಳ ಬುದ್ಧಿಬಲದ ಫಲ ಯಂತ್ರ. ಯಂತ್ರಗಳು ನಮ್ಮ ಕಾಲದಲ್ಲೀಗ ಎಲ್ಲೆ ಮೀರಿ ಮೆರೆಯುತ್ತಿವೆ. ಎಷ್ಟೆಂದರೆ ಅವುಗಳೀಗ ಮನುಷ್ಯರ ನಿಯಂತ್ರಣದಲ್ಲಿಲ್ಲ. ಯಂತ್ರಗಳು ನಿಜಕ್ಕೂ ಅಪಾಯಕಾರಿ ಎನಿಸಿರುವುದು ಇತ್ತೀಚೆಗೆ. ಪ್ರಸನ್ನ ತಮ್ಮ ಕೃತಿಯಲ್ಲಿ ಪ್ರಸ್ತಾಪಿಸಿರುವಂತೆ ಕೇವಲ ಇತ್ತೀಚಿನ ಎರಡು ದಶಕಗಳಲ್ಲಿ. ಹಾಗೆಂದು ಯಂತ್ರಗಳು ಕೆಟ್ಟವಲ್ಲ. ಮನುಷ್ಯರ ನಿಯಂತ್ರಣದಲ್ಲಿರದ ಯಂತ್ರಗಳು ಕೆಟ್ಟವು. ಈ ದೊಡ್ಡ, ಈ ಕೆಟ್ಟ, ಈ ಅಪಾಯಕಾರಿ, ಈ ಕೋಟಿ ಮಂತ್ರಸಂಚಿತ ಯಂತ್ರಗಳು ಮನುಷ್ಯರನ್ನು ತಮ್ಮ ವಿಸ್ತರಣೆಗಳೆಂಬಂತೆ, ಗುಲಾಮರೆಂಬಂತೆ, ಕಾಲಾಳುಗಳೆಂಬಂತೆ ನಡೆಸಿಕೊಳ್ಳುತ್ತಿವೆ. ಜ್ಞಾನಿ, ವಿಜ್ಞಾನಿಗಳ ಅವಿರತ ಪ್ರಯತ್ನದ ಫಲವಾಗಿ ಅಪಾರ ಜ್ಞಾನ ಉಂಟಾಗಿದೆ. ಈ ಅಪಾರ ಜ್ಞಾನದ ಪ್ರತಿಫಲ ತಾನೇ ಈ ಯಂತ್ರಗಳು. ಅತಿಜ್ಞಾನ ಕೇವಲ ದೊಡ್ಡ ದೊಡ್ಡ ಯಂತ್ರಗಳನ್ನಷ್ಟೇ ಸೃಷ್ಟಿಸಲಿಲ್ಲ. ಮನುಷ್ಯರನ್ನೇ ಯಂತ್ರಗಳನ್ನಾಗಿಸಿದೆ.

ಯಂತ್ರಗಳು ಈಗ ಯಂತ್ರಗಳಾಗಿ ಉಳಿದಿಲ್ಲ. ಅವುಗಳೆಲ್ಲಾ ಮರೆಮಾಚಿದ ಶಸ್ತ್ರಾಸ್ತ್ರಗಳಾಗಿವೆ. ಈ ಶಸ್ತ್ರಾಸ್ತ್ರಗಳು, ಜನಸಂಬಂಧಿ ಪುಟ್ಟ ಪುಟ್ಟ ಉಪಕರಣಗಳನ್ನು ಸರ್ವನಾಶ ಮಾಡುತ್ತಿವೆ. ಯಂತ್ರಗಳೆಲ್ಲ ಸೇರಿ ಈ ಮನುಷ್ಯರ ಕೇಡಿನ ಪರಮಾವಧಿಗೆ ಇತಿಶ್ರೀ ಹಾಡಲು ನಿರ್ಣಯಿಸಿದರೂ ನಿರ್ಣಯಿಸಬಹುದು. ಯಾಕೆಂದರೆ ಯಂತ್ರೋತ್ಪಾದಕ ಮನುಷ್ಯರಿಗಿಂತ ಯಂತ್ರಗಳೇ ವಾಸಿ. ಆದರೆ ಈ ಯಂತ್ರಗಳು ಬಹುಕಾಲ ಯಂತ್ರಗಳಾಗಿಯೇ ಉಳಿಯುವುದಿಲ್ಲ. ಇವು ಸರ್ವನಾಶಕ ಅಸ್ತ್ರಗಳಾಗಿ ಬದಲಾಗುತ್ತವೆ. ಆಗ ಮನುಷ್ಯರನ್ನು ಒಳ್ಳೆಯವರು, ಕೆಟ್ಟವರೆಂದು ವಿಂಗಡಿಸಿ ಕೊಲ್ಲದೆ ಸಾರಾಸಗಟಾಗಿ ಹೊಸಕಿಹಾಕುವ ಅಪಾಯವಿದೆ. ಆಗ ಮಣ್ಣುಜೀವಿಗಳು ಮತ್ತು ಯಂತ್ರ ಮಾನವರು ಇಬ್ಬರೂ ಇಲ್ಲವಾಗುತ್ತಾರೆ. ಇದು ಹೀಗೆ ಆಗಲು ಬಿಡಬಾರದು.

ಈ ಬಗೆಯ ಅತಿ ಜ್ಞಾನದ ಆತಂಕದಿಂದಲೋ ಏನೋ ಬಸವಣ್ಣ 'ಜ್ಞಾನದಬಲದಿಂದ ಅಜ್ಞಾನದ ಕೇಡ ನೋಡಯ್ಯ' ಎನ್ನುತ್ತಾನೆ. ಈ ಮನುಷ್ಯರೊಳಗೆ ಚಿಗಿತ ಬುದ್ಧಿಗೆ, ಬುದ್ಧಿ ಸೇರಿ ವರ್ಣಭೇದ, ಲಿಂಗಭೇದ, ವರ್ಗಭೇದ ಮುಂತಾದ ಎಲ್ಲ ಬಗೆಯ ಭೇದಗಳು ಬುಸುಗುಡುವಂತಾಯಿತು.

ಭೂಮಿಯಲ್ಲಿನ ಶಾಂತ ಮೂಲವಸ್ತುಗಳನ್ನೇ ಬಳಸಿ ಕಾರ್ಕೋಟಕ ವಿಷಗಳನ್ನು, ಸ್ಫೋಟಕ ರಾಸಾಯನಿಕ ಅಸ್ತ್ರಗಳನ್ನು, ಅಣುಬಾಂಬುಗಳನ್ನು, ಭೂಮಿಯನ್ನೇ ಜರುಗಿಸುವ ಭಾರೀ ಯಂತ್ರಗಳು, ಮತ್ತು ಸದಾ ವಿಷದ ಹೊಗೆ ಕಕ್ಕುವ ಚಿಮಣಿಗಳು, ಮೋಟಾರ್‌ಗಳು ಇತ್ಯಾದಿ ಇತ್ಯಾದಿಗಳು, ಇವೆಲ್ಲಾ ಭೂಮಿಯನ್ನು ಹಿಂಡಿ ಮಾಡಿದಂತವು. ಇದೇ ಇರಬೇಕು ಜ್ಞಾನದ ಬಲದಿಂದಾದ ಅಜ್ಞಾನದ ಕೇಡುಗಳು.

ಇವೆಲ್ಲ ಸೇರಿ, ಜಲಚರ, ಬಸವನಹುಳು, ಹಳ್ಳಿಗಳು, ಮಡಕೆ, ನೇಗಿಲು, ಬಾವಿ, ಚಂದ್ರ, ಮೋಡಗಳ ನಾಶದ ಷರಾ ಬರೆದು ಕುಂತಿರುವುದನ್ನು ಪ್ರಸನ್ನ ತಮ್ಮ ಪುಸ್ತಕದ ಪುಟಪುಟದಲ್ಲೂ ಕಾಣಿಸುತ್ತಾರೆ. ಯಂತ್ರಗಳನ್ನು ಕಳಚೋಣ ಬನ್ನಿ ಎಂದು ಎಲ್ಲರನ್ನೂ ಕರೆಯುತ್ತಾರೆ. ಅವರಲ್ಲೂ ಅವರು ಯಂತ್ರಗಳನ್ನು ನಡೆಸುವ ಕೈಗಳನ್ನು ಹೆಚ್ಚಾಗಿ ನಂಬುತ್ತಾರೆ. ಅಂದರೆ ಕಾರ್ಮಿಕರೇ, ಈ ಕ್ರಿಯೆಯಲ್ಲಿ

ಮುಂಚೂಣಿಯಲ್ಲಿರಬೇಕೆಂದು ಬಯಸುತ್ತಾರೆ. ಯಂತ್ರಗಳನ್ನು ಜೋಡಿಸಿದವರಿಗೆ ಅವುಗಳನ್ನು ಬಿಚ್ಚಿ ಬಯಲು ಮಾಡುವುದು ಗೊತ್ತಿರುತ್ತದೆ ಎಂಬ ಆಸೆ ಅವರದು. ಆದರೆ ಇಲ್ಲೊಂದು ತೊಡಕಿದೆ. ಯಂತ್ರಗಳನ್ನು ಬಿಚ್ಚಿ ಬಯಲು ಮಾಡುವುದಕ್ಕೆ ಅನ್ನದ ಬದಲೀದಾರಿಯ ಭರವಸೆಗಳು ಕಣ್ಣಿಗೆ ಕಾಣಬೇಕಾಗುತ್ತದೆ. ಅವುಗಳನ್ನು ನಿಚ್ಚಳವಾಗಿ ಕಾಣಿಸಬೇಕು.

ಇಡೀ ಜಗತ್ತಿನಲ್ಲಿ ಪ್ರಕೃತಿಯನ್ನೆ ತಿಂದುಹಾಕಿಬಿಡಬಲ್ಲ ಯಂತ್ರಗಳ ಅಪಾಯದ ಬಗೆಗೆ ಕಾರ್ಯಪ್ರವೃತ್ತರಾದ ಗಾಂಧೀಜಿ ಈ ಕೃತಿಯಲ್ಲಿ ಸ್ಥಾಯೀಭಾವವಾಗಿ ಹರಿದಿರುವುದು ಸಹಜವಾಗಿದೆ. ಪ್ರಸನ್ನ ಪ್ರಸ್ತಾಪಿಸಿರುವ ಧರ್ಮಗಳು ಅನುಕೂಲಸಿಂಧು ಎಂಬಂತೆ ತನ್ನ ಬುಡಕ್ಕೆ ಬಂದಾಗ ಮಾತ್ರ ಯಂತ್ರ ವಿರೋಧಿ ನಿಲುವುಗಳನ್ನು ತಳೆದಿವೆಯೇ ಹೊರತು, ಇಡಿಯಾಗಿ ಅವುಗಳೆಂದೂ ಅಯೋಧ್ಯೆ, ರೋಂ, ಬಾಗ್ದಾದ್ ಪರವಾದ ಧೋರಣೆಯಲ್ಲಿಯೇ ಮುನ್ನುಗ್ಗಿವೆ. ನಗರಗಳಿಗೂ, ಧರ್ಮಗಳಿಗೂ ಎಲ್ಲಿಲ್ಲದ ಪ್ರೇಮ. ಹೀಗಾಗಿ ಅವುಗಳ ಹಳ್ಳಿಗಳೆಡೆಗಿನ ಚಲನೆ ನಂಬಲರ್ಹವಾದುದೇನೂ ಆಗಿರಲಿಲ್ಲ. ಪ್ರಭುತ್ವಗಳಿಗೂ ಈ ಮಾತು ಇನ್ನೂ ನಿಚ್ಚಳವಾಗಿ ಅನ್ವಯಿಸುತ್ತದೆ.

''ಯಾವ ಧರ್ಮಗ್ರಂಥವೂ ಸ್ವಯಂಚಾಲಿತ ಯಂತ್ರಗಳ ವಿಮರ್ಶೆ ಮಾಡುವುದಿಲ್ಲ. ಧರ್ಮಗ್ರಂಥಗಳು ರಚನೆಯಾದದ್ದು ಅಥವಾ ಪ್ರವಾದಿಗಳು ಬದುಕಿದ್ದದ್ದು ಕೈಗಾರಿಕಾ ಕ್ರಾಂತಿಗಿಂತ ಮೊದಲು ಎಂಬುದು ಕಾರಣವಿರಬಹುದು. ಆದರೆ ಧರ್ಮಗುರುಗಳು ಆ ಕೆಲಸ ಮಾಡಬಹುದಿತ್ತು ಮಾಡಲಿಲ್ಲ'' ಎನ್ನುವ ಪ್ರಸನ್ನರಿಗೆ ಧರ್ಮಗಳ ಮೇಲೆ ಕಿಂಚಿತ್ ನಂಬಿಕೆ. ಆದರೆ ಈ ನಂಬಿಕೆಗೆ ಕಾರಣಗಳೇ ಇಲ್ಲ. ಏಕೆಂದರೆ, ಧರ್ಮಗಳಿಗೆ, ಪ್ರಭುಗಳು, ಯಂತ್ರೋದ್ಯಮಿಗಳು ಕಳ್ಳಸಾಗಣೆ, ಹಡಗು ವ್ಯಾಪಾರಿಗಳು ಖಾಸಾ ಖಾಸಾ ದೋಸ್ತರು. ಇದೀಗ ಎಲ್ಲ ಧರ್ಮಗಳ ಗುರುಗಳು ವಾಕಿಂಗ್, ಯೋಗ, ಸರಳ ಊಟ, ತರಕಾರಿ, ಗಿಡಮೂಲಿಕೆ ಬಗೆಗೆ ಟಿ.ವಿ. ಚಾನೆಲ್‌ಗಳ ಮೂಲಕ ದಿನವೂ ಪ್ರಚುರ ಪಡಿಸುತ್ತಿದ್ದಾರೆ. ಜಾಹಿರಾತುಗಳು ಇದಕ್ಕೆ ತದ್ವಿರುದ್ಧವಾಗಿ ಆದರೆ ಬಹಳ ಆಕರ್ಷಕವಾಗಿ ಯಂತ್ರಬಿತ್ತನೆ ಮಾಡುತ್ತಲೇ ಇವೆ. ''ಯಂತ್ರಗಳ ಸುಖವನ್ನು ತ್ಯಜಿಸುವುದು ಸುಲಭ ಸಾಧ್ಯವಲ್ಲ'' ಎಂದು ಸಾಧಿಸಿ ತೋರುತ್ತಲೇ ಇರುತ್ತವೆ. ಇದು ಅವುಗಳ ಅಜೆಂಡಾ.

'ಯಂತ್ರಗಳನ್ನು ಕಳಚೋಣ ಬನ್ನಿ' ಪುಸ್ತಕದೊಳಗೆ ಒಂದು ಹೊಸ ತತ್ವಜ್ಞಾನದ ಹುಟ್ಟಿಗೆ ಬೇಕಾದ ಪರಿಕರಗಳು ಹರಡಿಕೊಂಡಿವೆ. ಇವು ಕೇವಲ ಯಂತ್ರಗಳ ವಿರುದ್ಧದ ಚರ್ಚೆಯನ್ನಷ್ಟೆ ಮಾಡದೆ, ಭೂಲೋಕವೆಂಬ ಮಹಾಯಂತ್ರದೊಳಗೆ ಸರಿದಾಡುತ್ತಿರುವ ಅಸಂಖ್ಯಾತ ಸ್ವಯಂಚಾಲಿತ ಯಂತ್ರಗಳ ಉಳಿವಿನ ಕ್ರಮಗಳನ್ನು ಸೂಚಿಸುತ್ತಿದೆ. ನಿಜ, ಇಲ್ಲಿ ರೂಪುಗೊಳ್ಳುತ್ತಿರುವ ತತ್ವಜ್ಞಾನದ ಸ್ವರೂಪ ಖಚಿತಗೊಳ್ಳದಿರಬಹುದು. ಆದರೆ, ಮನುಷ್ಯ ನಿರ್ಮಿತ ಯಂತ್ರಗಳ ಸದ್ದಿನ ನಡುವೆ ಹುಲ್ಲುಹೂವಿನ ಅರಳುವ ಸದ್ದು ಎಲ್ಲೆಡೆ ಹಬ್ಬುತ್ತಿರುವುದು ಮಾತ್ರ ನಿಜ. ಹಾಗೆಂದು ಎಲ್ಲವೂ ನಮ್ಮ ಕಣ್ಣೆದುರು ಸಂಭವಿಸುತ್ತದೆಯೆಂಬ ಭ್ರಮೆಯೂ ಬೇಕಾಗಿಲ್ಲ. ಇದು ವೈಯಕ್ತಿಕ ಸತ್ಯಾಗ್ರಹದ ಮೂಲಕವೇ ಆಗಬೇಕಾಗಿರುವುದರಿಂದ ಇದಕ್ಕೆ ಗಾಂಧಿ ಸಹನೆ, ಬುದ್ಧನ ಪ್ರೀತಿ ಬೇಕಾಗುತ್ತದೆ.

ನಮ್ಮ ನಡುವೆ ಶರವೇಗದಲ್ಲಿ ಚಲಿಸುವ ಯಂತ್ರಗಳ ಪಕ್ಕದಲ್ಲಿಯೇ ಮೆಲ್ಲಮೆಲ್ಲನೆ ನಡೆಯುವ ಸವಾಲಿದೆ. ಈ ಸವಾಲನ್ನು ಸವಾಲೆಂದೇ ತಿಳಿಯದೆ ಸಹಜವಾಗಿಯೇ ಸ್ವೀಕರಿಸುವ ಕೋಟಿ ಕೋಟಿ ಜನರಿದ್ದಾರೆ. ಇವರನ್ನು ಬಡವರು ಎಂದು ಕರೆಯಲಾಗುತ್ತಿದೆ. ಕಾಲ ಕಸವಾಗಿ ಪರಿಗಣಿಸಿ ಎಲ್ಲರ ಕಾಲಡಿಗೂ ಹಾಕಿ ತುಳಿಸಲಾಗುತ್ತಿದೆ. ಹೀಗಾಗಿ ಅವರ ಸಹಜ ಮೆಲ್ಲಮೆಲ್ಲನೆಯ ನಡಿಗೆ

ಸೋಮಾರಿತನದ್ದೂ ದಾರಿದ್ರ್ಯದ್ದೂ ನಿರ್ಗತಿಕ ಸಂತರದ್ದೂ ಆಗಿ ಕಾಣುತ್ತಿದೆ. ಈ ಮಧ್ಯೆ ಅವರು ಅನಿಮೀಯಾದ ಅರೆಮನುಷ್ಯರಾಗಿ ಪರಿವರ್ತನೆಯಾಗಿದ್ದಾರೆ. ಈ ಅನಿಮೀಯಾಕ್ಕೆ ಕಾರಣ ಅವರು ಬೃಹತ್ ಯಂತ್ರಗಳ ಒಡೆಯರ ರಕ್ತವಾಗಿ, ಆಹಾರವಾಗಿ, ಶಕ್ತಿಯಾಗಿ ಬಳಕೆಯಾಗುತ್ತಿರುವುದೇ ಆಗಿದೆ. ರೈತರು, ಕಾರ್ಮಿಕರು, ಮಹಿಳೆಯರು ನೆನಪಾದರೆ ಒಳ್ಳೆಯದು.

ಅವರವರ ನೇಗಿಲ, ಮಗ್ಗದ, ತಿಗರಿಯ ಇನ್ನಿತರ ಸಾವಿರಾರು ಉಪಕರಣಗಳ ಅನ್ನಫಲ ಅವರವರಿಗೆ ಸಿಗುವಂತಾಗುವುದು ಮತ್ತು ಯಂತ್ರಗಳ ನಿರಾಕರಣೆ ಎರಡೂ ಒಟ್ಟೊಟ್ಟಿಗೆ ಆಗಬೇಕಾದ ಕೆಲಸಗಳು. ಇದು ಸಾಧ್ಯವಾ?

ರಾಜಮಂತ್ರಗಳು, ಧರ್ಮ ತಂತ್ರಗಳು, ಜಾತಿ ಮಂತ್ರ, ಕೋಟೆ, ಸೈನ್ಯ ಪಿರಂಗಿ, ಬಂದೂಕು, ಕಂದಕ, ಮರಣದಂಡನೆ, ಮುಂತಾದ ಅಸ್ತ್ರಗಳ ಮೂಲಕ 'ಎಂದೆಂದೂ ನಾವೇ' ಎಂದು ಆಳುತ್ತಿದ್ದ ಜಗತ್ತಿನ ಸಾವಿರಾರು ರಾಜ ಮಹಾರಾಜರನ್ನು ಹೇಳಹೆಸರಿಲ್ಲದಂತೆ ಮಾಡಿದ ಹೋರಾಟ ಸಾಧಿತವಾಗಿರುವಾಗ, ಗಾಳಿ, ನೀರು, ಭೂಮಿಯ ಜೀವಜಾಲದ ಛಿದ್ರತೆಗೆ ಕಾರಣವಾಗಿರುವ ಯಂತ್ರಗಳ ಅನ್ನದ ಹಕ್ಕಿನ – ನಿರಾಕರಣೆಯ ಹೋರಾಟ ಯಾಕೆ ಸಾಧ್ಯವಿಲ್ಲ. ಈ ಬಗೆಯ ಹೋರಾಟಕ್ಕೆ ಮತ್ತು ಪ್ರಸನ್ನ ಅವರ ತತ್ವಜ್ಞಾನಕ್ಕೆ ದೊಡ್ಡ ಚರಿತ್ರೆಯೇ ಇದೆ. ರಾಜ್ಯ ಸಾಮ್ರಾಜ್ಯಗಳು, ಧರ್ಮಸಂಸ್ಥೆಗಳು ವೇಗದ ಬಾಲ ಹಿಡಿದ ವಿವಿಧ ಯಂತ್ರಗಳ ಜೊತೆಗೆ ಸಂಧಾನದಲ್ಲಿ ಸಂಶೋಧನೆಗಳಲ್ಲಿ ತೊಡಗಿದ್ದಾಗ, ಅವುಗಳನ್ನೆಲ್ಲಾ ತಿರಸ್ಕರಿಸಿ ಕಾಲ್ನಡಿಗೆ, ಧ್ಯಾನ, ಪ್ರೀತಿ, ಸಹಬಾಳ್ವೆ, ಸರಳತೆ ಇತ್ಯಾದಿ ಮರ ಸಂಬಂಧಿ, ಪ್ರಾಣಿ ಸಂಬಂಧಿ ತತ್ವಗಳನ್ನು ಪ್ರತಿಪಾದಿಸಿ ಪಬ್ಬಿಸುತ್ತಾ ಬಂದವರ ದೊಡ್ಡ ಪಟ್ಟಿಯೇ ಇದೆ. ಇಂದಿಗೂ ಎಲ್ಲೆಲ್ಲೂ ಒಳಿತಿನ ಬೀಜಗಳು ಸಿಗುತ್ತಿರುವುದಕ್ಕೆ ಕಾರಣ ಇದೇ ಆಗಿದೆ.

ಯಂತ್ರ-ಯಂತ್ರಗಳು ಸೇರಿ ಎಲ್ಲೆಲ್ಲೂ ಮಂತ್ರ ಪಾಳ್ಯಗಳು ಸೃಷ್ಟಿಗೊಂಡಿರುವ ಈ ನಮ್ಮ ಕಾಲದಲ್ಲೂ, ಪ್ರಕೃತಿಯೇ ಈ ಯಂತ್ರ ಪಾಳ್ಯಗಳನ್ನು ತಿರಸ್ಕರಿಸುತ್ತಿದೆ. ಇಂಥ ಹೊತ್ತಲ್ಲಿ ಗಾಂಧಿಯ ಚರಕದ ನೂಲಿಗೆ, ಫುಕುವೋಕಾನ ಎರೆಹುಳದ ಹಿಕ್ಕೆಗೆ, ರಾಜೇಂದ್ರಸಿಂಗ್, ಅನಿಲ್ ಅಗರವಾಲರ ಮಳೆನೀರ ತೇವಕ್ಕೆ ಅಣ್ಣಾಹಜಾರೆಯ ಜನಸಂಧಾನಕ್ಕೆ, ತನ್ನ ಜೀವಿತದ ಕಾಲಾವಧಿಯ ೭೫ ವರ್ಷಗಳಲ್ಲಿ ಮೂರು ಮೈಲಿ ಆಚೀಚೆ ಚಲಿಸದ ನಮ್ಮೂರಿನ ಅಂದಾನಯ್ಯ– ಚೆನ್ನಮ್ಮರ ಧ್ಯಾನಕ್ಕೆ, ತಿಮ್ಮಕ್ಕನ ನೆರಳಿಗೆ, ಸಿರಿಯಜ್ಜಿಯ ಹಾಡಿಗೆ ಅಪಾರ ಬಾಳಿಕೆ ಇರುವಂತೆ ಹೆಚ್ಚು ಆಧುನಿಕವೆಂಬಂತೆ ಕಾಣುತ್ತಿದೆ. ಹೀಗಾಗಿ ಇನ್ನು ಮೇಲೆ ಯಂತ್ರಗಳು ಶ್ರೀಮಂತಿಕೆಯ, ಗೌರವದ, ಹೆಚ್ಚುಗಾರಿಕೆಯ ಸಂಕೇತಗಳಾಗಿ ಉಳಿಯಲಾರವು. ಹೆಚ್ಚು ಹೆಚ್ಚು ಯಂತ್ರಗಳ ಬಳಕೆಯು ಹಿಂಸೆಯ, ಅವಮಾನದ ಅಸಹಜತೆಯ ಕೊಲೆಪಾತಕವಾದ ಮಾರ್ಗವಾಗಿ ತೋರುವುದು ಖಂಡಿತ.

ಯಂತ್ರಯುಗದಲ್ಲಿ ಯಂತ್ರಗಳಷ್ಟೆ ಯಂತ್ರಗಳಲ್ಲ, ಮನುಷ್ಯರೂ ಯಂತ್ರಗಳೇ. ಮನುಷ್ಯರ ಮೈ-ಮೆದುಳುಗಳ ಬಳಕೆ ವಿಪರೀತವಾಗಿದೆ. ಮನುಷ್ಯೇತರ ಜೀವಿಗಳ ದೃಷ್ಟಿಯಲ್ಲಿ ಮೊದಲು ನಿವಾರಿಸಬೇಕಾದ, ಕಳಚಬೇಕಾದ ಯಂತ್ರ ಈ ಮನುಷ್ಯ ಯಂತ್ರ. ಎಲ್ಲೆಡೆಯೂ ಮನುಷ್ಯ ಪ್ರವೇಶವು ಪ್ರಾಕೃತಿಕ ಚಲನೆಗಳು ಅಸ್ತವ್ಯಸ್ತಗೊಂಡು ಭಯದ ನೆರಳು ಹಬ್ಬಲು ಕಾರಣವಾಗಿದೆ. ದೊಡ್ಡದು ಇನ್ನೂ ದೊಡ್ಡದನ್ನು ಕಟ್ಟುವ ಭರದಲ್ಲಿ ಭೂಮಿಯೆಂಬ ಹಸ್ತ ತಪ್ಪುತ್ತಿದೆ. ಇದು ಮನುಷ್ಯರ ಅಂತರಂಗ ಮತ್ತು ಬಹಿರಂಗ ಶುದ್ಧಿಗಳ ಸಾವಿಗೆ ಕಾರಣವಾಗಿದೆ ಮತ್ತು ಹುಸಿ ಕಲ್ಪನೆಗಳ ಹುಟ್ಟಿಗೆ ಪ್ರೇರಣೆಗಳನ್ನು ಒದಗಿಸಿದೆ. ಅಂಥ ಹುಸಿ ಕಲ್ಪನೆಗಳಲ್ಲಿ – ಚಿಕ್ಕದ್ದಕ್ಕಿಂತ ದೊಡ್ಡದು, ಅನ್ನಕ್ಕಿಂತ ಚಿನ್ನ, ನಿಧಾನಕ್ಕಿಂತ ವೇಗ, ಹಳ್ಳಿಗಿಂತ

ನಗರ, ಸತ್ಯಕ್ಕಿಂತ ಭ್ರಮೆ, ದುಡಿಮೆಗಿಂತ ದುಡ್ಡು, ಕಾಲಿಗಿಂತ ಕಾರು, ಭಾವಿ-ಕೆರೆ-ಕಟ್ಟೆಗಳಿಗಿಂತ ಬೋರ್‌ವೆಲ್, ಹಸಿರು ಬೇಲಿಗಿಂತ ಮುಳ್ಳಿನ ತಂತಿ ಬೇಲಿ... ಈ ಹುಸಿ ಕಲ್ಪನೆಗಳ ಅರಿವುಂಟಾದರೆ ಮನುಷ್ಯ ಯಂತ್ರಗಳು ಬಾಂಬುಗಳಾಗುವುದರಿಂದ ತಪ್ಪಿಸಿಕೊಳ್ಳಬಹುದು. ಚಿಕ್ಕ ಹಳ್ಳಗಳ ದಂಡೆಯಲ್ಲಿ ಚಿಕ್ಕಹಳ್ಳಿಗಳು ನೆಮ್ಮದಿಯ ಉಸಿರಾಡಬಹುದು. ಎರೆಹುಳು ನಿಶ್ಚಯವಾಗಿ ಭೂಮಿಯನ್ನು ಹಗುರಗೊಳಿಸಬಹುದು, ಹಿತ್ತಲು, ಕೊಪ್ಪಲು, ಸೊಪ್ಪಿನ ಮಡಿಗಳಿಗೆ ಘನತೆ ಪ್ರಾಪ್ತವಾಗುವುದು.

ಜಪಾನಿನಂತ ಮೈಕೈಗಳಿಗೆಲ್ಲಾ ಯಂತ್ರ ಕಟ್ಟಿಕೊಂಡ ದೇಶದಲ್ಲಿ ಫುಕುವೋಕಾ ಸಹಜ ಕೃಷಿ ಮೂಲಕ ಬಿತ್ತಹೊರಟ ತತ್ವಜ್ಞಾನದ ವಿವೇಕ ಇದೇ ಮಾದರಿಯದು. ಎತ್ತರೆತ್ತರಕ್ಕೆ ಬೆಳೆಯಬಾರದ, ಆದರೆ ನೆಲದಲ್ಲಿ ಹಬ್ಬಬೇಕಾದ ಒಲವಿನ ದಾರಿಯದು. ಒಂದು ಹುಲ್ಲು ಎಸಳು, ಲೋಕದ ಬದುಕಿಗೆ ಆಸರೆಯೂ ಆಗಬಲ್ಲ ಚೈತನ್ಯ, ಆದ್ದರಿಂದಲೇ ಫುಕುವೋಕಾ ಹೇಳುವುದು ಅದು – 'ಒಂದು ಹುಲ್ಲಿನ ಕ್ರಾಂತಿ' ಎಂದು. ಪ್ರಾಣಿ, ಪಕ್ಷಿ, ಗಿಡ, ಬಳ್ಳಿ, ಮರ, ಗೆಡ್ಡೆಗೆಣಸುಗಳು ಮುಪ್ಪುರಿಗೊಂಡ ನೆಲದಲ್ಲಿ ಯಂತ್ರಗಳಿಲ್ಲ, ವಿಷ ರಾಸಾಯನಿಕ, ಕೀಟನಾಶಕಗಳಿಲ್ಲ. ದೀಪದ ಬೆಳಕಿನಲ್ಲಿ ಎಲ್ಲವೂ ನಿಚ್ಚಳ. ಕತ್ತಲೆ ಸಲ್ಲಬೇಕಾದ ಗೌರವ ಕತ್ತಲೆಗೆ, ಬೆಳಕಿಗೆ ಸಲ್ಲಬೇಕಾದ ಗೌರವ ಬೆಳಕಿಗೆ. ಇದು ಫುಕುವೋಕಾ ನಮ್ಮ ಕಾಲದಲ್ಲಿಯೇ ಕಂಡರಿಸಿದ ಜೀವನವಿಧಾನ. 'ಸುಖ'ದ ಬದುಕಿಗೆ ಹೊಸ ವ್ಯಾಖ್ಯಾನ ನೀಡಿದ ಫುಕುವೋಕಾ ದೈಹಿಕ ಶ್ರಮ, ಪ್ರಾಕೃತಿಕ ಆಹಾರ, ಸುಖನಿದ್ರೆ, ಧ್ಯಾನ, ಮೌನ, ಪ್ರೀತಿ, ಸಂಗೀತ, ಕಾಲ್ನಡಿಗೆ ಇವೆಲ್ಲ ಸುಖಗಳೇ ಎನ್ನುತ್ತಾನೆ. ಅತಿ ಸುಖದ ಹಾಜರಾತಿಯು ನಿರ್ವೀರ್ಯತೆಗೆ, ಬಿಳಚಿಕೊಂಡ ಸ್ಥಿತಿಗೆ, ರೋಗ ಸ್ಫೋಟಕ್ಕೆ, ನಿದ್ರಾಹೀನತೆಗೆ, ಬಹುಜನರ ಹತ್ಯೆಗೆ ಕಾರಣವಾಗುತ್ತದೆ ಎಂಬುದು ಎಲ್ಲೆಲ್ಲೂ ಕಾಣುತ್ತಿರುವ ಭೀಕರ ಸತ್ಯವಾಗಿದೆ.


ಕೊನೆಗೆ:

ಗಾಂಧಿಯನ್ನು, ಫುಕುವೋಕಾ, ತಿಮ್ಮಕ್ಕ, ಬುದ್ಧ, ಕನಕ, ಹಜಾರೆ, ರಾಜೇಂದ್ರಸಿಂಗ್ ಚಿರಚಿಂತನೆಗಳಿಗೆ ಇಂಬುಗೊಟ್ಟವರನ್ನು ಇನ್ನೂ ಇನ್ನೂ ನೆನೆಯುವುದು ಪ್ರಸನ್ನ ಅವರು ಬೆನ್ನತ್ತಿರುವ ತತ್ವಜ್ಞಾನದ ಹಬ್ಬುವಿಕೆಗೆ ಸಹಾಯಕವಾಗುತ್ತದೆಯೇ ಹೊರತು, ಪುರಾಣೀಕರಣಗೊಂಡು ಕೊಬ್ಬಿದ ಶ್ರೇಷ್ಠತೆಯ ಎತ್ತರ (ಪುರುಷೋತ್ತಮ) ತಲುಪಿದ ರಾಮನ ಸುತ್ತ ಪ್ರಸನ್ನರೂ ಗಿರಕಿ ಹೊಡೆಯುವುದರಿಂದ ಅಲ್ಲ. ಹಾಗೆಯೇ ದೇವರಿಲ್ಲ, ಆದರೆ ಕಟ್ಟಿಕೊಳ್ಳುವ ಅಗತ್ಯವಿದೆ ಎಂಬ ನಿರರ್ಥಕ ಪ್ರಸ್ತಾವನೆಗಳೂ ಸಹ. ಇದರ ಬದಲು ದೆವರು, ದೇವರು, ಸರಳ ದೇವರ ಬಗೆಗಿನ ಇನ್ನಷ್ಟು ವಿಸ್ತೃತ ಚರ್ಚೆಗಳಾಗಿದ್ದರೆ ಸಂತೋಷದಿಂದ ಓದಬಹುದಾಗಿತ್ತು. ಆದರೆ ಪ್ರಸನ್ನವರು ಅದೇ ಹಳೇ ಗಂಡನ ಪಾದದತ್ತ ಮನಸ್ಸು ಹರಿಯಬಿಟ್ಟಿದ್ದಾರೆ. ಅಥವಾ ಹೀಗೂ ಮಾಡಬಹುದಿತ್ತು 'ಕುರ್ಚಿಯ ವ್ಯಸನ' ಭಾಗದಲ್ಲಿಗೆ ತಂದು ನಿಲ್ಲಿಸಬಹುದಿತ್ತು. ಪ್ರಸನ್ನ ಹೇಳುತ್ತಿರುವ ಯಂತ್ರ ಕಳಚುವ ಕೆಲಸ ಆರಂಭವಾಗಬೇಕು. ತೀವ್ರವಾಗಬೇಕು ನಿಜ. ಅದು ಕೊನೆ ಮುಟ್ಟುವವರೆಗೂ ಉಸಿರು ಬಿಗಿ ಹಿಡಿಯುವ ಅಗತ್ಯವಿಲ್ಲ. ಇದಕ್ಕೆ ದುಗುಡ ಯಾಕೆ? ದುಗುಡ ಇದ್ದರೂ ಅದನ್ನು ಮರೆಯಬೇಕು. ಚರಕದ ಮೂಲಕ ಯಾನ ಹೊರಟಿರುವ ಪ್ರಸನ್ನ ತಮ್ಮ ಹೊರೆ ಇಳಿಸಿ ಎತ್ತಲೋ ಹೋದರೆ ಆಗದು. ಅದು ಇಳಿಸುವ ಹೊರೆ ಅಲ್ಲವೇ ಅಲ್ಲ. ಹಾಗೆಯೇ ಬಳಲಿಸುವ ಹೊರೆಯಂತೂ ಅಲ್ಲವೇ ಅಲ್ಲ. ಈ ಯಾನಕ್ಕೆ ಕೊನೆಯೂ ಇಲ್ಲ, ಮೊದಲೂ ಇಲ್ಲ. ಆದ್ದರಿಂದ ಮುನ್ನುಡಿಯಲ್ಲಿರುವ ಈ ಅಪಸ್ವರ ಪುಸ್ತಕದ ಮುಂದಿನ ಆವೃತ್ತಿಯಲ್ಲಿ ಕಳಚಿಕೊಂಡರೆ ಒಳಿತು.

■

ಬಿಳಿಗೆರೆ, ತಿಪಟೂರು ತಾ॥
ಮೊಬೈಲ್: ೯೪೮೧೪ ೯೦೯೭೫

ಯಂತ್ರಗಳನ್ನು ಕಳಚೋಣ ಬನ್ನಿ: ಒಂದು ವಿಮರ್ಶಾತ್ಮಕ ಓದು



★ ಕವಿತ. ಪಿ. ಎನ್
★ ಡಸ್‌ಕಿನ್ ಜಳಕಿ

ಪ್ರಸನ್ನರ ಯಂತ್ರಗಳನ್ನು ಕಳಚೋಣ ಬನ್ನಿ ಪುಸ್ತಕದ ಈ ವಿಮರ್ಶೆಯನ್ನು, ಈ ಪುಸ್ತಕವನ್ನು ಹೇಗೆ ಓದಬೇಕು ಎಂಬ ವಿಚಾರದ ಮೂಲಕವೇ ಆರಂಭಿಸುವುದು ಮುಖ್ಯ. ಸೂಕ್ತ. ಯಾಕೆಂದರೆ, ಈ ಪುಸ್ತಕವನ್ನು ತಪ್ಪುತಪ್ಪಾಗಿ ಅರ್ಥ ಮಾಡಿಕೊಳ್ಳುವ ಹಲವಾರು ಸಾಧ್ಯತೆಗಳಿವೆ. ನಾವು ಗಮನಿಸಬೇಕಾದ ಒಂದು ಬಹು ಮುಖ್ಯ ವಿಚಾರವೆಂದರೆ, ಇದು ತನ್ನ ವಾದಗಳ ಸಮರ್ಥನೆಗಿಳಿಯುವ ಪುಸ್ತಕವಲ್ಲ. ಪುಸ್ತಕದ ಆರಂಭದಲ್ಲೇ ಪ್ರಸನ್ನರವರು ಹೇಳಿಬಿಡುವಂತೆ, ಇದು ಸಮಾಜ ಶಾಸ್ತ್ರೀಯ ಶಿಸ್ತಿನಲ್ಲಿ ತಯಾರಾದ ಪುಸ್ತಕವೂ ಅಲ್ಲ. ಅದಕ್ಕೆ ಸರಿಯಾಗಿ, ಇಲ್ಲಿನ ವಿಚಾರಗಳು ಬೆಳೆಯುವುದಿಲ್ಲ. ಬದಲಿಗೆ ಪದೇ ಪದೇ ಪುನರಾವರ್ತನೆಗೊಂಡು ಅವು ನಮ್ಮನ್ನು ಮತ್ತೆ ಮತ್ತೆ ವೈಚಾರಿಕವಾಗಿ ಕಾಡುತ್ತವೆ, ಆಳಕ್ಕಿಳಿಯುವ ಪ್ರಯತ್ನ ಮಾಡುತ್ತವೆ. ಅಂತಿಮವಾಗಿ, ಈ ಪುಸ್ತಕವು ಮಂಡಿಸುವ ವಿಚಾರಗಳನ್ನು ನಾವು ಒಪ್ಪುತ್ತೇವೋ ಇಲ್ಲವೋ ಎಂಬುದು ಇಲ್ಲಿ ಒಂದು ಗೌಣವಾದ ವಿಚಾರ. ಈ ಪುಸ್ತಕ ಎಲ್ಲದಕ್ಕಿಂತಲೂ ಹೆಚ್ಚಾಗಿ ನಮಗೆ ಇಷ್ಟವಾಗಿದ್ದು ಈ ಕಾರಣಕ್ಕಾಗಿ: ಇದು ನಮ್ಮನ್ನು ಯೋಚಿಸುವ ಒತ್ತಾಯಕ್ಕೆ ದೂಡುತ್ತದೆ.

ಪ್ರಸನ್ನರ ಪುಸ್ತಕ, 'ಮಾಡು-ಮಾಡಬೇಡಗಳ' ಒಂದು ಪಟ್ಟಿಯಲ್ಲ. ಇದು ಒಂದು ಆತ್ಮ ವಿಮರ್ಶೆ: ಆತ್ಮ ವಿಮರ್ಶೆಮಾಡಿಕೊಳ್ಳಲು ನಮಗೊಂದು ಕರೆಯೋಲೆ. ಆದ್ದರಿಂದ, ಈ ಪುಸ್ತಕವನ್ನು ನಾವು ಆತ್ಮ ವಿಮರ್ಶೆಗೆ ಒಳಪಡಿಸಿದ ವಿಚಾರಗಳು ಎನ್ನುವ ರೀತಿಯಲ್ಲೇ ಚರ್ಚೆಗೆತ್ತಿಕೊಳ್ಳುತ್ತೇವೆ. ಇಲ್ಲಿ ಬರುವ ಹಲವಾರು ವಿಚಾರಗಳು ನಮಗೆ ಅತಿರೇಕ ಹಾಗೂ ಕಪಟ ಎನಿಸಿದರೂ ಎನಿಸಬಹುದು. ಅದು ಸಹಜ. ಉದಾ: ಪುಟ ೬೯-೭೦ರಲ್ಲಿ ಬರುವ ಸಂವಹನ ತಂತು, ನಂಬಿಕಾರ್ಹತೆಯ ವಿಚಾರಗಳನ್ನು ಮರಳಿ ಪ್ರಸನ್ನರವರಿಗೆ ಕೇಳಿಬಿಡೋಣ ಎಂದು ಅನ್ನಿಸಬಹುದು. ಸಮಸ್ಯೆಯೆಂದರೆ, ಹೀಗಾದಾಗ ನಾವು ಪುಸ್ತಕದಲ್ಲಿನ ಚಿಂತನೆಗಳ ಕುರಿತು ಚಿಂತಿಸುವ ಮೊದಲೇ ಅದರ ಕುರಿತು ಒಂದು ನಿರ್ಣಯಕ್ಕೆ ಬಂದು ಬಿಟ್ಟಿರುತ್ತೇವೆ. ಹಾಗೆಂದ ಮಾತ್ರಕ್ಕೆ ಪ್ರಸ್ತುತ ಪುಸ್ತಕದ ವಿಮರ್ಶೆ ಸಲ್ಲವೆಂದೇನೂ ನಮ್ಮ ಧೋರಣೆಯಲ್ಲ. ನಾವೂ ಕೂಡ, ಈ ಲೇಖನದಲ್ಲಿ, ಎಲ್ಲೆಲ್ಲಿ ಈ ಪುಸ್ತಕದ ವಿಚಾರಗಳು ಹದಮೀರಿ ಹೋಗುತ್ತಿದೆ ಎನಿಸುತ್ತದೆಯೋ, ಎಲ್ಲೆಲ್ಲಿ ಇದು ವಸಾಹತು ಗ್ರಹಿಕೆಯನ್ನೆ ಯಥಾವತ್ತಾಗಿ ಒಪ್ಪಿಕೊಂಡುಬಿಟ್ಟಿದೆ ಎನಿಸುತ್ತದೆಯೋ ಅಲ್ಲಲ್ಲಿ

ಈ ಪುಸ್ತಕ ಏನನ್ನು ಹೇಳುತ್ತದೆ?

'ನಾವು ಕಳಚಬೇಕಾದದ್ದು ಸ್ವಯಂಚಾಲಿತ ಯಂತ್ರಗಳನ್ನು' (೧೧೦): ಇದು ಈ ಪುಸ್ತಕದ ಸಾರಾಂಶ. ಆದರೆ, ಈ ಹೇಳಿಕೆಯನ್ನು ಅರ್ಥಮಾಡಿಕೊಳ್ಳುವುದು ಮಾತ್ರ ಸರಳವಾದ ವಿಚಾರವೇನು ಅಲ್ಲ. 'ಯಂತ್ರಗಳನ್ನು ಕಳಚುವುದು' ಎಂದರೇನು? ಹೇಗೆ? ಇತ್ಯಾದಿ ಪ್ರಶ್ನೆಗಳಿಗೆ ನಾವು ಮೊದಲು ಉತ್ತರ ಕೊಟ್ಟುಕೊಳ್ಳಬೇಕಾಗುತ್ತದೆ. ಯಂತ್ರಗಳನ್ನು ಕಳಚುವ ಚಳುವಳಿಯೆಂಬುದು, ಲೇಖಕರೆ ಹೇಳುವಂತೆ, ಹಲವಾರು ಆಧುನಿಕ ಭ್ರಾಂತಿಗಳನ್ನು ಕಳಚುವ ಒಂದು ಚಳುವಳಿ (೧೪೦). ಹಾಗೆಂದೇ, ಪುಸ್ತಕವು ಹಲವು ಸಮಕಾಲೀನ ಭ್ರಾಂತಿಗಳನ್ನು ವಿಮರ್ಶೆಗೆತ್ತಿಕೊಳ್ಳುತ್ತದೆ: ಜಾತಿ ಮತ್ತು ಮತೀಯ ಕಲಹ, ಆಹಾರ ಮತ್ತು ಸಂಪತ್ತಿನ ವ್ಯಾಮೋಹ ಇತ್ಯಾದಿ. ಲೇಖಕರು ಹೇಳುವಂತೆ, ಈ ಎಲ್ಲ ಭ್ರಾಂತಿಗಳಿಗೆ ಭದ್ರವಾದ ಬುನಾದಿ ಒದಗಿಸಿರುವುದು ಯಂತ್ರನಾಗರೀಕತೆ.

'ಯಂತ್ರಗಳನ್ನು ಕಳಚುವುದು' ಎನ್ನುವ ಪದ ಬಹಳ ಭಾರವಾಗಿ ಕಂಡರೂ ಪ್ರಸನ್ನರವರು ಇದನ್ನು ಒಂದು 'ಸಣ್ಣದೊಂದು ತ್ಯಾಗ' (೩೦) ಎಂದುಬಿಡುತ್ತಾರೆ. ಈ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಒಂದು ಸರಳವಾದ ದಾರಿಯೆಂದರೆ ಗಾಂಧೀಜಿಯವರ voluntary poverty ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು. ಮನೆಯಲ್ಲಿ ಎರಡು ಕಾರುಗಳಿದ್ದರೆ, ಒಂದನ್ನು ಬಿಟ್ಟು ಉಳಿದ ಒಂದೇ ಕಾರಿನಲ್ಲಿ ದಿನಸಾಗಿಸುವುದು, ಅಥವ ಮನೆಯಲ್ಲಿ ನಾಲ್ಕು ಸೆಲ್ ಫೋನ್‌ಗಳಿದ್ದರೆ, ಎರಡು ಸೆಲ್ ಫೋನ್‌ಗಳಿಗೋ ಅಥವ ಒಂದು land line ಫೋನಿಗೋ ನಮ್ಮ ಅವಶ್ಯಕತೆಯನ್ನು ಸೀಮಿತಗೊಳಿಸಿಕೊಳ್ಳುವುದು ಈ voluntary poverty ಗೆ ಒಂದು ಚಿಕ್ಕ ಉದಾಹರಣೆ. ಇದು ಪ್ರಸನ್ನರ ಸಲಹೆ ಕೂಡ. ಹೀಗೆ ನೋಡಿದಾಗಲಷ್ಟೆ, 'ಯಂತ್ರಗಳನ್ನು ಕಳಚುವುದು' 'ಸಣ್ಣದೊಂದು ತ್ಯಾಗ'ವಾಗಿ ಕಾಣಿಸುವುದು. ಈ ತ್ಯಾಗವೆ ಸತ್ಯಾಗ್ರಹ; ಅದೇ 'ಆಧ್ಯಾತ್ಮಿಕ ಚಳುವಳಿ' (೩೦).

ಹಾಗೆ ನೋಡುವುದಾದರೆ, ಗಾಂಧಿ ಹೇಳುವಂತೆ, ನಾವು ಕಳಚಬೇಕಾದದ್ದು ಯಂತ್ರಗಳನ್ನಲ್ಲ, ಅವುಗಳ ಮೇಲಿನ ಅತಿಯಾದ ಮೋಹವನ್ನು. ಅವರದೇ ಮಾತಿನಲ್ಲಿಡುವುದಾದರೆ, ಹೇಗೆ ದೇಹವೆಂಬುದು ಆತ್ಮೋದ್ಧಾರಕ್ಕೆ ಅಡ್ಡಿ ಬಂದಾಗ, ದೇಹವನ್ನು ತಿರಸ್ಕರಿಸುತ್ತೇವೋ ಹಾಗೆಯೆ ಯಂತ್ರಗಳನ್ನು ಸಹ, ಅದು ಸಮಾಜದ ಒಳಿತಿಗೆ ಅಡ್ಡಿಬಂದಾಗ ತಿರಸ್ಕರಿಸಬೇಕು (೧೧೫). ಆದರೆ, 'ಮೋಹವನ್ನು ಬಿಡಬೇಕು' ಎನ್ನುವ ಪರಿಕಲ್ಪನೆ ನಿತ್ಯ ಜೀವನದ ಬೇಕು-ಬೇಡಗಳಿಗೆ ಒಗ್ಗಿಸಬೇಕಾದರೆ ಅದನ್ನು voluntary poverty ಯಂತಹ ನಿತ್ಯ ತ್ಯಾಗದ ರೂಪದಲ್ಲಿ ರೂಢಿಗೊಳಪಡಿಸುವುದು ಸಹಾಯಕಾರಿ ಮಾತ್ರವಲ್ಲ ಬಹುಶಃ ಅನಿವಾರ್ಯ ಕೂಡ. ಗಾಂಧಿಯ ಈ ಮೇಲಿನ ಮಾತುಗಳು ಅರ್ಥವಾಗದಿದ್ದರೆ, ಪ್ರಸನ್ನರವರ ಪುಸ್ತಕವೂ ಅರ್ಥವಾಗುವುದಿಲ್ಲ. ಆದ್ದರಿಂದ, ಈ ವಿಚಾರ ಪ್ರಸ್ತುತ ಪುಸ್ತಕದ ಮೊದಲಿಗೇ ಬಂದಿದ್ದರೆ, ಇನ್ನಷ್ಟು ವಿಶದವಾಗಿ ಮಂಡನೆಯಾಗಿದ್ದರೆ, ಹೆಚ್ಚು ಉಪಯುಕ್ತವಾಗಿರುತ್ತಿತ್ತು.

ಇಲ್ಲಿ ನಮಗೊಂದು ಪ್ರಶ್ನೆ ಕಾಡಬಹುದು: ಹೀಗೆ ಯಂತ್ರಗಳನ್ನು ಕಳಚುವಲ್ಲಿನ ಹಿಂಸೆಯನ್ನು ಏನು ಮಾಡುವುದು? ಇದಕ್ಕೆ ಪ್ರಸನ್ನರ ಬಳಿ ಚಿಕ್ಕ ಆದರೆ ಸ್ಪಷ್ಟ ಮತ್ತು ನಿಖರವಾದ ಉತ್ತರವಿದೆ. ಆ ಹಿಂಸೆಯನ್ನು ನಮ್ಮ ಬಲಿದಾನ, ತ್ಯಾಗ ಎಂದು ನೋಡಬೇಕು, ಎನ್ನುತ್ತಾರವರು (೨೮ ಮತ್ತು ಮುಂದಿನ ಪುಟಗಳು). ಈ ಬಲಿದಾನ, ತ್ಯಾಗವಿಲ್ಲದೆ ಸಮಕಾಲೀನ ಭ್ರಾಂತಿಗಳನ್ನು ಎದುರಿಸುವುದು ಸಾಧ್ಯವಿಲ್ಲ. ಅಷ್ಟೆ ಅಲ್ಲ, ಅದರ ಬಗ್ಗೆ ಮಾತನಾಡುವುದು ಬುಹುಶಃ ವ್ಯರ್ಥವೆ ಸರಿ.

ಪುಸ್ತಕದ ಕೆಲವು ವಿಶೇಷತೆಗಳು

ಭಾರತೀಯ ಬೌದ್ಧಿಕತೆಯಮೇಲೆ ವಸಾಹತುಶಾಹಿ ನಡೆಸಿದ ಬೌದ್ಧಿಕ ಆಕ್ರಮಣದ ಬಗ್ಗೆ ಈ ಪುಸ್ತಕ ಕೆಲವು ವಿಶೇಷ ಒಳನೋಟಗಳನ್ನು ಕೊಡುತ್ತದೆ. ಓದುಗನಿಗೆ ಆರಿಸಿಕೊಳ್ಳುವ ಜಾಣ್ಮೆ ಇರಬೇಕಷ್ಟೆ. ಮೊದಲೇ ತಿಳಿಸಿದಂತೆ, ಪ್ರಸನ್ನ ಒಬ್ಬ academician ಅಲ್ಲ, ಆತ ಒಬ್ಬ ಪಾರಂಪರಿಕ ಚಿಂತಕ. ಆತನ ಚಿಂತನೆಯ ಹಾಸುಗಳನ್ನು, ಹೊಕ್ಕುಗಳನ್ನು ಎಳೆ ಎಳೆಯಾಗಿ ಬಿಡಿಸಿಡುವ ಜವಾಬ್ದಾರಿ ಮಾತ್ರ ನಮ್ಮದು. ಇದರಲ್ಲಿ ಕೆಲವು ಎಳೆಗಳು, ವಸಾಹತುಶಾಹಿಯಿಂದಲೇ ಬಂದಂಥವು. ಉಳಿದಂಥವು, ಅವರದೇ ಸಂಸ್ಕೃತಿ, ಸಂಪ್ರದಾಯ, ಗತದಿಂದ ಬಂದ ಚರಕದ ನೂಲುಗಳು.

ಪ್ರತಿ-ಸಂಸ್ಕೃತಿಯ ಕುರಿತ ಪ್ರಸನ್ನ ಅವರ ಚಿಂತನೆ ಬಹಳ ಪ್ರಸ್ತುತವಾಗಿದೆ. ಹಳೆಯ ಸಂಸ್ಕೃತಿಯನ್ನು ವಿರೋಧಿಸಿ ಮತ್ತೊಂದು ಸಂಸ್ಕೃತಿ ಕಟ್ಟುವ ಅಥವ ಕಟ್ಟಬೇಕು ಎಂದು ಪರದಾಡುವ ಪ್ರವೃತ್ತಿ ಮತ್ತು ಚಡಪಡಿಕೆಯು ದಿನೇದಿನೇ ಏರುತ್ತಿದೆ. ಇದರ ಒಂದು ಪರಿಣಾಮವೆಂದರೆ, ಇಂದು ನಾವು ನಮ್ಮ ಸಂಸ್ಕೃತಿಯನ್ನು ಸಾರಾಸಗಟಾಗಿ ತಿರಸ್ಕರಿಸಿ ಬೇರೆ ಯಾರದೋ ಸರಕಿಗೆ ಜೋತು ಬೀಳುವ ಪರಿಸ್ಥಿತಿ ಬಂದೊದಗಿದೆ (೪೩-೪೬). ಇಲ್ಲೊಂದು ಸಣ್ಣ ಪ್ರಶ್ನೆ: ಆಧುನಿಕತೆ ಅಥವ ಪರಕೀಯ ಸಂಸ್ಕೃತಿಯನ್ನು ಅಳವಡಿಸಿಕೊಂಡರೆ ತಪ್ಪೇನು? ಲೇಖಕರು ತೋರಿಸಿಕೊಡುವಂತೆ, ಪರಕೀಯ ಸಂಸ್ಕೃತಿಯ ಮೋಹದಿಂದಾಗಿ ಇಂದು ನಾವು ನಮ್ಮ ಸ್ಥಾನಿಕ ಭಾಷೆಗಳು, ಜೀವನ ಶೈಲಿ, ಆಚರಣೆಗಳನ್ನು ತೀರಾ ಉಡಾಫೆಯಿಂದ ಕಂಡು ಅವನ್ನು ಮೂಲೆಗುಂಪು ಮಾಡತೊಡಗಿದ್ದೇವೆ. ಇದೇ ಪ್ರವೃತ್ತಿ ಮುಂದುವರೆದಲ್ಲಿ ಒಂದು ದಿನ ನಾವು 'ನಮ್ಮ ಸಂಸ್ಕೃತಿ' ಎಂದು ಹೇಳಿಕೊಳ್ಳಲು ನಮ್ಮ ಬಳಿ ಏನು ಉಳಿದಿರುವುದಿಲ್ಲವಷ್ಟೆ. ಇದು ಬರೀಯ ಅಭಿಮಾನದ ಮಾತಲ್ಲ, ಇದು ನಮ್ಮತನ ಕಳೆದುಕೊಳ್ಳುವ, ಅದರೊಟ್ಟಿಗೆ ಬರುವ ಹಿಂಸೆಯ ವಿಚಾರ.

ಮತೀಯ ಸಂಘರ್ಷದ ವಿಚಾರವಾಗಿ ಪುಸ್ತಕ ಮಂಡಿಸುವ ಬಹಳಷ್ಟು ವಿಚಾರಗಳು ಕನ್ನಡಕ್ಕೆ ಹೊಸ ವಿಚಾರಗಳು ಆದರೆ ಹೇಳುವ ಧಾಟಿ ಮಾತ್ರ ಹಳೆಯ ಹಾದಿಯನ್ನು ಹಿಡಿಯುವುದರಿಂದ ಅಪಾಯಕಾರಿಯೂ ಎನ್ನಬಹುದು. ಇಂದು ನಮ್ಮ ಬೌದ್ಧಿಕ ಜಗತ್ತಿನಲ್ಲಿ ಮುಸಲ್ಮಾನರ ಕುರಿತು ಎರಡು ರೀತಿಯ ವ್ಯತಿರಿಕ್ತ ಅಭಿಪ್ರಾಯಗಳಿವೆ. ಒಂದು ಪಂಗಡ ಅವರನ್ನು 'ಹೊರಗಿನಿಂದ ಬಂದ ಉಗ್ರವಾದಿಗಳು' ಎಂಬಂತೆ ಕಂಡರೆ, ಇನ್ನೊಂದು ಪಂಗಡ ಅವರನ್ನು 'ಸದಾ ತುಳಿತಕ್ಕೊಳಗಾದ, ಅಬಲ ಜನತೆ' ಎಂದು ಪರಿಗಣಿಸುತ್ತದೆ. ಈ ಎರಡು ಅತಿರೇಕದ ಅಭಿಪ್ರಾಯಗಳನ್ನಿಟ್ಟುಕೊಂಡು, ಮುಸಲ್ಮಾನರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟನಲ್ಲಿ ಕೆಲಸ ಮಾಡುವುದು ಅಥವ ಮುಸಲ್ಮಾನರ ಬಗ್ಗೆ ಸಮಾಜದಲ್ಲಿರುವ stereo typeಗಳನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯವೆ. ಪ್ರಸನ್ನರವರು, ಈ ಎರಡೂ ಪಂಗಡಕ್ಕೆ ಸೇರದೆ, ಮುಸಲ್ಮಾನರ ಸಾಮಾಜಿಕ ಸ್ಥಿತಿಗತಿಗಳನ್ನು ಪರಿಶೀಲಿಸುವ ಪ್ರಯತ್ನಮಾಡಿದ್ದಾರೆ. ಅಂತೆಯೆ, ಮುಸಲ್ಮಾನರು ವಿಪರೀತ ಮಕ್ಕಳು ಮಾಡುತ್ತಾರೆ, ಮುಸಲ್ಮಾನರು ವ್ಯವಹಾರದಲ್ಲಿ ಮೋಸಮಾಡುತ್ತಾರೆ, ಮುಸಲ್ಮಾನರ ದೇಶಭಕ್ತಿಯು ಅನುಮಾನಾಸ್ಪದವಾದದ್ದು ಇತ್ಯಾದಿ stereotypeಗಳನ್ನು ಅವರು 'ಅರ್ಧ ಸತ್ಯ'ವೆಂದು ಕರೆಯುವ ಧೈರ್ಯ ತೋರಿಸಿದ್ದಾರೆ(೧೪೪). ಅಷ್ಟೇ ಅಲ್ಲ, ಈ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ಅದಕ್ಕೊಂದು ಪರಿಹಾರ ಕಂಡುಹಿಡಿಯುವ ಕಾಳಜಿಯನ್ನು ಇಟ್ಟುಕೊಂಡಿದ್ದಾರೆ.

ಅದೇರೀತಿ, ರಾಮಾಯಣ/ಪುರಾಣಗಳ ಓದಿನ ಕುರಿತಾಗಿ ಪ್ರಸನ್ನ ಅವರು ನೀಡಿರುವ ಕೆಲವು

ಸೂಕ್ಷ್ಮ ವಿವರಣೆಗಳು ತುಂಬಾ ಮಹತ್ವದ್ದಾಗಿವೆ. ರಾಮಾಯಣವನ್ನು 'ಸಾಮಾನ್ಯ' ಜನ ಗ್ರಹಿಸುವ ರೀತಿಗು, ಕೆಲವು ವಿದ್ವಾವಂತ ಮತ್ತು ಐಡಿಯಲಾಜಿಕಲ್ ಸಂಘಟನೆಗಳು ಬಳಸಿಕೊಳ್ಳುವ ಪರಿಗು ಇರುವ ವ್ಯತ್ಯಾಸವನ್ನು ಪುಸ್ತಕದಲ್ಲಿ ಸೊಗಸಾಗಿ ಹಿಡಿದಿಟ್ಟಿದ್ದಾರೆ. 'ಸಾಮಾನ್ಯ' ಜನತೆ ಪುರಾಣಗಳ ಇತಿಹಾಸದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ ಏಕೆಂದರೆ 'ಸಾಮಾನ್ಯ' ಜನರ ಪಾಲಿಗೆ ಪುರಾಣ/ರಾಮಾಯಣ ಭೂತದಲ್ಲಿ ಗತಿಸಿಹೋದರೂ, ವರ್ತಮಾನದಲ್ಲಿ ನಿತ್ಯ ಜರುಗುವ, ಅವರದೇ ಜೀವನದ ಭಾಗವಾಗಿದೆ. ಅವರ ಪಾಲಿಗೆ, ರಾಮ ಯಾವುದೇ ಸಿದ್ಧಾಂತಗಳನ್ನು, "ಯಾವುದೇ ಉಪದೇಶವನ್ನೂ ನೀಡಲಿಲ್ಲ ... ತನ್ನಷ್ಟಕ್ಕೆ ಸರಳವಾದ ಹಾಗೂ ನೈತಿಕವಾದ ಬದುಕನ್ನು ಬದುಕುತ್ತ ಹೋದ. ಇದೇ ಮೂಲರಾಮನ ಸಂದೇಶ" (೧೭೬). ಆದ್ದರಿಂದ, ಆತನ ಆದರ್ಶವನ್ನು ನಾವು ಅನುಕರಿಸಬಹುದಷ್ಟೆ. ಅವನ ಹೆಸರಿನಲ್ಲಿ ಹೊಡೆದಾಡುವುದು, ಕಡಿಯುವುದು ಸಾಧ್ಯವಿಲ್ಲ.

ಇದಕ್ಕೆ ವ್ಯತಿರಿಕ್ತವಾದ, ರಾಮಾಯಣವನ್ನು ಓದುವ ಹೊಸದೊಂದು ಪದ್ಧತಿ ಕಳೆದ ಶತಮಾನದಲ್ಲಿ ಬೆಳೆದು ಬಂದಿದೆ. 'ರಾಮಾಯಣಕ್ಕೆ ಸಮಾನ್ಯಾತ್ಮಕವಾದ ಮೂರನೇಯದೊಂದು ಪಠ್ಯವಿದೆ. ಅದು ರೂಪಗೊಂಡದ್ದು, ಇತ್ತೀಚೆಗೆ; ಇಪ್ಪತ್ತನೆಯ ಶತಮಾನದಲ್ಲಿ... ರಮಾನಂದ ಸಾಗರರ ಟೀವಿ ಸೀರಿಯಲ್, ಅದ್ವಾನಿಯವರ ರಥಯಾತ್ರೆ ಹಾಗೂ ವೈದಿಕ ಧರ್ಮ... ಈ ಮೂರು ಒಟ್ಟಾಗಿ ಸೇರಿ ರೂಪಿಸಿರುವ ಪಠ್ಯ'. ಇದು ಸಹಬಾಳ್ವೆಯನ್ನು ಕಲಿಸಿಕೊಟ್ಟ ಪುರಾಣವೊಂದು, ಲೇಖಕರು ಹೇಳುವಂತೆ, ಹೀಗೆ ಅದ್ವಾನಿಯವರ ಕೈಯಲ್ಲಿ ಸಿಕ್ಕಿ 'ಅನ್ಯಧರ್ಮೀಯರ ಮೇಲೆ ಆಕ್ರಮಣ ನಡೆಸಲು' ಬಳಸಬಹುದಾದ ಅಸ್ತ್ರವಾಗಿ ಮಾರ್ಪಟ್ಟಿದೆ (೧೭೧). ಈ 'ಮೂರನೇಯ ಪಠ್ಯದಲ್ಲಿ ರಾಮನು, ಮೊದಲು ದೇವರೆ, ಕೊನೆಗೂ ದೇವರೆ, ...ಆದರೆ ವಾಲ್ಮೀಕಿಯ ಪಾತ್ರವಾದ ರಾಮ ಹಾಗಲ್ಲ, ಮೂಲರಾಮನಿಗೆ ದೈವತ್ವವೆಂಬುದು ಮುಳ್ಳಿನ ಕಿರೀಟ' (೧೭೨). ಹೀಗೆ ರಾಮಾಯಣವು ಅನುಕೂಲ ಸಿಂಧೂ ರಾಮಾಯಣವಾಗಿ ಪರಿವರ್ತಿತವಾಗುತ್ತಿರುವ ಕುರಿತು ಗಮನ ಸೆಳೆದದ್ದು ಪುಸ್ತಕದ ಒಂದು ಉತ್ತಮ ಸಾಧನೆ.

ಇನ್ನೂ ಪುಸ್ತಕದ ಭಾಷೆಯ ಬಳಕೆ, ಶೈಲಿ, ಆಪ್ತತೆಯ ಕುರಿತು ಹೇಳುವುದಾದರೆ: ಬರವಣಿಗೆ ಶೈಲಿ ಮತ್ತು ಭಾಷೆ ಸರಳವಾಗಿದೆ. ವಿಷಯವನ್ನು ಮನದಟ್ಟು ಮಾಡಲು ನಮ್ಮ ಸುತ್ತ-ಮುತ್ತಲಿರುವ ಉದಾಹರಣೆಗಳನ್ನು ಬಳಸಿಕೊಂಡಿರುವುದರಿಂದ, ಆ ವಿಷಯದೊಡನೆ ನಮ್ಮ ಆಪ್ತತೆ ಏರ್ಪಟ್ಟು ಅದು ನಮ್ಮದೇ ಸಮಸ್ಯೆ ಎಂಬ ಭಾವನೆ ಬೆಳೆಸಿ ಕೊಂಚ ಯೋಚಿಸುವಂತೆ ಮಾಡುತ್ತದೆ.

ಪುಸ್ತಕದ ಕೆಲ ಕುಂದು ಕೊರತೆಗಳು

ಪ್ರಸನ್ನರ ಇತಿಹಾಸ, ಫಿಲಾಸಫಿಯ ಜ್ಞಾನ ನಿಖರವಾಗಿದ್ದಿದ್ದರೆ, ಪುಸ್ತಕ ಮೂಲಕ ಮಂಡಿಸುವ ವಿಚಾರಗಳು ಇನ್ನಷ್ಟು ತೀಕ್ಷ್ಣವಾಗಿರುತ್ತಿತ್ತು. ಸ್ವಲ್ಪ ನಿಷ್ಠುರವಾಗಿ ಹೇಳುವುದಾದರೆ, ಪ್ರಸನ್ನರವರು, ತಾವು ಸಂಶೋಧನೆ ಮಾಡಿರದ ವಿಚಾರಗಳ ಬಗ್ಗೆ ಆತುರಾತುರವಾಗಿ ತಮ್ಮ ವಿಚಾರಗಳನ್ನು ಹೇಳದಿದ್ದರೆ ಪುಸ್ತಕದ ಮಹತ್ವ ನಿಜವಾಗಿಯು ಇನ್ನೂ ಹೆಚ್ಚುತ್ತಿತ್ತು. ಪುರೋಹಿತಶಾಹಿ (೮೩) ಮತ್ತು ಜಾತಿಯ ಕುರಿತು (೧೫೪, ೧೫೫, ೧೫೬) ಅವರು ಹೇಳುವ ವಿಚಾರಗಳಿಗೆ ಯಾವ ಆಧಾರವೂ ಇಲ್ಲ, ಆಧಾರವಿದೆ ಎಂದು ಅವರು ತೋರಿಸಿಕೊಡುವುದೂ ಇಲ್ಲ. ರಾಮನ ಕುರಿತು ನಮಗಿರುವ ತಪ್ಪು ವಿಚಾರಗಳ ಕುರಿತು ಪುಟಗಟ್ಟಲೆ ಬರೆಯುವ ಲೇಖಕ, ಮಾರ್ಕಂಡೇಯ ಮುನಿಯ ಕುರಿತು ಮಾತನಾಡುವಾಗ ಮತ್ತೆ ಅದೇ ಹಳೆಯ ವಿಚಾರ ಮತ್ತು ದೃಷ್ಟಿಕೋನಗಳಿಗೆ ಮರಳಿಬಿಡುತ್ತಾರೆ. ಬ್ರಾಹ್ಮಣರ ಮೇಲಿನ ಅವರ ಸಿಟ್ಟುಕೂಡ ಬಹಳ ಅತಾರ್ಕಿಕವಾದದ್ದು. ಅದೇರೀತಿ, ವಿಜ್ಞಾನದ ವಿರುದ್ಧದ ಅವರ ವಿಚಾರಗಳು, ಸೆಂಟಿಮೆಂಟುಗಳು

ಇನ್ನೊಂದು ಆಧಾರರಹಿತ ವಿಚಾರವೆನ್ನಲೇ ಬೇಕು (೪೩). ಯಾವ ರೀತಿಯ ಸಂಶೋಧನೆಯ ಆಧಾರದ ಮೇಲೆ ಈ ರೀತಿಯ ವಾದ ಮಂಡಿಸಲಾಗಿವೆ ಎಂಬುದು ಪುಸ್ತಕದಲ್ಲೆಲ್ಲೂ ಸ್ಪಷ್ಟವಾಗುವುದಿಲ್ಲ. ಈ ರೀತಿಯ ಆಧಾರವಿಲ್ಲದ ಹೇಳಿಕೆಗಳು, ಸಮರ್ಥನೆಯಿಲ್ಲದೆ ಪುಸ್ತಕದ ತುಂಬಾ ನೇತಾಡುತ್ತವೆ. ಈ ಎಲ್ಲ ಆಕ್ಷೇಪಣೆಗಳನ್ನು ಇಲ್ಲಿ ಸಮರ್ಥಿಸಿಕೊಳ್ಳುವುದು ಸಾಧ್ಯವಿಲ್ಲ. ಆದರೆ, ಜಾತಿ ಮತ್ತು ಕೋಮಿಗೆ ಸಂಬಂಧಪಟ್ಟ ವಿಚಾರಗಳ ಕುರಿತು ಒಂದೆರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ಕೊಡಬಹುದು.

ಒಂದೊಂದು ವೃತ್ತಿಯು ಒಂದೊಂದು ಜಾತಿಯಾಗಿ ರೂಪಿತಗೊಂಡಿದೆ ಎನ್ನುವುದು ಜಾತಿ ಪದ್ಧತಿ ಕುರಿತು ಪ್ರಸನ್ನರವರು ಹೊಂದಿರುವ ಗ್ರಹಿಕೆಗಳಲ್ಲಿ ಒಂದು. ಆದರೆ ಎಷ್ಟೋ ಜಾತಿಗಳು ನಾನಾ ಪ್ರಕಾರದ ವೃತ್ತಿ ಮಾಡುವುದನ್ನು ನಾವು ಕಾಣುತ್ತೇವೆ. ಈ ಸಮಸ್ಯೆಯನ್ನು ಬಗೆ ಹರಿಸುವುದು ಹೇಗೆ? ಪ್ರಸ್ತುತ ಪುಸ್ತಕ, ೧೯-೨೦ನೆ ಶತಮಾನದಲ್ಲಿ ಕುರುಬ-ಗೊಲ್ಲ-ಬ್ಯಾಡ ನಾಯಕ ಜಾತಿಗಳ ನಡುವೆ ನಡೆದ ವೃತ್ತಿಯ ಬದಲಾವಣೆಯ ವಿಷಯವನ್ನು ಪ್ರಸ್ತಾಪಿಸುತ್ತದೆ (೧೫೬). ಆದರೆ, ಇಂದಿನ ಸಮಾಜದಲ್ಲಿ ಪ್ರತಿ ಜಾತಿಯವರು ಪ್ರತಿಯೊಂದು ಉದ್ಯೋಗವನ್ನೂ ಮಾಡುವುದನ್ನು ನಾವು ನೋಡಬಹುದು. ಹಾಗಾದರೆ, ಈ ರೀತಿಯ ಒಂದು ಬೃಹತ್ತಾದ ವೃತ್ತಿ ಬದಲಾವಣೆ ನಡೆದಿದೆಯೆ? ಯಾವಾಗ ನಡೆಯಿತು? ಅಥವ, ಜಾತಿಗು ಮತ್ತು ವೃತ್ತಿಗೂ ನಡುವೆ ಇರುವ ಸಂಬಂಧ ಕೇವಲ ವಸಾಹತು ಲೇಖಕರು ಕಂಡ ಕನಸೇ?

ಪುರೋಹಿತಶಾಹಿಗೆ ಜಾತೀಯತೆಯಿಂದ ಲಾಭವಾಗಿದೆ ಎನ್ನುತ್ತದೆ ಪುಸ್ತಕ. ಯಾವ ಅರ್ಥದಲ್ಲಿ ಲೇಖಕರು ಲಾಭದ ಕುರಿತು ಮಾತನಾಡುತ್ತಿದ್ದಾರೆ? ಯಾವ ಲಾಭ? ಯಾವಾಗ ಮತ್ತು ಹೇಗೆ ಇದು ಆಗಿದ್ದು? ಈ ಪ್ರಶ್ನೆಗಳು ಪ್ರಸನ್ನರ ತೀಕ್ಷ್ಣದೃಷ್ಟಿಗೆ ಹೊಳೆಯದಿರುವುದು ಆಶ್ಚರ್ಯವೆ ಸರಿ. 'ಎಲ್ಲ ದೇಶಗಳ, ಎಲ್ಲ ಚರಿತ್ರೆಯಲ್ಲೂ, ಒಂದಲ್ಲ ಒಂದು ಅಸಮಾನತೆ, ಒಂದಲ್ಲ ಒಂದು ಊನ ಇದ್ದೇ ಇರುತ್ತದೆ. ಅಂತಹ ಊನಗಳು, ದೇವಸ್ಥಾನಗಳ ಜೊತೆ, ಧರ್ಮ ಸಂಸ್ಕೃತಿಗಳ ಜೊತೆ ಸಾಮಾನ್ಯವಾಗಿ ತಳೆ ಹಾಕಿಕೊಂಡಿರುತ್ತದೆ' (೪೦). ಎನ್ನುವ ಲೇಖಕ ಭಾರತ ದೇಶದ ಸಮಸ್ಯೆಗಳನ್ನು ಮಾತ್ರ ಜಾತಿ ಸಮಸ್ಯೆಯೆಂದು ಗುರುತಿಸುವುದು ಏಕೆಂಬುದು ಅರ್ಥವಾಗುವುದಿಲ್ಲ. ಇದು, ವಸಾಹತು ಗ್ರಹಿಕೆಯ ನೇರವಾದ ನಕಲಲ್ಲದೆ ಮತ್ತೇನು?

ಇಂತಹ ಎಷ್ಟೋ ವಿಚಾರಗಳು ಅಸ್ಪಷ್ಟವಾಗಿದ್ದರು ಸಹ ಪರಿಶೀಲನೆಗೊಳಪಟ್ಟ 'ಸತ್ಯ'ಗಳು ಎಂಬ ರೀತಿಯಾಗಿ ಲೇಖಕರು ಅವುಗಳನ್ನು ಮಂಡಿಸುವುದು ನಾವು ಪುಸ್ತಕದ ತುಂಬಾ ಕಾಣಬಹುದು. ಪರಂಪರೆಯ ರಕ್ಷಣೆ ಹಾಗೂ ದೇಶಿತ್ವದ ಕುರಿತು ಕಾಳಜಿ ಹೊಂದಿರುವ ಲೇಖಕರು ಇಂತಹ ಗ್ರಹಿಕೆಗಳನ್ನು ಪರಿಶೀಲನೆಗೊಳಪಡಿಸದೆ ಬಳಸಬಾರದಿತ್ತು.

ಕಡೆಯ ಮಾತು...

ಪ್ರಸನ್ನರ ಈ ಪುಸ್ತಕ ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಾಹಿತ್ಯ ಕಂಡಂತಹ ಒಂದು ಅತ್ಯುತ್ತಮ ವೈಚಾರಿಕ ಪುಸ್ತಕವೆನ್ನುವುದರಲ್ಲಿ ಎರಡು ಮಾತಿಲ್ಲ. ಬಹಳ ಕಾಲದಿಂದ ಗಾಂಧಿ ಚಿಂತನೆಗಳನ್ನು ಕುರಿತು ಚಿಂತಿಸುತ್ತಾ ಬಂದ ಲೇಖಕರಿಂದ ಈ ರೀತಿಯ ಪ್ರಬುದ್ಧ ಪುಸ್ತಕವೊಂದು ಬಂದಿರುವುದು ಹರುಷದ ವಿಚಾರ.

Centre for the Study of Local Cultures,
ಕುವೆಂಪು ವಿ.ವಿ. ಶಂಕರಘಟ್ಟ ೫೭೭೪೫೧

ಒಂದು ಪತ್ರ

ಮಾನ್ಯರೆ
ನಮಸ್ಕಾರ,

ಕಾರಣವಲ್ಲದ ಕಾರಣಕ್ಕಾಗಿ ಭೌಗೋಳಿಕವಾಗಿ ಇಡೀ ಮಾನವ ಸಮಾಜ ಅನೇಕ ದೇಶಗಳಾಗಿ ವಿಭಜನೆಯಾಗಿದೆ.

ಮಾನವನ ಒಳಿತು ಮಾತ್ರವಲ್ಲ, ಇಡೀ ವಿಶ್ವದ ಶ್ರೇಯಸ್ಸಿಗಾಗಿ ಇರುವ ಧರ್ಮ, ಹುಟ್ಟು-ಸಾವಿನಿಂದ ಬಿಡುಗಡೆಗೆ ಸಹಾಯ ಮಾಡಲು ಹೊರಟ ಮತಗಳು ಕಾರಣಾಂತರಗಳಿಂದ ಬಂಧನವೆನಿಸಿವೆ. ಈ ಕ್ಷೇತ್ರವು ಅತ್ಯಂತ ಸೂಕ್ಷ್ಮ ವಿಭಜನೆ ಯಾಗಿದೆ.

ಇನ್ನು ಜಾತಿ-ಮತ-ಪಂಥ-ಭಾಷೆಯಾಗಿ ವಿಭಜನೆಯಾಗಿದೆ. ಇದಲ್ಲದೇ ಭಾಷಾ ಅಲ್ಪಸಂಖ್ಯಾತರು, ಮತೀಯ ಅಲ್ಪಸಂಖ್ಯಾ ತರು, ಹಿಂದುಳಿದವರು, ಪರಿಶಿಷ್ಟ ಜಾತಿ-ಪಂಗಡ, ಅವುಗಳಲ್ಲಿ ಸೇರ್ಪಡೆಗಾಗಿ ಹೋರಾಡುತ್ತಿರುವ ಒಳಜಾತಿ-ಪಂಗಡಗಳು, ಹೀಗೆ ವಿಭಜನೆಯಲ್ಲಿ ಮರು ವಿಭಜನೆ ನಡೆದಿದೆ.

ಇಷ್ಟು ಸಾಕಲ್ಲ ದುಷ್ಟ-ಸ್ವಾರ್ಥ-ಭ್ರಷ್ಟ-ಲಾಭಕೋರ- ಪಟ್ಟಭದ್ರ-ಅನಾಗರಿಕ-ಅನಾರೋಗ್ಯ ಪೀಡಿತ ಸಮಾಜ ವಿರೋಧಿಗಳಿಗೆ-ಮನೋವಿಕಾರಿಗಳಿಗೆ! ಈ ವಿಭಜನೆಯೇ ಇವರೆಲ್ಲರ ಬಂಡವಾಳ. ತಮ್ಮ ಹಿತಸಾಧನೆಗೆ ಈ ಎಲ್ಲಾ ಶಕ್ತಿಗಳು ವಿಭಜನೆಯನ್ನು ಸದಾ ಜೀವಂತವಾಗಿರಲು ಶಕ್ತಿಮೀರಿ ಪ್ರಯತ್ನಿಸುತ್ತಲೇ ಇರುತ್ತಾರೆ. ಎಲ್ಲರ ಗಮನಕ್ಕೂ ಬಂದಿರಬಹುದಾದ ವಿಷಯವೆಂದರೆ ಈ ರಾಜಕೀಯದವರಿಂದಾಗಲಿ, ಯಾವುದೇ ಸಾಂಸ್ಕೃತಿಕ ಆಶಯಗಳಿಗಾಗಲಿ ಧರ್ಮದ ಬಗ್ಗೆಯಾಗಲಿ, ಜನರ ಸುಖದ ಬಗ್ಗೆಯಾಗಲಿ, ಸಮಸ್ಯೆಗಳ ಬಗ್ಗೆಯಾಗಲಿ, ಭಾಷೆಯ ಬೆಳವಣಿಗೆ ಬಗ್ಗೆಯಾಗಲಿ ಕಾಳಜಿ, ಹೋರಾಟ ವೆಂಬುದು ಕೇವಲ ತೋರಿಕೆ. ಹಾಗೇ ಹಿಂದು-ಮುಸ್ಲಿಂ ಸಂಸ್ಥೆ ಗಳಿಂದಾಗಲಿ, ಆಯಾ ಜನರ ಬದುಕನ್ನು ಹಸನುಗೊಳಿಸುವುದಾಗಲಿ, ನೆಮ್ಮದಿಯ ಬದುಕು ನೀಡುವುದಾಗಲಿ Superficial state. ಅದರಂತೆ ಹಿಂದುಳಿದ, ದಲಿತರ ಬಗ್ಗೆ ಕೂಡ ಅಷ್ಟೇ.

ಅತ್ಯಂತ ಸೂಕ್ಷ್ಮ-ಮಾನವೀಯ, ಸಂವೇದನಶೀಲ ಮೃದು ಮನಸ್ಸಿನ ಕ್ಷೇತ್ರಗಳಾದ ಸಂಗೀತ, ಸಾಹಿತ್ಯ, ನಾಟಕ, ಭಾಷೆ ಇಂದು ಎಂತೆಂಥವರ ಕೈಯಲ್ಲಿದೆ? ಹಾಗೆ ನೋಡಿದರೆ ಧರ್ಮ-ರಾಜಕೀಯ ಹಾಗೂ ರಾಜ್ಯಾಂಗ-ನ್ಯಾಯಾಂಗ- ಕಾರ್ಯಾಂಗಗಳನ್ನೊಳಗೊಂಡಂತೆ ಬದುಕಿನ ಸಮಗ್ರ ಕ್ಷೇತ್ರಗಳನ್ನು ನಾನಾ ವೇಷ, ಮುಖವಾಡ, ಬಣ್ಣ ಧರಿಸಿದ ಜನರು ೧೯೪೭ ರಿಂದ ಈವರೆಗೂ ಯಾವ ಸಮಸ್ಯೆಯೂ ಬಗೆಹರಿಯಲಾರದಂತೆ ನೋಡಿಕೊಳ್ಳುತ್ತಿದ್ದಾರೆ.

ದುರಂತವೆಂದರೆ, ಈ ಸೂಕ್ಷ್ಮತೆಯನ್ನು ಅರಿತೋ, ಅರಿಯದೆಯೋ ಅಥವಾ ಅರಿಯದಂತೆ ನಟಿಸುತ್ತಲೋ ಅಥವಾ ತಮ್ಮ ಕೃತ್ಯಗಳಿಗೆ ಸಮರ್ಥನೆಯನ್ನು ನೀಡುತ್ತಾ ಈ ಮೇಲಿನ ಒಂದಲ್ಲ ಒಂದು ಗುಂಪಿಗೆ ವೈಚಾರಿಕತೆ, ಮಾನವೀಯತೆ ಹಾಗೂ ಸೂಕ್ಷ್ಮತೆಯಿರುವವರೂ ಕೂಡ ಬಂಬಲಿಸುತ್ತ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನಾವು ಒಂದು ಮಾತನ್ನು ನೆನಪಿನಲ್ಲಿಡಬೇಕು. ಯಾವುದೇ ಕಾಲದಲ್ಲಾಗಲಿ ಸಮಾಜವನ್ನು ಮುನ್ನಡೆಸುವುದು ಒಂದು ಅಲ್ಪಸಂಖ್ಯಾತ, ಬುದ್ಧಿವಂತ, ಮಾನವಂತ, ನೀತಿವಂತ ವರ್ಗ. ಆ ವರ್ಗದ

ಸಂಖ್ಯೆ ಕಡಿಮೆಯಾದರೆ, ಅಥವಾ ಅವರಲ್ಲಿ ಬುದ್ಧಿವಂತಿಕೆ-ತರ್ಕ ಮಾತ್ರವಿದ್ದು ಅಂತಃಕರಣ, ನೈತಿಕತೆ ನಶಿಸಿದರೆ, ಕಡಿಮೆಯಾದರೆ ಇಡೀ ಸಮಾಜ ಅಯೋಗ್ಯರ ಕೈಯಲ್ಲಿ ಇಡಿ ರಾಜ್ಯ ಮತ್ತು ಅದರ ಅಂಗ ಸಂಸ್ಥೆಗಳು ಹಾಗೂ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಇವರದೇ ಪರಮಾಧಿಕಾರ. ಇದರಿಂದಾಗಿ ಇಡೀ ಪ್ರಜಾಪ್ರಭುತ್ವವೆನ್ನುವುದು ದೊಡ್ಡ ಅಣಕವಾಗಿದೆ. ಎಲ್ಲದಕ್ಕೂ ಕುತರ್ಕ ಇಲ್ಲವೇ ಅಪವ್ಯಾಖ್ಯಾನಗಳು. ಹೀಗಾಗಿ ಹಿಂಸೆ ಮತ್ತು ಅಸಂವಿಧಾನಾತ್ಮಕ ಕಾರ್ಯಗಳು ಇಂದು Law of the land ಆಗಿದೆ. ಭ್ರಷ್ಟಾಚಾರವೆನ್ನುವುದು ಕೂಡ ಸರ್ವೇಸಾಮಾನ್ಯ ವಿಷಯವಾಗಿದೆ. ಆದರೆ ಗಂಭೀರತೆಯನ್ನು ಕಳೆದುಕೊಂಡಿದೆ. ೫೦೦೦ ಕೋಟಿ ಆಸ್ತಿ ಮಾಡಿದ್ದಾನೆ, ಒಬ್ಬ ಕ್ಲರ್ಕ್ ೨ ಕೋಟಿ ಅಕ್ರಮ ಆಸ್ತಿ ಹೊಂದಿದ್ದಾನೆ ಅಂದರೆ ಯಾರೂ ಹುಬ್ಬೇರಿಸುವುದಿಲ್ಲ.

ಆಚಾರವಿಹೀನರು ಧರ್ಮದಲ್ಲಿ ಕನಿಷ್ಟ ನೈತಿಕತೆಯಿಲ್ಲದವರೂ ಬದುಕಿನ ಎಲ್ಲ ರಂಗಗಳಲ್ಲಿ ವಿರಾಜಮಾನರಾಗಿದ್ದಾರೆ.

ಇಷ್ಟಾದರೂ ನಾವೆಲ್ಲಾ ಒಂದಲ್ಲ ಒಂದು ಈ ಸಂಸ್ಥೆ-ವ್ಯಕ್ತಿಗಳೊಂದಿಗೆ ಗುರುತಿಸಿಕೊಂಡಿರುತ್ತೇವೆ. ಇಲ್ಲವೇ ಸಾಂದರ್ಭಿಕವಾಗಿ ಸಮರ್ಥನೆಯೊಂದಿಗೆ ಈ ಸಂಸ್ಥೆ ಅಥವಾ ವ್ಯಕ್ತಿ ಅಥವಾ ವ್ಯಕ್ತಿ ಅಥವಾ ರಾಜಕೀಯ ಪಕ್ಷಕ್ಕೆ ಬೆಂಬಲಿಸುತ್ತೇವೆ.

ಇದರಿಂದಾಗಿ ಜನರು ಕೂಡ ನೈತಿಕತೆಯನ್ನು ಕಳೆದುಕೊಂಡಿದ್ದಾರೆ. ಅಷ್ಟೇ ಅಲ್ಲ ಭ್ರಷ್ಟತೆಯಿಂದ ದೂರವಿದ್ದ ಕೆಲವು ವ್ಯಕ್ತಿಗಳು– ಸಂಸ್ಥೆಗಳು ಕೂಡ ಕಾಲುಜಾರಿವೆ. ಪಾಪ ಅವರಾದ್ರು ಎಷ್ಟು ದಿನ ತ್ಯಾಗ ಮಾಡ್ತಾರೆ? ಅಷ್ಟು ದಟ್ಟವಾಗಿದೆ ಈ ಭೌತಿಕವಾದದ ಪ್ರಭಾವ ಅಥವಾ ಲೌಕಿಕ ಸುಖದ ಪ್ರಭಾವ.

ಹಾಗಂತ ಇಡೀ ಸಮಾಜವೇ ಭ್ರಷ್ಟವಾಗಿದೆಯೆಂದು ನನ್ನ ವಾದವಲ್ಲ. ಆದ್ದರಿಂದಲೇ ಪ್ರಜ್ಞಾವಂತ ಸಾತ್ವಿಕರೆಲ್ಲಾ ಈಗಿರುವ ಸ್ಥಿತಿಯಿಂದ ಹೊರಬಂದು, ಒಂದು ಒಳ್ಳೆಯ ಮಾನವ ಸಮಾಜದ ನಿರ್ಮಾಣದತ್ತ ಕೊನೇಪಕ್ಷ ಬೌದ್ಧಿಕ ಮಟ್ಟದಲ್ಲಾದರೂ (Intellectual Level) ಒಂದು ನೂತನ ಹಾಗೂ ಅರ್ಥಪೂರ್ಣ ವೇದಿಕೆಯನ್ನು ಪ್ರಾರಂಭಿಸುವ ಅವಶ್ಯಕತೆ ಖಚಿತವಾಗಿಯೂ ಇದೆ. ಇದು ನನ್ನ ದೃಢವಾದ ನಂಬಿಕೆ.

ಹಾಗಂತ ಇದಾವುದೇ ರಾಜಕೀಯ ಪಕ್ಷ ಕಟ್ಟುವುದಲ್ಲ. ಯಾವುದೇ ಸಿದ್ಧಾಂತಗಳ ಪರ-ವಿರೋಧದ ಚಳುವಳಿಯಲ್ಲ. ಇದೊಂದು ಸತ್ಯದ ಮಾರ್ಗವಾಗಿದೆ. ನಡೆಯಾಗಿದೆ, ಗುರಿಯಾಗಿದೆ ಮತ್ತು ಗಮ್ಯವೂ ಆಗಿದೆ.

ಕವನ ರಚಿಸುವುದೊಂದೇ ಅಲ್ಲ, ಅದನ್ನು ಕಂಪೋಜ್ ಮಾಡಿ ಹಾಡುವುದೊಂದೇ ಅಲ್ಲ ಕವನದ ಆಶಯಗಳನ್ನು ಕಾರ್ಯರೂಪದಲ್ಲಿ ತರುವ ಪ್ರಯತ್ನ ಕೂಡ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕ-ಮನುಷ್ಯ ಜೀವಿಯ ಕರ್ತವ್ಯ ಆಗಿದೆ ಎಂದು ನಂಬುತ್ತೇನೆ. ಒಂದು ಆರೋಗ್ಯವಂತ, ನಾಗರಿಕ-ಸುಂದರ ಸಮಾಜ ಕಟ್ಟಲು ಮುಖ್ಯವಾಗಿ ನಾವು ಈಗ ನಂಬಿರುವ ತಾತ್ವಿಕ ನಂಬಿಕೆಗಳ ಪುನರ್ ವಿಮರ್ಶೆ ಅವಶ್ಯ. ಅವುಗಳ relevancy ಬಗ್ಗೆ ಯೋಚಿಸಬೇಕಾಗಿದೆ. ಒಬ್ಬ ಕಟ್ಟಾ ಹಿಂದುವಾದಿಯಾಗಲಿ, ಸಮತಾವಾದಿಯಾಗಲಿ, ಮತ್ತೇನೇ ನಂಬಿಕೆಗಳಿರಲಿ, ತನ್ನ ದ್ವೀಪದಿಂದ ಹೊರಬಂದು ಒಮ್ಮೆ ಈಗಿರುವ ತಾತ್ಕಾಲಿಕ ಸಮಸ್ಯೆಗಳನ್ನು ನೋಡಲಿ; ಅಂತಃಕರಣ ಮಿಡಿದರೆ ಆಗ ನೈಜ ಸ್ಥಿತಿಯ ಅರಿವಾದೀತು.

ಒಂದು ಪ್ರಜ್ಞಾವಂತ ನಾಗರಿಕನ ಕರ್ತವ್ಯವನ್ನು ನಾವು ಮಾಡಬೇಕಾಗಿದೆ. ಒಣ ಧಿಮಾಕು, ದೊಡ್ಡಸ್ತಿಕೆ, ಬುದ್ಧಿ ಪ್ರದರ್ಶನದ ಚಾಪಲ್ಯ ಇತ್ಯಾದಿ ಕೀಳು ಅಭಿರುಚಿ ಇಲ್ಲದೆ ಉತ್ತಮ ಚಿಂತನೆಯ ವೇದಿಕೆಯೊಂದರ ಅವಶ್ಯಕತೆ ಇದೆ.

ಇಲ್ಲಿ ಸಮಾಜವಾದಿಯಿರಲಿ, ಆಸ್ತಿಕನಾಗಿರಲಿ, ಸಂಗೀತಗಾರನಾಗಿರಲಿ, ಕಲಾವಿದನಿರಲಿ, ರೈತರಾಗಿರಲಿ, ಕಾರ್ಮಿಕನಿರಲಿ, ಕೂಲಿಕಾರನಿರಲಿ ಇವರಲ್ಲಿರಬೇಕಾದ ಸಮಾನಂಶವೆಂದರೆ ಒಳ್ಳೆತನ(ಇದರ Definition ಮಾಡುವುದು ಸ್ವಲ್ಪ ಕಸರತ್ತಿನ ಕೆಲಸ – ಚರ್ಚೆಯಿಂದ ಇತ್ಯರ್ಥ ಮಾಡಬಹುದು. ಸದ್ಯ 'ಸಾತ್ವಿಕ' ಎಂದು ಬಳಸಬಹುದು) ಇವರು ಒಟ್ಟುಗೂಡಬೇಕು. ಅದಕ್ಕಾಗಿ ಸಾತ್ವಿಕರೆಲ್ಲಾ ಒಂದು ನೈತಿಕ ನೆಲೆಗಟ್ಟಿನ ಮೇಲೆ ಒಂದುಗೂಡಿ, ಮಾನವೀಯತೆಯ ಆಧಾರದ ಮೇಲೆ ಯಾವುದೇ 'ಇಸಂ'ಗಳ ಹಠಮಾರಿ ಪ್ರಭಾವವಿರದೇ(ಹಂಗಿಲ್ಲದೇ) ಒಂದು ಆರೋಗ್ಯಕರ, ಅರ್ಥಪೂರ್ಣ, ಕನಿಷ್ಠ ನಾಗರಿಕ ಸೌಲಭ್ಯ ಕಲ್ಪಿಸುವ ಸಮಾಜ ನಿರ್ಮಾಣದತ್ತ ಪ್ರಯತ್ನಿಸಬಹುದು. ಸೈದ್ಧಾಂತಿಕತೆಯ ಹೆಸರಲ್ಲಿ ನಾವು ಸತ್ಯಕ್ಕೆ ಅಪಚಾರ ಮಾಡುತ್ತಿದ್ದೇವೆ. ಸ್ವಲ್ಪ ಉದಾರಗುಣದಿಂದ, ಸೈದ್ಧಾಂತಿಕ-ರಾದ್ಧಾಂತಗಳನ್ನು ಬಿಟ್ಟು ಒಂದು liberal ಗುಂಪಿನ ರಾಷ್ಟ್ರೀಯವಾದದ ಅವಶ್ಯಕತೆಯಿದೆ. ಈಗಿರುವ ಸಮಸ್ಯೆಗಳಿಗೆ ಬೇಕಾಗಿರುವುದು ಸೈದ್ಧಾಂತಿಕ ಚಿಂತನೆಗಳಲ್ಲ, ಈಗಿರುವ ಸಮಸ್ಯೆಗಳಿಗೆ ಎಡ-ಬಲ-ವಾಮ-ತಂತ್ರ-ಶಿಷ್ಟ ಇತ್ಯಾದಿ ವರ್ಗೀಕರಣವಲ್ಲ, ಬದಲಾಗಿ ಮುಖ್ಯವಾಗಿರಬೇಕಾದುದು ಕೇವಲ ಕಾಳಜಿ. ಹೆಣ ಮುಂದಿರಬೇಕಾದರೆ ಅದರ ಸಂಸ್ಕಾರ ಮುಖ್ಯವಾಗಿರಬೇಕು, ಚರ್ಚೆಯಲ್ಲ. ರಸ್ತೆ ಶುದ್ಧವಾಗಲು ಕಸ ಬಳಿಯಬೇಕಷ್ಟೇ, ವಿಚಾರವಲ್ಲ, ಅದು ಆರ್ಥಿಕ ವಿಷಯವಾಗಲಿ, ಸಾಮಾಜಿಕ ವಿಚಾರವಾಗಲಿ, ರಾಜಕೀಯವಾಗಲಿ, ಒಟ್ಟಾರೆಯಾಗಿ ಸಮಾಜದ ಸಜ್ಜನರ ಹಿತವನ್ನು ಗುರಿಯಾಗಿಟ್ಟುಕೊಂಡು ಸಮಾಜ ಘಾತುಕರ-ಸ್ವಾರ್ಥಿಗಳ ಕೈಯಲ್ಲಿ ಸಮಾಜವನ್ನು ನೀಡದಂತೆ ನಿಗಾವಹಿಸುವ ಕಾಯುವ ಕಾವಲುಗಾರರ ಕಾರ್ಯ ಮಾಡಬೇಕಾಗಿದೆ.

ಬಿ.ವೆಂಕಣ್ಣ
ವಕೀಲರು, ಈಶಾವಾಸ್ಯಂ
೬ನೇ ಮೇನ್, ಬಸವೇಶ್ವರ ಬಡಾವಣೆ
ಹೊಸಪೇಟೆ - ೫೮೩ ೨೦೧
ಬಳ್ಳಾರಿ ಜಿಲ್ಲೆ, ಮೊಬೈಲ್: ೯೭೪೨೯೯೨೫೫

ಚಂದಾದಾರರಲ್ಲಿ ಒಂದು ಮಾತು

- ಎಂ.ಓ. ಮೂಲಕ ಚಂದಾ ಕಳುಹಿಸುವವರು ಕೌಂಟರ್ ಫಾಯಿಲ್‌ನಲ್ಲಿ ತಪ್ಪದೆ ನಿಮ್ಮ ಹೆಸರು, ಚಂದಾ ಸಂಖ್ಯೆ, ವಿಳಾಸ ಬರೆಯಿರಿ. ಹೊರ ಊರಿನ ಚೆಕ್ ಕಳುಹಿಸುವವರು ರೂ. ೩೫/- ಹೆಚ್ಚಿಗೆ ಕಳುಹಿಸಿ. 'ಸಂಚಯ'ದ ಹೆಸರಿಗೆ ನಿಮ್ಮ ಚೆಕ್, ಡಿ.ಡಿ. ಕಳುಹಿಸಬಹುದು.
- ನಿಮ್ಮ ವಿಳಾಸ ಬದಲಾದಲ್ಲಿ ದಯವಿಟ್ಟು ಒಂದು ಕಾರ್ಡು ಹಾಕಿ. ನಮ್ಮ ಸಮಯ, ಶ್ರಮ ಸುರಿದು ರೂಪಿಸಿದ ಪತ್ರಿಕೆಯ ಪ್ರತಿಗಳು ವ್ಯರ್ಥ ವಾಪಸ್ಸಾಗುವುದು, ಬೇಡದ ಜಾಗಗಳಲ್ಲಿ ಕೊಳೆಯುವುದು ಬೇಡ.
- ಪುಸ್ತಕ ವಿಮರ್ಶೆ/ಪರಿಚಯಕ್ಕೆ ಎರಡು ಪ್ರತಿಗಳನ್ನು ಕಳುಹಿಸಿ.
- ನಿಮ್ಮ ಸ್ನೇಹಿತರನ್ನು, ಗೆಳೆಯರನ್ನು ಆಸಕ್ತಿ ಇರುವವರನ್ನು ಸಂಚಯಕ್ಕೆ ಚಂದಾದಾರರನ್ನಾಗಿ 'ಸಂಚಯ ಸ್ನೇಹವಲಯ' ವಿಸ್ತರಿಸಿ.
- ನಿಮ್ಮ ಬರಹಗಳು ಮತ್ತು ಸಂಚಯ ಕುರಿತ ಅನಿಸಿಕೆ ಅಭಿಪ್ರಾಯಗಳಿಗೆ ಸ್ವಾಗತವಿದೆ.



ನೆಹರು
ರಾಜೀನಾಮೆ
ಹಿಡಿದು...



ಸಂಚಯ ಗ್ಯಾಲರಿ

ಗೊಮ್ಮಟೇಶ್ವರ ಶಿಲ್ಪ ಕೆತ್ತನೆ....

ಚಿತ್ರ ಕೃಪೆ: ವಿವಿಧ ಮೂಲಗಳಿಂದ

SANCHAYA (Bi-Monthly), MAG(2) PRB-DECL : 309/94-95

ನಿನ್ನದೇ ಮೌನದೊಡನೆ ನಾನು ಮಾತನಾಡುವಂತಾಗಲಿ,
ಆ ಮೌನ ಬೆಳಗುವ ದೀಪದಂತೆ, ಕೈಬೆರಳ ಉಂಗುರದಂತೆ ಸುಂದರ.
ಸ್ತಬ್ಧ, ಚುಕ್ಕೆಗಳಿಂದೊಡಮೂಡಿದ ನೀನು ರಾತ್ರಿಯಂತೆ
ಬಹುದೂರದ ನಿಷ್ಕಪಟ ನಕ್ಷತ್ರ ನಿನ್ನ ಮೌನ

– **ಪಾಬ್ಲೊ ನೆರೂಡ**

ಕನ್ನಡಕ್ಕೆ : ಜ.ನಾ.ತೇಜಶ್ರೀ

Edited, Printed & Published by
D.V. PRAHLAD,
No. 100, 2nd Main, 6th Block
3rd Stage, 3rd Phase, Banashankari,
Bangalore - 560 085, Ph : 080-2679 1925